ಅಧ್ಯಕ್ಷರು.—ಆರೋಗ್ಯ ಮಂತ್ರಿಗಳು ಊರಲ್ಲಿ ಇಲ್ಲ, ನಾಳೆದಿವಸ ಅವರು ಬರುತ್ತಾರೆ, ಬಹುಶಃ ನಾಳೆ ಈ ವಿಷಯ ಎತ್ತಿದರೆ ಅವರು ಉತ್ತರ ಹೇಳಬಹುದು.

ಶ್ರೀ ಹೆಚ್. ಡಿ. ದೇವೇಗೌಡ.—ನಾಳೆಯೇ ಹೇಳಲಿ, ಸಭೆ ಮುಂದಕ್ಕೆ ಹೋಗುವುದಕ್ಕಿಂತ ಮುಂಚೆ ತೀರ್ಮಾನ ಮಾಡುವುದು ಒಳ್ಳೆಯದು. ಸತ್ಯಾಗ್ರಹ ಮುಂದುವರಿಯುವುದು ಬೇಡ ಬೇಡಿಕೆಗಳನ್ನು ಪರಿಶೀಲನೆ ಮಾಡಿ ಹೇಳಿಕೆ ಕೊಡುವುದು ಬಹಳ ಒಳ್ಳೆಯದು.

ಅಧ್ಯಕ್ಷರು.—ಮಾನ್ಯ ಸದಸ್ಯರು ನೋಟೀಸ್ ಕಳುಹಿಸಿಕೊಡಬಹುದು.

ಶ್ರೀ ಹೆಚ್. ಡಿ. ದೇವೇಗೌಡ.—ಆರ್ಡಿನೆನ್ಸ್ ಕೊಡುವುದಕ್ಕಾಗುವುದಿಲ್ಲವೆಂದು ಟೆಕ್ನಿಕಲ್ ಕಾಲೇಜುಗಳಲ್ಲಿ ನಿರ್ಣಯ ಮಾಡಿದ್ದಾರೆ, ತುರ್ತು ಪರಿಸ್ಥಿತಿಯಲ್ಲಿ ಕೆಲವು ವಿಶ್ವವಿದ್ಯಾನಿಲಯಗಳು ನಿರ್ಣಯ ಮಾಡಿವೆ. ಕೆಲವು ಬೇಡಿಕೆಗಳ ಬಗ್ಗೆ ಮಂತ್ರಿಗಳ ಜೊತೆ ಕೂತು ಚರ್ಚೆ ಮಾಡಿದ್ದೇನೆ. ನಿರ್ಣಯ ಮಾಡುವುದರಿಂದ ಯಾವುದೇ ಒಂದು ಅನಾಹುತವೂ ಆಗುವುದಿಲ್ಲ. ಯಾವುದೇ ರೀತಿಯಿಂದಲೂ ವಿದ್ಯಾರ್ಥಿಗಳನ್ನು ಪ್ರಚೋದನೆ ಮಾಡಬೇಕೆಂದು ಏನೂ ಇಲ್ಲ. ನಿರ್ಣಯ ಆಗುವುದರ ಮುಖೇನ ಅವರಿಗೆ ಸಮಾಧಾನ ತರತಕ್ಕ ರೀತಿಯಲ್ಲಿ ಯೋಗ್ಯ ದೃಷ್ಟಿಯಿಂದ ಸರ್ಕಾರ ಸಹಕರಿಸಬೇಕು ನಾಳೆ ಸರ್ಕಾರದ ಪರವಾಗಿ ಬಹುಶಃ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆ ಎಂದು ಕಾಣುತ್ತದೆ, ಹೇಗಾದರೂ ಮಾಡಿ ತಾವು ಉತ್ತರ ಕೊಡಿಸಬೇಕು.

Motion of Thanks to the Governors Address

Debate Continued.

† ಶ್ರೀ ಹೆಚ್. ಡಿ. ಕೃಷ್ಣಪ್ಪ (ನಾಗಮಂಗಲ).—ಮಾನ್ಯ ಅಧ್ಯಕ್ಷರೇ, ನಿನ್ನೆ ದಿವಸ ನಾನು ಮಾತನಾಡುತ್ತಾ, ತುರ್ತುಪರಿಸ್ಥಿತಿ ಕಾಲದಲ್ಲಿ ಆದಂತ ತೊಂದರೆಗಳು ಏನು ಎನ್ನುವುದರ ವಿಚಾರದಲ್ಲಿ ಮಾನ್ಯ ವಿರೋಧ ಪಕ್ಷದ ಸ್ನೇಹಿತರು ಭೂತ ಕನ್ನಡಿಯ ಮೂಲಕ ತೋರಿಸಿ ಆದಂತಪ್ರಯೋಜನಗಳಿಗೆ ಲಕ್ಷ್ಯ ಕೊಡದೇ ಇರುವುದು ಬಹಳ ವಿಷಾದನೀಯ. ಸಂತಾನ ಹರಣ ಚಿಕಿತ್ಸೆ ಬಗ್ಗೆ ಒಂದು ವಿಚಾರವನ್ನು ನಮ್ಮ ಸ್ನೇಹಿತರು ತಿಳಿದುಕೊಳ್ಳಬೇಕು. ಗುರಿಯನ್ನು ಮುಟ್ಟುವಂತ ಅವಸರದಲ್ಲಿ ಅಧಿಕಾರಿಗಳು ಅಚಾತುರ್ಯ ಮಾಡಿದ್ದಾರೆ; ಅವನ್ನು ಸರ್ಕಾರ ಕೂಡ ಒಪ್ಪಿದೆ. ಜವಾಬ್ದಾರಿ ಸ್ಥಾನದಲ್ಲಿರತಕ್ಕ ನಾವುಗಳು ಒಂದು ವಿಚಾರವನ್ನು ಅರಿತುಕೊಳ್ಳಬೇಕು, ಕಳೆದ ಮೂವತ್ತು ವರ್ಷಗಳಲ್ಲಿ ರಾಷ್ಟ್ರದಲ್ಲಿ ಜನಸಂಖ್ಯೆ ಒಂದಕ್ಕೆ ಎರಡು ಪಟ್ಟು ಹೆಚ್ಚಾಗಿದೆ. ಇದನ್ನು ನಾವು ಯಾರು ಮರೆಯಕೂಡದು; ಮರೆತರೆ ದೇಶಕ್ಕೆ ದ್ರೋಹ ಮಾಡಿದಂತಾಗುತ್ತದೆ.

ಅಧ್ಯಕ್ಷರು.—ಐದು ನಿಮಿಷದಲ್ಲಿ ತಾವು ಭಾಷಣ ಮುಗಿಸಬೇಕು.; ಎರಡು ಕಡೆ ವಿಪ್ ಗಳಿಂದ 25 ಜನರ ಹೆಸರುಗಳನ್ನು ಕೊಟ್ಟಿದ್ದಾರೆ.

ಶ್ರೀ ಹೆಚ್. ಡಿ. ಕೃಷ್ಣಪ್ಪ.—ಮಾನ್ಯ ಅಧ್ಯಕ್ಷರೇ, ನಾನು ಅಪರೂಪಕ್ಕೆ ಮಾತನಾಡುತ್ತಿದ್ದೇನೆ. ನಮ್ಮ ಸ್ನೇಹಿತರು ತುರ್ತುಪರಿಸ್ಥಿತಿ ಕಾಲದಲ್ಲಿ ಸುಮಾರು 2,000 ಕೋಟಿ ರೂಪಾಯಿ ಕಪ್ಪು ಹಣವನ್ನು ಎಳೆಯಲಾಯಿತು, ಅಷ್ಟೇ ಅಲ್ಲದೆ. ಕಳ್ಳ ಸಾಗಾಣಿಕೆ ಮಾಡಿ ದೇಷದ್ರೋಹ ಚಟುವಟಿಕೆಯಲ್ಲಿ ನಿರತರಾಗಿದ್ದವರನ್ನು ಹಿಡಿಯಲಾಯಿತು, ಇದೆನ್ನೆಲ್ಲಾ, ಮರೆತಿದ್ದಾರೆ ಇಪತ್ತು ರಾಜಕೀಯ ಕೈದಿಗಳನ್ನು ಬಿಟ್ಟ ಹಾಗೆ ಆರ್ಥಿಕ ಅಪಾದನೆಗೆ ಗುರಿಯಾದವರನ್ನು ಬಿಟ್ಟಿರತಕ್ಕದನ್ನು ಇತ್ತೀಚೆಗಿನ ದಿನಗಳಲ್ಲಿ ನಾವು ಕಾಣಿದ್ದೇವೆ. ಮಾನ್ಯ ಅಧ್ಯಕ್ಷರೇ, ಒಂದು ವಿಚಾರವನ್ನು ತಮ್ಮಲ್ಲಿ ಬಿನ್ನವಿಸಿ ಕೊಳ್ಳುತ್ತೇನೆ. ದೇಶದಲ್ಲಿ ನಮಗೆ ನಿಜವಾಗಿಯೂ ಪ್ರಗತಿ ಬೇಕಾದರೆ ಸ್ವಾತಂತ್ರ್ಯಕ್ಕೆ ಸೀಮಾರೇಖೆಯನ್ನು ಗೊತ್ತುಮಾಡಲೇಬೇಕು. ಅಂಕೆಯಿಲ್ಲದೆ ಇರತಕ್ಕ ಸ್ವಾತಂತ್ರ್ಯದಿಂದ ಸ್ವಚಂದ ಪ್ರವೃತ್ತಿಗೆ ಎಡೆಮಾಡಿಕೊಟ್ಟಾಂತಾಗುವುದಲ್ಲದೆ ಪ್ರಗತಿಗೆ ತಾತ್ಕಾಗುತ್ತದೆಂಬುದನ್ನು ಮರೆಯಬಾರದು. ಈಗಾಗಲೇ ಹೌಸ್ ಸರ್ಜನ್ ಸ್ಟ್ರೈಕ್, ವಿದ್ಯಾರ್ಥಿಗಳ ಸ್ಟ್ರೈಕ್ ಷುರುವಾಗಿದೆ. ನಿಯಮ ನಿಬಂಧನೆ ಇಲ್ಲದ ಸ್ವಾತಂತ್ರ್ಯದಿಂದ ಆಗತಕ್ಕ ತೊಂದರೆಗಳನ್ನು ನಾವು ಚರಿತ್ರೆಯಲ್ಲಿ ಕಂಡುಕೊಂಡಿದ್ದೇವೆ. ಆದರೆ, ತುರ್ತುಪರಿಸ್ಥಿತಿ ಕಾಲದಲ್ಲಿ ಸರ್ಕಾರ ಹಾಕಿದಂತ ನಿಬಂಧನೆಗಳು ಹೆಚ್ಚಾಯಿತೋ, ಕಡಿಮೆ ಆಯಿತೋ, ಅದರ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ

ನಾನು ಹೋಗುವುದಿಲ್ಲ. ಆದರೆ ಯಾವುದೇ ಒಂದು ದೇಶ, ರಾಜ್ಯ ಅಂಕೆ ಮತ್ತು ನಿಬಂಧನೆ ಇರತಕ್ಕ ಸ್ವಾತಂತ್ರ್ಯದಲ್ಲಿ ಒಳ್ಳೆಯ ಕೆಲಸವನ್ನು ಮಾಡುವುದಕ್ಕೆ ಸಾಧ್ಯವೇ ಹೊರತು; ಅದು ಇಲ್ಲದೇ ಬೇರೆ ರೀತಿಯಿಂದ ಮಾಡುವುದಕ್ಕೆ ಸಾಧ್ಯವಿಲ್ಲ ಎನ್ನುವ ಮಾತನ್ನು ಈ ಸಮಯದಲ್ಲಿ ಮಾನ್ಯ ಸದಸ್ಯರಿಗೆ ತಮ್ಮ ಮೂಲಕ ತಿಳಿಸಬಯಸುತ್ತೇನೆ. ಇದೇ ಸಂದರ್ಭದಲ್ಲಿ ಒಂದು ಹೇಳುತ್ತೇನೆ. ಚುನಾವಣೆ ಕಾಲದಲ್ಲಿ ನಮ್ಮ ಸ್ನೇಹಿತರು ಮಾಡಿದಂತ ಭಾಷಣ ಸಂತಾನ ಶಸ್ತ್ರ ಚಿಕಿತ್ಸೆ ಬಗ್ಗೆ ಮಾತ್ರ ಮಾಡಿರುತ್ತಾರೆ. ಅರ್ಥಿಕ ಶಾಸ್ತ್ರಜ್ಞ ಮಾಲ್ತಸ್ ಜನಸಂಖ್ಯೆ ವೇಗವೃದ್ಧಿ ಯಾವ ರೀತಿ ನಡೆಯುತ್ತದೆ ಎನ್ನುವುದರ ಬಗ್ಗೆ ಹೇಳಿದ್ದಾರೆ ಅದೇರೀತಿ ಉತ್ಪನ್ನ ಸಾಧನಗಳ ಒಂದು ಅಭಿವೃದ್ಧಿ ವೇಗವನ್ನು ಅರ್ಥ ಮಾಡಿಕೊಳ್ಳದೇ ರ್‍ಯಾಪಿಯೋ ಹೇಳಿದ್ದಾರೆ. ಇವತ್ತು ಜನಸಂಖ್ಯೆ 1 : 2 ÷ 4 : 8 ; 16 ಇದು ಪ್ರಪಂಚವ ನಾನಾ ಭಾಗಗಳಲ್ಲಿರತಕ್ಕ ಜನಸಂಖ್ಯೆಯ ವೇಗವನ್ನು ಅಧ್ಯಯನ ಮಾಡಿ ಬಂದಿರತಕ್ಕ ಒಂದು ಸಿದ್ಧಾಂತ, ಈ ಸಿದ್ಧಾಂತವನ್ನು ಬಿಟ್ಟು ಇದುವರೆವಿಗೂ ಯಾರು ಯಶಸ್ವಿಯಾಗಿಲ್ಲ ಎಂಬುದನ್ನು ಯಾರು ಮರೆಯಬಾರದು. ಅಧ್ಯಕ್ಷರೆ, ಈಗ ರಾಜನಾರಾಯಣ್ ರವರ ಬಗ್ಗೆ ಒಂದು ಮಾತನ್ನು ಪ್ರಸ್ತಾಪ ಮಾಡಬೇಕಾಗುತ್ತದೆ. ಯಾರು ಬಲವಂತದಿಂದ ಸಂತಾನ ಶಸ್ತ್ರಚಿಕಿತ್ಸೆಗೆ ಗುರಿಯಾಗಿದ್ದಾರೋ ಅಂತಹವರಿಗೆ 5000 ರೂಪಾಯಿ ಕೊಡತಕ್ಕ ಮಾತನ್ನು ಹೇಳಿದ್ದಾರೆ, ಇದರಿಂ ಏನು ಅನಿಸುತ್ತದೆ ಎಂದರೆ ಚುನಾವಣೆ ಭಾಷಣದ ಅಷ್ಟು ಬ್ರಮೆ ಎಂದು ಅನಿಸುತ್ತದೆ. ಅಯವ್ಯಯದಲ್ಲಿ ಯೋಜನೆಗಳಿಗೆ ಒದಗಿಸುವುದಕ್ಕೆ ಹಣ ಸಾಲ-ವುಇಲ್ಲ ಕುಟುಂಬ ಯೋಜನೆಗೆ ಬೇಸತ್ತು ಹೆದರಿ ಓಡಿದ ಜನ ಇಂದು ತಾವಾಗಿಯೇ ಆಸ್ಪತ್ರೆಗಳಿಗೆ ಬಂದು ಶಸ್ತ್ರಚಿಕಿತ್ಸೆಗೆ ಗುರಿಯಾಗುತ್ತಿದ್ದಾರೆ. ಇವತ್ತು ನಮಗೆ ಸಿಬ್ಬಂದಿ ಇಲ್ಲ, ಚಿಕಿತ್ಸೆ ಮಾಡಲಿಕ್ಕೆ ಜಾಗಗಳು ಇಲ್ಲ. ಔಷಧಿಗಳು ಇಲ್ಲ. ಕಾಲಾವಕಾಶ ಇಲ್ಲದೇ ಇರುವುದರಿಂದ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ವಿ. ಎನ್. ಪಾಟೀಲ್ (ಹುಮ್ನಾಬಾದ್) ಸನ್ಮಾನ್ಯ ಅಧ್ಯಕ್ಷರೇ, ಈವರೆಗೂ ರಾಜ್ಯಪಾಲರ ಭಾಷಣದ ಮೇಲೆ ನಮ್ಮ ಅನೇಕ ಮಿತ್ರರು ಮಾತನಾಡಿದ್ದಾರೆ. ಇವೊತ್ತು ರಾಜ್ಯಪಾಲರ ಭಾಷಣದಲ್ಲ ಹೊಸ ವಿಷಯಗಳು ಬರಬೇಕಾದ್ದು ಬರಲಿಲ್ಲ. ನಮ್ಮಲ್ಲಿ ಮೊದಲಿನಿಂದಲೂ ಒಂದು ರೂಢಿಯಲ್ಲಿ ಮಾಡಿಕೊಂಡು ಬಂದಂಥಾದ್ದು, ಹೋದ ಸಾರಿ ಯಾವುದು ಬಂದಿತ್ತು, ಅದು ಈ ಸಾರಿ ಕಾಣಲಿಲ್ಲ ಈಗ ಮಾನ್ಯ ಶ್ರೀ ಕೆ. ಹೆಚ್. ಪಾಟೀಲರವರಲ್ಲಿ ನಾನು ಕೇಳುವುದಂ ಏನು ಎಂದರೆ, ತಾವು ಮಂತ್ರಿಗಳು ಎಲ್ಲರೂ ಕೂಡಿ ಏನು ಬರೆದುಕೊಡುತ್ತೀರಾ ಅದನ್ನು ರಾಜ್ಯಪಾಲರು ಓದುತ್ತಾರೆ. ರಾಜ್ಯಪಾಲರ ಭಾಷಣದಲ್ಲ ಸೋಷಿಯಲಿಸಮ್ ಬಗ್ಗೆ ಪ್ರಸ್ತಾಪ ಇಲ್ಲ, ತಾವು ಅದರ ಬಗ್ಗೆ ಬರೆದುಕೊಡಲಿಕ್ಕೆ ನಾಚಿಕೆ ಏನಾದರು ಆಯಿತೆ ಎಂದು ಕೇಳುತ್ತೇನೆ. ಇನ್ನು ಉತ್ತರ ಪ್ರದೇಶದ ಬಗ್ಗೆ ಈ ಸಂದರ್ಭದಲ್ಲಿ ತಿಳಿಸಬೇಕು ಎಂದರೆ, ಅಕ್ಷಿದ್ಧಂತಹ ಗೋವಿಂದವಲ್ಲಭ ಪಂತ್ ಅವರು ಎದ್ದು ನಿಂತರೆ ಸುಮಾರು 6–7 ಅಡಿ ಎತ್ತರ ಇರತಕ್ಕ ಮನುಷ್ಯರು. ಅವರನ್ನು ಉತ್ತರ ಪ್ರದೇಶದ ಜನರು ಆದರದಿಂದ ಪ್ರಣಾಮ ಮಾಡುತ್ತಿದ್ದರು. ಅವರಿಗೆ ಪ್ರಣಾಮ ಮಾಡುವಾಗ ಅಡ್ಡಬಿದ್ದೆ ಎಂದು ಹೇಳುತ್ತಿದ್ದರು, ಅದು ಆ ಕಡೆಯಲ್ಲಿ ನಡೆದುಬಂದಿರತಕ್ಕಂತಹ ಸಂಪ್ರದಾಯ. ಇನ್ನೂ ಆಚಾರ್ಯ ಕೃಪಲಾನಿಯವರು ದಿನಾಂಕ 24ನೇ ಮಾರ್ಚಿ ತಿಂಗಳ ಭಾಷಣವಲ್ಲಿ ಡೋಂಟ್ ಟಚ್ ದಿ ಫೀಟ್ ಎಂದು ಒಂದು ವಾರ್ನಿಂಗ್ ಕೊಟ್ಟಿದ್ದಾರೆ, ಅದನ್ನು ಬೆಳೆಸಿಕೊಂಡು ಬರಬೇಡಿ ಎಂದು ಹೇಳಿದ್ದಾರೆ. ನಾನು ಇವೊತ್ತು ಕಮ್ಯುನಿಸ್ಟ್ ಪಾರ್ಟಿ ಸದಸ್ಯನಾಗಿದ್ದೇನೆ. ಟಚ್ ದಿ ಫೀಟ್‌ಜಮ್ ಇದಕ್ಕೆ ಎಷ್ಟು ಜನರು ಗುರಿಯಾಗಿದ್ದಾರೆ ಎಂದು ನೆನಪು ಬರುತ್ತದೆ. ಇವೊತ್ತು ಟಚ್ ದಿ ಫೀಟ್ ಜಮ್ ತೆಗೆದುಕೊಂಡರೆ ಮಾತ್ರ ಪ್ರಮೋಷನ್ ವಗೈರೆ ಸಿಕ್ಕುತ್ತದೆ, ಇಲ್ಲದಿದ್ದರೆ ಯಾವ ಪ್ರಮೋಷನ್ ಕೂಡ ಸಿಕ್ಕುವುದಿಲ್ಲ. ಟಚ್ ದಿ ಫೀಟ್‌ಜಮ್ ಅಡಾಪ್ಟ್ ಮಾಡಿಕೊಂಡು ಬಂದು, ಅನೇಕ ಜನರು ಉನ್ನತ ಸ್ಥಾನದಲ್ಲಿರಬೇಕಾದಂತಹವರನ್ನು ಕೆಳಗೆ ತುಳಿದು ಬೇರೆಯವರನ್ನು ಮೇಲಕ್ಕೆ ತಂದಿದ್ದಾರೆ. ಇನ್ನು ಕುಟುಂಬ ಯೋಜನೆ ಬಗ್ಗೆ ನಮ್ಮ ಮಾನ್ಯ ಮಿತ್ರರು ಏನು ಹೇಳುತ್ತಿದ್ದಾರೆ ಎಂದರೆ, ಈ ಕುಟುಂಬ ಯೋಜನೆ ಬಗ್ಗೆ ಆಪರೇಷನ್ ಮುಂತಾದವುಗಳನ್ನು ಮಾಡಿಸಿ. ತೊಂದರೆಯಾದಂತ ಬಗ್ಗೆ ಅಧಿಕಾರಿಗಳು ಕಾರಣರು ಎಂದು ಹೇಳುತ್ತಿದ್ದಾರೆ. ಈ ತರಹ ಹೇಳತಕ್ಕಂಥಾದ್ದು, ತಾವು ಮಾಡಿದಂತಹ ತಪ್ಪಿಗೆ ಬೇರೆಯವರನ್ನು ಗುರಿಪಡಿಸತಕ್ಕುದ್ದು ಇದೇನು ಬಹಳ ಚಾಣಕ್ಷತನ ಎಂದು ಕಾಣುವುದಿಲ್ಲ. ಇವೊತ್ತು ನಮ್ಮ ಕೆಲವು

ಮಾನ್ಯ ಮಿತ್ರರಿಗೆ, ಟಚ್ ದಿ ಫೀಟ್‌ಜಮ್‌ನಲ್ಲಿ ಏನಾಗಿದೆ ಎಂದರೆ, ನಾವು ಇದಕ್ಕೆ ಒಳಗಾಗುತ್ತೇವೆ ಎಂದು ಭಯವಾಗುತ್ತಿದೆ. ಇದರ ಬಗ್ಗೆ ಮೊನ್ನೆ ಕೇಂದ್ರ ಮಂತ್ರಿ ಮಂಡಲದಲ್ಲಿ ಯಾವ ರೀತಿ ಆಯಿತು ಅದನ್ನು ನೋಡಿದರೆ ಅರ್ಥವಾಗುತ್ತದೆ. ಮಾನ್ಯ ರಾಜನಾರಾಯಣ್ ಅವರು ನಾನು ಬರ್ನ್ ಫೈಟರ್ ಇದ್ದ ಹಾಗೆ, ನಾನು ಮಂತ್ರಿಮಂಡಲದಿಂದ ಹೊರಗಡೆ ಇದ್ದು ಕೆಲಸ ಮಾಡುತ್ತೇನೆ ಎಂದು ಹೇಳಿದ್ದರು. ಅವರು ನನಗೆ ಯಾವುದೇ ಆಸೆ ಇಲ್ಲ ಎಂದು ಹೇಳಿದ್ದರು, ಅನಂತರ ಮೂರು ದಿನಗಳಾದ ಮೇಲೆ ಏನಾಯಿತು 'ಎಸ್' ಎಂದು ಒಪ್ಪಿಕೊಂಡರು. ಇದಕ್ಕೆ ಕಾರಣ ಏನು, ಮಾನ್ಯ ಜಯಪ್ರಕಾಶ್ ನಾರಾಯಣ್ ಅವರು ಹೇಳಿದಂತ ಆದೇಶದ ಮೇಲೆ ನಾವು ತಲೆ ಬಾಗಬೇಕಾಗಿದೆ ಎಂದು ಹೇಳಿದರು. ಈ ಒಂದು ಟಚ್ ದಿ ಫೀಟ್‌ಜಮ್ ಎಲ್ಲಿಯವರೆಗೆ ಮುಟ್ಟಿಸಿದ್ದಾರೆ ಎಂದು ನೋಡುವುದಾದರೆ, ಟಚ್ ದಿ ಫೀಟ್‌ಜಮ್‌ನಿಂದ ವ್ಯಕ್ತಿ ಪೂಜೆ ಕಲ್ಪಿಸಿ ಕೊಟ್ಟಂತಾಗುತ್ತದೆ. ಅಪರಾಧ ಒಂದು ಆದರೆ ನೂರುಪಟ್ಟು ಟಚ್ ದಿ ಫೀಟ್‌ಜಮ್ ಇದೆ. ಇವೊತ್ತು ಟಚ್ ದಿ ಫೀಟ್‌ಜಮ್ ಹೆಚ್ಚು ಬೆಳೆಸಿಕೊಂಡು ಬಂದು ಅದಕ್ಕೆ ಯಾರು ಮಾನ್ಯತೆ ಕೊಡುತ್ತಾ ಇಲ್ಲ. ಅದಕ್ಕೆ ಯಾರು ಯಾವ ಒಂದು ಸ್ಥಳದಲ್ಲೂ ಸ್ಥಾನಇಲ್ಲ. ಇವರು ತುರ್ತುಪರಿಸ್ಥಿತಿಯನ್ನು ಮುಂದೆ ಇಟ್ಟುಕೊಂಡು ಇಪ್ಪತ್ತು ಅಂಶಗಳ ಕಾರ್ಯಕ್ರಮಗಳಲ್ಲಿ ಕಾಯಿದೆಗಳನ್ನು ಮಾಡಿಕೊಂಡು ಹೊರಟರು, ಆದರ ಬಗ್ಗೆ ಇವೊತ್ತು ಎಷ್ಟು ಜನರು ಮೆಚ್ಚುಗೆ ಕೊಡುತ್ತಿದ್ದಾರೆ ಗೊತ್ತಿಲ್ಲ. ಇನ್ನು ಡೆಟ್ ರಿಲೀಫ್ ಬಗ್ಗೆ ಹೇಳಬೇಕು ಎಂದರೆ, ಇವರು ಇದನ್ನು ಜಾರಿಗೆ ತಂದ ತಕ್ಷಣ ಕೆಲವರು ಅರ್ಜಿಯನ್ನು ಕೊಟ್ಟು, ನಮ್ಮ ಎರಡು ಹಸುಗಳನ್ನು ಹಿಡಿದುಕೊಂಡು ಹೋಗಿದ್ದಾರೆ. ಅವುಗಳನ್ನು ಬಿಡಿಸಿಕೊಡಿ ಎಂದು ಕೇಳಿದರು. ಇವರು ಮಾಡಿದಂತ ಆ್ಯಕ್ಟ್‌ನಲ್ಲಿ ಜಿಲ್ಲಾ ಮಟ್ಟದಲ್ಲಿ ಡೆಪ್ಯುಟಿ ಕಮಿಷನರ್ ಅವರು ಇದ್ದಾರೆ, ಸಬ್‌ಡಿವಿಜನರ್ ಮಟ್ಟದಲ್ಲಿ ಅಸಿಸ್ಟೆಂಟ್ ಕಮಿಷನರ್ ಇದ್ದಾರೆ. ಇನ್ನು ತಾಲ್ಲೂಕು ಮಟ್ಟದಲ್ಲಿ ತಹಸೀಲ್ದಾರರಿಗೆ ಅರ್ಜಿಗಳನ್ನು ಕೊಟ್ಟರೆ ಅವರು ಎಷ್ಟೋ ಕ್ಲಾರಿಫಿಕೇಷನ್ ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರ್ಸ್‌ಗೆ ಕಳುಹಿಸದೆ ತೊಂದರೆಯಾಗಿದೆ. ಇದನ್ನು ಪೂರ್ತಿ ವಿವರಣೆ ನೋಡಿಕೊಂಡು ಹೋದರೆ, ಇವರು ನಿಜವಾಗಿಯೂ, ಸಿನ್‌ಸಿಯರ್ ಆಗಿ ಋಣ ವಿಮುಕ್ತಿ ಕಾಯಿದೆಯನ್ನು ಇಂಪ್ಲಿಮೆಂಟ್ ಮಾಡಬೇಕು ಎಂದು ಮಾಡಿಲ್ಲ. ಈ ಒಂದು ಋಣ ಪರಿಹಾರ ಕಾಯಿದೆಯಿಂದ ಯಾರು ಟಚ್ ದಿ ಫೀಟ್‌ಜಮ್‌ನಲ್ಲಿ ಬರುತ್ತಾರೆ- ಅಂತಹ ಕೆಲವು ಜನರಿಗೆ ಋಣ ವಿಮುಕ್ತಿ ಸಿಕ್ಕಿದೆ ಕೆಲವು ಟೆನೆಂಟ್ಸ್‌ಗಳ ಕೇಸ್ ಡಿಸ್ಪೈಡ್ ಆಗಿದೆ. ಇನ್ನೊಂದು ಎರಡನೆ ಪಾಯಿಂಟ್ ಹೇಳಬೇಕು ಎಂದರೆ ಅದು ಸೂರ್ಯ ನಮಸ್ಕಾರ. ಸೂರ್ಯ ನಮಸ್ಕಾರ ಎಂದು ಹೇಳಿದರೆ ಅದು ಕೆಟ್ಟದ್ದು ಎಂದು ತಿಳಿದುಕೊಳ್ಳಬಾರದು. ಇವೊತ್ತು ಯಾವ ಸೂರ್ಯ ಮೇಲಕ್ಕೆ ಏರುತ್ತಾ ಇರುತ್ತಾನೆ, ಆ ಸೂರ್ಯನಿಗೆ ನಮಸ್ಕಾರ ಮಾಡುವುದು, ಇವೊತ್ತು ಜನತಾ ಸರ್ಕಾರ ಮೇಲಕ್ಕೆ ಏರುತ್ತಾ ಇದ್ದರೆ. ಆ ಸೂರ್ಯನಿಗೆ ನಮಸ್ಕಾರ ಮಾಡುವುದು. ಈ ರೀತಿ ಯಾರು ಯಾರು ಸೂರ್ಯ ನಮಸ್ಕಾರವನ್ನು ಹಾಕಿದ್ದಾರೆ ಅಂಥವರಿಗೆ ಶಾರೀರಿಕ ಬಲ ಸಿಕ್ಕಿದೆ, ಭೂಮಿ ಸಿಕ್ಕಿದೆ. ಮಾನ್ಯ ಅಧ್ಯಕ್ಷಿಣಿಯವರೆ, ತಮ್ಮ ಮೂಲಕ ಮಾನ್ಯ ಕೆ ಹೆಚ್. ಪಾಟೀಲರಲ್ಲಿ ಒಂದು ಮಾತು ಹೇಳುತ್ತೇನೆ. ಏಕೆಂದರೆ ಅವರು ಇದುವರೆಗೂ ಕಾಂಗ್ರೆಸ್ ಅಧ್ಯಕ್ಷರಾಗಿದ್ದು ಇಂಥ ಒಂದು ರಾಡಿಕಲ್ ಪ್ರೋಗ್ರಾಂ ಹಾಕಿಕೊಟ್ಟರು.

ಸ್ವಾಮಿ, ಅನ್ ಆಥರೈಸ್ಡ್ ಕಲ್ಟಿವೇಟರ್ಸ್ ಯಾರಿದ್ದಾರೆ ಅವರನ್ನು ಜಮೀನಿನಿಂದ ತೆಗೆದು ಬಿಡಿ ಎಂದು ಸರ್ಕಾರದಿಂದ ಒಂದು ಆಜ್ಞೆಯನ್ನು ಹೊರಡಿಸಿದೆ. ಈ ಆಜ್ಞೆ ಹೊರಟಮೇಲೆ ಯಾರು ಯಾರಿಗೆ ರಾಜಕೀಯ ಬೆಂಬಲ ಇದೆ, ಅಂಥವರಿಗೆ ಜಮೀನು ಸಿಕ್ಕಿದೆ, ಯಾಗು ಯಾರು ಅಧಿಕಾರಿಗಳಿಗೆ ಲಂಚ ಕೊಟ್ಟಿದ್ದಾರೆ, ಅಂಥವರಿಗೆ ಆ ಜಮೀನಿನ ಒಡೆತನ ಸಿಕ್ಕಿದೆ. ಅನ್ ಅಥರೈಸ್ ಕಲ್ಟಿವೇಷನ್ ಲ್ಯಾಂಡನ್ನು ಯಾರು ಕನ್‌ಫರ್ಮ್ ಮಾಡಿಸಿಕೊಂಡಿಲ್ಲ, ಯಾರು ಸಾಗುವಳಿ ಚಿಟ್ ತೆಗೆದುಕೊಂಡಿಲ್ಲ ಅವರ ಗತಿ ಏನು ? ಸ್ವಾಮಿ' ಈ ಸದನದಲ್ಲಿ ಒಬ್ಬರ ಮೇಲೆ ಸೀರಿಯಸ್ ಛಾರ್ಜಸ್ ಮಾಡಬೇಕಾಗಿತ್ತು, ಆದರೆ ಈ ವಿಷಯವನ್ನು ಡಿಫೆಂಡ್ ಮಾಡಿಕೊಳ್ಳುವುದಕ್ಕೆ ಅವರು ಈ ಸದನದಲ್ಲಿಲ್ಲ. ಮತ್ತು ಅವರ ಹೆಸರನ್ನು ಹೇಳುವುದಕ್ಕೆ ನಾನು ಬಯಸುವುದಿಲ್ಲ. ನಮ್ಮ ಹುಮ್ನಾಬಾದ್ ತಾಲ್ಲೂಕಿನ ಪಿ ಎಲ್. ಡಿ. ಬ್ಯಾಂಕ್ ಛೇರ್ಮನ್ ಒಬ್ಬರು 5 ಎಕರೆ ಜಮೀನನ್ನು ಅನ್ ಅಥರೈಸ್ ಆಗಿ ಕಲ್ಟಿವೇಷನ್ ಮಾಡಿಕೊಂಡು ಅದರಲ್ಲಿ ದ್ರಾಕ್ಷಿ ತೋಟವನ್ನು ಬೆಳೆಸಿಕೊಂಡಿದ್ದಾರೆ, ಅವರಿಗೆ ವಾರ್ಷಿಕ ವರಮಾನ ಸುಮಾರು 60 ಸಾವಿರ ರೂಪಾಯಿ ಬರುತ್ತಿದೆ. ಈ

ಥೇರ್ಮನ್ ಅವರು ಅಲ್ಲಿದ್ದ ಹರಿಜನರನ್ನು ಹೊರಗೆ ಹಾಕಿದ್ದಾರೆ, ಅವರು ಮಾಡಬಾರದ ಕೃತ್ಯಗಳನ್ನು ಮಾಡುತ್ತಿದ್ದಾರೆ. ಆನರೆ ಅವರನ್ನು ಯಾರು ಕೇಳುವವರಿಲ್ಲ. ಕಾರಣ ಅವರಿಗೆ ಒಬ್ಬ ರಾಜಕೀಯ ವ್ಯಕ್ತಿಯ ಸಪೋರ್ಟ್ ಇದೆ. ಆ ರಾಜಕೀಯ ವ್ಯಕ್ತಿಯು ಡಿವಿಜನಲ್ ಕಮಿಷನರ್‌ರವರಿಗೆ ಲೆಟರ್ ಬರೆದು, ಈಗ ಪಿ. ಎಲ್. ಡಿ. ಛೇರ್ಮನ್‌ರವರು ಮಾಡುತ್ತಿರುವ ಲ್ಯಾಂಡನ್ನು ಅವರಿಗೇ ಕೊಡುವಂತೆ ಶಿಫಾರಸು ಮಾಡಿ ಎಂದು ಕೇಳಿಕೊಂಡಿದ್ದಾರೆ. ಈ ರೀತಿ ಅವ್ಯವಹಾರಗಳು ನಡೆಯುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಿರುವ ಈ ಸರ್ಕಾರದ ಮೇಲೆ ನಾವು ನಂಬಿಕೆ ಇಡೋಣವೇ, ಬೇಡವೇ ಎಂಬ ಪ್ರಶ್ನೆ ಬರುತ್ತದೆ. ಆ ರಾಜಕೀಯ ವ್ಯಕ್ತಿಯು ಡಿವಿಜನಲ್ ಕಮಿಷನರ್‌ರವರಿಗೆ ಬರೆದಿರುವ ಪತ್ರದ ನಂಬರನ್ನು ಬೇಕಾದರೆ ತಮಗೆ ಕೊಡುತ್ತೇನೆ. ನಾನು ಇಲ್ಲಿ ಮಾನ್ಯ ಕೆ. ಹೆಚ್. ಪಾಟೀಲರ ಹೆಸರನ್ನು ಹೇಳಿದೆ, ಆದರೆ ಅವರು ಆ ಕೆಲಸವನ್ನು ಮಾಡಿಲ್ಲ. ಆದರೆ ಅದು ಹೀಗೆಯೇ ಮುಂದುವರಿದರೆ ಆ ಕಡೆ ಕೈತೊಳೆಯಬೇಕಾಗುತ್ತದೆ.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಸದಸ್ಯರು ಒಂದು ನಿಮಿಷ ಅವಕಾಶ ಕೊಟ್ಟರೆ ಈ ಸಂದರ್ಭದಲ್ಲಿ ನನ್ನದೂ ಒಂದು ಛಾರ್ಜನ್ನು ಮಾನ್ಯ ಸಭೆಯ ಗಮನಕ್ಕೆ ತರಬಯಸುತ್ತೇನೆ. ಮಾನ್ಯ ಮುಖ್ಯ ಮಂತ್ರಿಗಳು ಅಸಿಸ್ಟೆಂಟ್ ಕಮಿಷನರ್‌ರವರಿಂದ, ಡೆಪ್ಯುಟಿ ಕಮಿಷನರ್‌ರವರಿಂದ ರೆಕಾರ್ಡ್ಸ್‌ನು ತರಿಸಿಕೊಂಡು ಯಾರು ಯಾರು ಅನ್ ಆಥರೈಸ್ ಮಾಡುತ್ತಿದ್ದರು ಅಂಥ ಜಮೀನನ್ನು ಅವರವರಿಗೇ ಕನ್‌ಫರ್ಮ್ ಮಾಡಿದ್ದಾರೆ. ಈ ರೀತಿ ಎಷ್ಟು ಜನರಿಗೆ ಕನ್‌ಫರ್ಮ್ ಮಾಡಿದ್ದಾರೆ ಎಂದು ನಾನು ಪತ್ರ 1 ವರ್ಷವಾಯಿತು. ಇದುವರೆಗೂ ಅವರಿಂದ ಒಂದು ಉತ್ತರವೂ ಕೂಡ ಇಲ್ಲ ಈ ಮಾತನ್ನು ನಾನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ, ಒಬ್ಬೊಬ್ಬರಿಗೆ 30 ಎಕರೆ, 40 ಎಕರೆ, 50 ಎಕರೆಗಳಷ್ಟು ಜಮೀನನ್ನು ಕನ್‌ಫರ್ಮ್ ಮಾಡಿದ್ದಾರೆ

ಶ್ರೀ ವಿ. ಎನ್. ಪಾಟೀಲ್ —ಸ್ವಾಮಿ. ಈ ರೀತಿ ಸೂರ್ಯ ನಮಸ್ಕಾರವನ್ನು ಹಾಕುವುದನ್ನು ಸರ್ಕಾರದವರೇ ಕಲ್ಪಿಸಿಕೊಡುತ್ತಿದ್ದಾರೆ. ಈ ವಿಧಾನ ಸೌಧಕ್ಕೆ ಬಂದರೆ ಮೊದಲು ಅಡ್ಡಬಿದ್ದ ಬುದ್ಧಿ ಏನ್ನುವುದನ್ನು ಕಲಿಯಬೇಕು. ಈ ಸಂದರ್ಭದಲ್ಲಿ ಒಂದು ವಿಷಯ ಹೇಳಬೇಕಾಗಿದೆ. ಏನೆಂದರೆ ನಮ್ಮಲ್ಲಿ ಒಬ್ಬ ದೊಡ್ಡ ಶ್ರೀಮಂತನು ಒಬ್ಬ ಬಡವನಿಗೆ ಸಾಲ ಕೊಟ್ಟು, ಆತನು ತನ್ನ ಸಾಲವನ್ನು ತೀರಿಸಲಿಲ್ಲ ಎಂದು ಅವನ ಜಮೀನನ್ನು ಸೇಲ್‌ಡೀಡ್ ಮಾಡಿಸಿಕೊಂಡು ಈಗ ಆತನನ್ನು ಹೊರಗಡೆ ಹಾಕುವುದಕ್ಕೆ ವ್ಯವಸ್ಥೆ ಮಾಡಿದ್ದಾರೆ. ಈ ವಿಷಯದಲ್ಲಿ ನಾನು ಕಾಲಿಂಗ್ ಅಟೆನ್‌ಷನ್ ಕೂಡ 15-7-1976ರಲ್ಲಿ ಕಳುಹಿಸಿಕೊಟ್ಟಿದ್ದೇನೆ. ಅಲ್ಲದೆ ಈ ಸಂಬಂಧವಾದ ಫೈಲು ತಹಶೀಲ್ದಾರ್‌ರವರ ಆಫೀಸಿನಿಂದ ಅಸಿಸ್ಟೆಂಟ್ ಕಮಿಷನರ್‌ರವರ ಆಫೀಸಿಗೆ. ಅಸಿಸ್ಟೆಂಟ್ ಕಮಿಷನರ್‌ರವರ ಆಫೀಸಿನಿಂದ ಡೆಪ್ಯುಟಿ ಕಮಿಷನರ್‌ರವರ ಆಫೀಸಿಗೆ ಫೈಲು ಓಡಾಡಿತು. ಆದರೆ ಪ್ರಯೋಜನ ಮಾತ್ರ ಏನೂ ಇಲ್ಲ. ನಮ್ಮಂಥವರ ಪತ್ರಕ್ಕೇ ಇಷ್ಟು ಬೆಲೆ ಸಿಕ್ಕಿದರೆ ಇನ್ನು ಬಡ ಬೋರೇಗೌಡನ ಗತಿ ಏನು ? ಎಂಬುದಾಗಿ ತಮ್ಮ ಮುಖಾಂತರ ಸರ್ಕಾರವನ್ನು ಕೇಳಬಯಸುತ್ತೇನೆ.

ಇನ್ನು ಮೂರನೆಯದಾಗಿ ಹೇಳಬೇಕೆಂದರೆ, ಇವತ್ತಿನ ದಿವಸ ಎಷ್ಟೋ ಪಿ. ಎಲ್. ಡಿ. ಬ್ಯಾಂಕ್‌ಗಳು ಡೀ ಫಂಕ್ಟ್ ಆಗಿವೆ. ಅಲ್ಲಿನ ಜನರಿಗೆ ಸಾಲ ಸಿಕ್ಕುತ್ತಿಲ್ಲ. ಅವರ ಗತಿ ಏನು ? ಸರ್ವಿಸ್ ಸೊಸೈಟೀಸ್‌ನವರು ಹೋಗಿ ವಾಪಸ್ಸು ಬರುತ್ತಿದ್ದಾರೆ. ಮಾನ್ಯ ಸಚಿವರು ಹೇಳುತ್ತಿದ್ದರು. ಕೆ. ಡಿ. ಆರ್. ಎಫ್. ಡಿ. ಗಳಿಗೆ ಅಪ್ಲಿಕೇಷನ್ಸ್ ಬಂದಿದೆ, ಬಡ ರೈತನಿಗೆ ಅನುಕೂಲವಾಗುವಂತೆ ನ್ಯಾಷನಲೈಸ್ಡ್ ಬ್ಯಾಂಕ್‌ಗಳ ಮುಖಾಂತರ ಸಾಲ ಕೊಡಿಸುತ್ತೇವೆ ಎಂದು. ನೀವು ಅವರಿಗೆ ಈ ಬ್ಯಾಂಕ್‌ಗಳಿಂದ ಸಾಲ ಕೊಡಿಸುವುದಾದರೆ ಆ ಜನರ ಬಾಯಿಗೆ ಸುಣ್ಣ ಹಚ್ಚಿ ನಿಮ್ಮ ಬಾಯಿಗೆ ಬೆಣ್ಣೆ ಇಟ್ಟುಕೊಂಡಂತಾಗುತ್ತದೆ. ಎಮರ್ಜನ್ಸಿಯಲ್ಲಿ ಯಾರೋ ಬೇಕಾದವರಿಗೆ ಸಾಲ ಸಿಕ್ಕುತ್ತಿತ್ತು. ಆಗ ಯಾರಾದರೂ ಒಬ್ಬರು ಸ್ವಾಮಿ, ಅವರ ಮನೆಯಲ್ಲಿ 10 ಎಮ್ಮೆಗಳಿವೆ. ಆದರೂ ಇವನ್ನು 4 ಎಮ್ಮೆಗಳನ್ನು ತಗೆದುಕೊಳ್ಳುವುದಕ್ಕೆ ಸಾಲ ಕೊಟ್ಟಿದ್ದೀರಿ ಆದರೆ ನಮಗೆ ಸಾಲ ಕೊಟ್ಟಿಲ್ಲ ಎಂದು ಕೇಳಿದರೆ ನಿಮ್ಮನ್ನು ಡಿ. ಐ. ಆರ್. ಕೆಳಗೆ ಜೈಲಿಗೆ ಕಳುಹಿಸುತ್ತೇವೆ, ಮೀಸಾ ಕೆಳಗೆ ಜೈಲಿಗೆ ಕಳುಹಿಸುತ್ತೇವೆ ಎಂದು ಹೇಳುತ್ತಿದ್ದೀರಿ. ಆಗ ಜನರಿಗೆ ಅಂಥ ಒಂದು ಭಯ ಇತ್ತು. ಆದರೆ ಈಗ ಆ ಭಯ ಸ್ವಲ್ಪ ದೂರವಾಗುತ್ತಿದೆ.

ಮಾನ್ಯ ಅಧ್ಯಕ್ಷರ ಮುಖಾಂತರ ಇಲ್ಲಿ ಒಂದು ಫೋಟೋವನ್ನು ಸಭೆಗೆ ತೋರಿಸುತ್ತಿದ್ದೇನೆ. ಈ ಫೋಟೋದಲ್ಲಿ ಬೆಂಗಳೂರಿನ ಸೆಂಟ್ರಲ್ ಜೈಲಿನ ಚೀಫ್ ಜೈಲರ್‌ರವರು 4 ಜನ ಪ್ರಸಿದ್ಧ ಖೈದಿಗಳ ಜೊತೆಯಲ್ಲಿ ನಿಂತುಕೊಂಡು ಫೋಟೋವನ್ನು ತೆಗೆಸಿಕೊಂಡಿದ್ದಾರೆ. ಈ ಖೈದಿಗಳು ಟೆರ್ಲಿನ್ ಷರ್ಟ್‌ಗಳನ್ನು ಹಾಕಿಕೊಂಡಿದ್ದಾರೆ. ನೀವು ಜೈಲಿನಲ್ಲಿರುವ ಖೈದಿಗಳಿಗೆ ಟೆಲಿರ್ನ್ ಷರ್ಟ್‌ಗಳನ್ನು ಒದಗಿಸುತ್ತೀರಾ ಎಂದು ಕೇಳುತ್ತೇನೆ. ಜೈಲಿನಲ್ಲಿರುವ ಖೈದಿಗಳಿಗೆ ಊಟಕ್ಕಾಗಿ ಕೊಡುತ್ತಿದ್ದ ರೇಷನ್‌ನಲ್ಲಿ ಬಹಳ ಭಾಗವನ್ನು ಇವರೇ ಹೊಡೆದು ತಿಂದುಬಿಡುತ್ತಿದ್ದರು. ಈ 4 ಜನ ಕೇಡಿಗಳು ಹಿಂದೆ ಯಾವುದೋ ಒಂದು ಕೊಲೆ ಕೇಸ್‌ನಲ್ಲಿ ಸಿಕ್ಕಿಹಾಕಿಕೊಂಡು ಜೈಲಿನ ಶಿಕ್ಷೆ ಅನುಭವಿಸಿದ್ದರು. ಆಗ ಇವರಿಗೆ ಕೇಡಿ ನಂಬರ್ 1, 2, 3, 4, ಎಂದು ನಂಬರ್ ಕೊಟ್ಟಿದ್ದರು ಅಂಥ ಈ ಕೇಡಿಗಳ ಜೊತೆಯಲ್ಲಿ ಚೀಫ್ ಜೈಲರ್ ತಮ್ಮ ಫೋಟೋವನ್ನು ತೆಗೆಸಿಕೊಂಡಿದ್ದಾರೆ. ನಾನು ಒಂದು ಸಾರಿ ಇವರನ್ನು ನೋಡುವುದಕ್ಕೆ ಹೋಗಿದ್ದಾಗ ಅವರು ನನಗೆ ಪರ್ಮಿಷನ್ ಕೊಡಲಿಲ್ಲ ಈ ವ್ಯಕ್ತಿಯ ವಿಷಯದಲ್ಲಿ ನಾನು ಹೇಳಬೇಕಾದು ಬಹಳಇತ್ತು. ಆದರೆ ಅಷ್ಟನ್ನೂ ಹೇಳುವುದಕ್ಕೆ ಕಾಲಾವಕಾಶ ಇಲ್ಲ. ಸ್ವಾಮಿ ನಾನು ಹೆಚ್ಚು ಹೊತ್ತು ಮಾತನಾಡದೆ ಕೇವಲ ಒಂದೆರಡು ಮಾತುಗಳಲ್ಲಿ ಮಾತ್ರ ನನ್ನ ಭಾಷಣವನ್ನು ಮುಗಿಸುತ್ತೇನೆ. ನಾನು ಇದುವರೆಗೂ ಹೇಳಿದ ಈ ಚೀಫ್ ಜೈಲರ್ ಮೇಲೆ ಏನು ಕ್ರಮವನ್ನು ತಾವು ತೆಗೆದುಕೊಳ್ಳುತ್ತೀರಿ ? ಮತ್ತು ಇವರುಗಳ ಜೊತೆಯಲ್ಲಿರುವ ಈ ರೌಡಿ ಗುಂಪು ಏನಿದೆ ಇವರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂದು ನಾನು ಕಿವಿ ಕೊಟ್ಟು ಕೇಳುತ್ತಿದ್ದರೂ ಕೂಡ ಯಾರೊಬ್ಬರೂ ಉತ್ತರವನ್ನೇ ಕೊಡುತ್ತಿಲ್ಲ. ಹೀಗೆಲ್ಲಾ ಮಾಡಿದ್ದರಿಂದಲೇ ಉತ್ತರ ಪ್ರದೇಶದಲ್ಲಿ ಬಿಹಾರದಲ್ಲಿ ಇನ್ನೂ ಅನೇಕ ಕಡೆಗಳಲ್ಲಿ ನಿಮ್ಮ ಆಡಳಿತ ಮುರಿದುಬಿತ್ತು. ನಿಮ್ಮಲ್ಲಿ ಸೂರ್ಯ ನಮಸ್ಕಾರ ಮಾಡುವುದು ಮಿತಿಮೀರಿ ಹೋಯಿತು.

2-30 P. M.

ಇನ್ನೊಂದು ವಿಷಯ ಈವತ್ತಿನದಿವಸ ಒಂದು ಸಾವಿರದ ಐದುನೂರು ಕೋಟಿ ರೂಪಾಯಿ ಕಾರ್ಮಿಕರವರ್ಗದ ದುಡ್ಡು ನಿಮ್ಮ ವಶದಲ್ಲಿದೆ. ನಮ್ಮ ರಾಜ್ಯದಲ್ಲಿ ಲೇ ಆಫ್ ಮತ್ತು ಲಾಕ್‌ಔಟ್‌ಗಳು ಇತ್ಯಾದಿ ನಾನಾ ಕಾರಣಗಳಿಂದ ಮಿಲ್‌ಗಳನ್ನು ಮುಚ್ಚುವ ಸಂಭವ ಒದಗಿತು. ಉದಾಹರಣೆಗೆ ಹೇಳುವುದಾದರೆ ದಾವಣಗೆರೆ ಶಂಕರ್‌ಮಿಲ್‌ನ್ನು ಕ್ಲೋಸ್ ಮಾಡಿದುದರಿಂದ ಈ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದ ಸುಮಾರು ಇಪ್ಪತ್ತೈದು ಸಾವಿರ ಜನ ಕಾರ್ಮಿಕರಿಗೆ ಕೆಲಸ ವಿಲ್ಲದಂತಾಯಿತು. ಎಲೆಕ್ಟ್ರಿಸಿಟಿ ಪವರ್ ಕಟ್‌ನಿಂದ ದಿವಸಕ್ಕೆ 2-2 ಗಂಟೆಗಳ ಕಾಲ ಕೆಲಸಮಾಡುವ ಪರಿಸ್ಥಿತಿ ಉಂಟಾಯಿತು. ಇದರಿಂದಾಗಿ ಇಪ್ಪತ್ತೈದು ಸಾವಿರ ಕಾರ್ಮಿಕರ ಜೀವನ ನಡೆಸುವುದಕ್ಕೆ ತೊಂದರೆಯುಂಟಾಯಿತು. ಇಷ್ಟೊಂದು ತೊಂದರೆಯಾಗಿದ್ದರೂ ಕೂಡ ಇಲ್‌ಲೀಗಲ್‌ಆಗಿ ಮಿಲ್ ಮಾಲೀಕರು ನಡೆದುಕೊಂಡಿದ್ದರೂಕೂಡ ಅವರ ಮೇಲೆ ತಾವು ಕಿರುಬೆರಳಿನಷ್ಟು ಕ್ರಮ ತೆಗೆದು ಕೊಂಡಿಲ್ಲ.

ಇನ್ನು ಎಲೆಕ್ಟ್ರಿಸಿಟಿ ಬೋರ್ಡ್‌ನ ಬಗ್ಗೆ ಹೇಳುವುದಾದರೆ, ಎಲೆಕ್ಟ್ರಿಸಿಟಿ ಬೋರ್ಡ್‌ನವರು ಬಿಲ್‌ಗಳನ್ನು ಕಳುಹಿಸುತ್ತಾರೆ. 5 ಹಾರ್ಸ್ ಪವರ್ ಮೋಟಾರ್ ಇಟ್ಟುಕೊಂಡಿರುವ ರೈತನು 10 ರೂಪಾಯಿ ಡಿಮ್ಯಾಂಡ್ ಚಾರ್ಜನ್ನು ಕೊಡಬೇಕಾಗಿರುತ್ತದೆ. ಕ್ಯಪಾಸಿಟರ್ ಹಚ್ಚದಿದ್ದರೆ ರೈತರಿಂದ 10 ರೂಪಾಯಿ ಫೈನ್ನು ವಸೂಲು ಮಾಡುತ್ತಿದ್ದಾರೆ. ಈ ಕ್ಯಪಾಸಿಟರ್ ಬೆಲೆ 250 ರೂಪಾಯಿಗಳಾಗುತ್ತದೆ. 250 ರೂಪಾಯಿ ಬೆಲೆಯ ಕ್ಯಪಾಸಿಟರ್‌ರನ್ನು ಕೊಳ್ಳಲು ಶಕ್ತಿಯಿಲ್ಲದ ರೈತನಮೇಲೆ ಇಷ್ಟೊಂದು ಹೊರೆಯನ್ನು ಹೊರಿಸುವುದು ನ್ಯಾಯವೇ. ಇಷ್ಟಾದರೂ ಕೂಡ ರೈತರಿಗೆ 24 ಗಂಟೆಗಳ ಕಾಲ ಪವರ್ ಸಪ್ಲೈ ಆಗುತ್ತದೆಯೇ ಎಂದು ನೋಡಿದರೆ, ಅದೂ ಕೂಡ ಆಗುತ್ತಿಲ್ಲ. ಇವರು ಪವರ್‌ನ್ನು ಸಪ್ಲೈ ಮಾಡುತ್ತಿರುವುದು ದೊಡ್ಡ ದೊಡ್ಡ ಕಾರ್ಖಾನೆಗಳಿಗೆ' ಇಂಡಸ್ಟ್ರೀಸ್‌ಗಳಿಗೆ ಮಾತ್ರ ಇದನ್ನು ನೋಡಿದರೆ ತಮಗೆ ಯಾವ ರೈತನ ಮೇಲೆ ಅನುಕಂಪ ಇದೆ, ಕನಿಕರವಿದೆ ಎಂದು ಕೇಳಬೇಕಾಗುತ್ತದೆ.

ಮತ್ತೊಂದು ವಿಷಯ ರೈತನು ಬೆಳೆದಂತ ರಾಗಿ ಜೋಳವನ್ನು ಕ್ವಿಂಟಾಲಿಗೆ 60-70-80 ರೂಪಾಯಿಗಳಿಗೆ ಕೊಳ್ಳುತ್ತಿದ್ದೀರಿ. ಆದನ್ನೇ ನೀವು ಕ್ವಿಂಟಾಲಿಗೆ 150 ರೂಪಾಯಿನಂತೆ ಮಾರುತ್ತಿದ್ದೀರಿ. ರೈತನಿಗೆ ಸಪೋರ್ಟಿಂಗ್ ಪ್ರೈಸ್ ಕೊಡುವ ಬಗ್ಗೆ ಯಾವ ಯೋಚನೆಯನ್ನು ಮಾಡಿಲ್ಲ

ಶ್ರೀ ಕೆ. ಎಚ್. ಪಾಟೀಲ್ —ನಮ್ಮ ರಾಜ್ಯವನ್ನು ಇತರ ರಾಜ್ಯಗಳಿಗೆ ಹೋಲಿಸಿ ನೋಡಿದರೆ ಹೆಚ್ಚು ಬೆಲೆಯನ್ನು ರೈತರು ಬೆಳೆದ ರಾಗಿ ಜೋಳಕ್ಕೆ ಕೊಡುತ್ತಿರುವುದೆಂದರೆ ನಮ್ಮ ಕರ್ನಾಟಕ ರಾಜ್ಯವಾಗಿರುತ್ತದೆ. ನಮ್ಮ ಕರ್ನಾಟಕ ರಾಜ್ಯವೊಂದೇ ಮೊದಲಬಾರಿಗೆ ಓಪನ್‌ಮಾರ್ಕೆಟ್ ಪ್ರೈಸನ್ನು ಇಂಟ್ರಡ್ಯೂಸ್ ಮಾಡಿದ್ದು. ಇಷ್ಟೇ ಅಲ್ಲದೆ ಅಗ್ರಿಕಲ್ಚರಲ್ ಲೆವಿ ರೇಟ್‌ಕೂಡ ಹೆಚ್ಚು ಕೊಡುತ್ತಿರುವುದೆಂದರೆ ನಮ್ಮ ಕರ್ನಾಟಕ ರಾಜ್ಯ.

ಶ್ರೀ ವಿ ಎನ್. ಪಾಟೀಲ್.—ರೈತರು ಬೆಳೆದಂಥ ರಾಗಿ ಜೋಳಕ್ಕೆ ಕ್ವಿಂಟಾಲಿಗೆ 100 ರೂಪಾಯಿನಂತೆ ಸಪೋರ್ಟಿಂಗ್ ಪ್ರೈಸನ್ನು ಕೊಟ್ಟು ಕೊಂಡುಕೊಂಡು ಅದನ್ನು ಅಕ್ಟೋಬರ್ ಮತ್ತು ಡಿಸೆಂಬರ್ ತಿಂಗಳಲ್ಲಿ 120 ರೂಪಾಯಿನಂತೆ ಕೊಡುತ್ತೇವೆಂದರೆ ಅಷ್ಟು ಆಶ್ವಾಸನೆಯನ್ನು ಯನ್ನು ಕೊಟ್ಟರೆ ಸಾಕು.

ಶ್ರೀ ಕೋಣಂದೂರು ಲಿಂಗಪ್ಪ.—ಮೂರು ರಾಜ್ಯಗಳ ಮುಖ್ಯ ಮಂತ್ರಿಗಳು ರಾಗಿ ಜೋಳ ವನ್ನು 125 ರೂಪಾಯಿನಂತೆ ರೈತರಿಂದ ಏತಕ್ಕೆ ಕೊಂಡುಕೊಳ್ಳಬಾರದೆಂದು ಕೇಳುತ್ತಿದ್ದಾರೆ.

ಶ್ರೀ ಕೆ. ಎಚ್. ಪಾಟೀಲ್.—ಕೇಂದ್ರದವರು ಇದರ ಬಗ್ಗೆ ಪರಿಶೀಲನೆ ಮಾಡುತ್ತಿದ್ದಾರೆ. ಅವರು ಎಷ್ಟು ಬೆಲೆಯನ್ನು ಕೊಟ್ಟು ಕೊಂಡುಕೊಳ್ಳಿ ಎಂದು ಆದೇಶ ಕಳುಹಿಸುತ್ತಾರೆ ಅಷ್ಟನ್ನು ಕೊಡೋಣ. ಅದರಲ್ಲಿ ನಮ್ಮದೇನು ಅಭ್ಯಂತರವಿಲ್ಲ.

ಶ್ರೀ ವಿ. ಎನ್. ಪಾಟೀಲ್.—ಇನ್ನು ಕೊನೆಯದಾಗಿ ನಾನು ಹೇಳುವುದೇನೆಂದರೆ ತಮ್ಮ ಪಕ್ಷದಲ್ಲಿ ಒಳ್ಳೆಯ ನಿಷ್ಠಾವಂಥ ಜನರು ಇದ್ದಾರೆ. ಎಲ್ಲರನ್ನು ಕೆಟ್ಟವರೆಂದು ಹೇಳುವುದಿಲ್ಲ. ಬ್ರಿಟೀಷರ ಕಾಲದಲ್ಲಿ ಡಿವೈಡ್ ಅಂಡ್ ರೂಲ್ ಎಂದು ಏನು ಮಾಡಿದರೋ ಅದೇ ರೀತಿ ಒಂದು ಕೋಮಿಗೂ ಮತ್ತೊಂದು ಕೋಮಿಗೂ ಜಗಳವನ್ನು ತರುವಂಥ ಕೆಲಸವನ್ನು ಮಾಡಬೇಡಿ. ಈ ಕೋಮುವಾರು ಘರ್ಷಣೆ ಸಂಭವಿಸಿದರೆ ಬಹಳವಾಗಿ ಕಷ್ಟವನ್ನು ಅನುಭವಿಸಬೇಕಾಗುತ್ತದೆಂದು ಹೇಳಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಐ. ಜಿ. ಸನದಿ (ಹುಬ್ಬಳ್ಳಿ).—ಸನ್ಮಾನ್ಯ ಅಧ್ಯಕ್ಷರೇ ಮಾನ್ಯ ರಾಜ್ಯಪಾಲರು ಈ ಸದನದಲ್ಲಿ ಮಾಡಿದ ಭಾಷಣವನ್ನು ನಾನು ತುಂಬು ಹೃದಯದಿಂದ ಸ್ವಾಗತ ಮಾಡಿ ಇದರ ಬಗ್ಗೆ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಕರ್ನಾಟಕರಾಜ್ಯದ ನೆಲ, ಜಲ, ಕಾಡು, ಕಡಲು ಇವೆಲ್ಲವನ್ನೂ ನಿಸರ್ಗ ಕರ್ನಾಟಕರಾಜ್ಯಕ್ಕೆ ನೀಡಿದ ಅತ್ಯಮೂಲ್ಯವಾದ ಕೊಡುಗೆ ಯಾಗಿದೆ ಇವುಗಳ ಸಂಪೂರ್ಣವಾದ ಉಪಯೋಗವನ್ನು ನಾವಿನ್ನೂ ಮಾಡಿಕೊಂಡಂತೆ ತೋರುವು ದಿಲ್ಲ. ಹೊನ್ನು ಮತ್ತು ಅನ್ನ ಇವೆರಡಕ್ಕೂ ಕೊರತೆಯಿಲ್ಲದ ಈ ನಾಡಿನಲ್ಲಿ ಇವತ್ತು ಅನ್ನಕ್ಕೆ ಪರಿತಪಿಸತಕ್ಕಂಥ ದಾರುಣ ಸ್ಥಿತಿಯನ್ನು ನಾವು ರಾಜ್ಯದ ಅನೇಕ ಕಡೆಗಳಲ್ಲಿ ಕಾಣುತ್ತಿದ್ದೇವೆ. ಈ ಬಡತನ ಮತ್ತು ಬರಗಾಲ ಇವೆರಡೂ ಹಳ್ಳಿಯ ಆಧಾರಸ್ತಂಭವಾಗಿರತಕ್ಕಂಥ ರೈತರ ಬೆನ್ನಿಗೆ ಅಂಟಿಕೊಂಡು ಬಂದಿರತಕ್ಕಂಥ ಕ್ಯಾನ್ಸರ್ ಎಂದು ನಾನು ಭಾವಿಸಿದ್ದೇನೆ ಇದರ ಚಿಕಿತ್ಸೆ ಆಗಬೇಕಾದ್ದು ಮತ್ತು ರೈತನ ಉದ್ಧಾರವಾಗಬೇಕಾದ್ದು ಅತ್ಯವಶ್ಯವಿದೆ. ರೈತನಿಗೆ ಈ ಬಡತನ ದಿಂದ ಮುಕ್ತಿ ದೊರೆಯಬೇಕಾದುದು ಅವಶ್ಯಕವಿದೆ. ಈ ಬಡತನದಿಂದ ರೈತನಿಗೆ ಮುಕ್ತಿ ಆಗಬೇಕಾ ದರೆ ಮುಖ್ಯವಾಗಿ ಈ ಕಾವೇರಿ, ಕಾಳಿ, ಕೃಷ್ಣ ಹಾಗೂ ವಿಜಯನಗರದ ಉಕ್ಕಿನ ಕಾರ್ಖಾನೆಯ ಯೋಜನೆಗಳು ತ್ವರಿತಗತಿಯಿಂದ ಅಭಿವೃದ್ಧಿ ಹೊಂದಿದರೆ ಅದರ ಲಾಭ ನಾಡಿನಲ್ಲಿರತಕ್ಕಂಥ ಅಸಂಖ್ಯಾತ ಕನ್ನಡ ಕುಲಕೋಟಿಗೆ ದೊರಕುತ್ತದೆ. ಇದರಿಂದ ರೈತರಿಗೂ ಮುಕ್ತಿ ದೊರೆತು ಕರ್ನಾಟಕ ಅರ್ಥ ವ್ಯವಸ್ಥೆಗೆ ನವಚೇತನ ಬರುತ್ತದೆಂದು ನಾನು ಭಾವಿಸಿದ್ದೇನೆ. ಹಾಗೆ ಮಾಡ ಬೇಕಾದಾಗ ಸರ್ಕಾರದವರು ಆದ್ಯತೆ ಕೊಡತಕ್ಕಂಥ ವಿಷಯ ಎಂದರೆ ಗ್ರಾಮಾಂತರ ಜನಜೀವನ ದಲ್ಲಿ ರೈತರ ಪುನರುದ್ಧಾರದ ಕಡೆಗೆ ಇವತ್ತು ಸರ್ಕಾರದವರು ಆದ್ಯತೆಯನ್ನು ಕೊಡಬೇಕೆಂದು ಈ ಸದನದ ಮೂಲಕ ನಾನು ಮನವಿ ಮಾಡಿಕೊಳ್ಳುತ್ತಿದ್ದೇನೆ. ಈಗಾಗಲೇ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಉಲ್ಲೇಖಿಸಿರುವ ಹಾಗೆ ಕರ್ನಾಟಕರಾಜ್ಯದ ಸುಮಾರು 115 ತಾಲ್ಲೂಕುಗಳಲ್ಲಿ ಬರಗಾಲ ಕಾಲಿಟ್ಟಿದೆ ಎನ ತಕ್ಕಂಥ ಮಾತನ್ನು ಹೇಳಿದ್ದಾರೆ. ಹಾಗೆ ಹೇಳುವುದರ ಜೊತೆಗೆ 175 ತಾಲ್ಲೂಕುಗಳಲ್ಲಿ ಅಂತರಜಲ ಸಮೀಕ್ಷೆಯನ್ನು ಮಾಡಲಾಗಿದೆ ಎಂದು ಹೇಳಿದ್ದಾರೆ. ಈ ಅಂತರಜಲ ಸಮೀಕ್ಷಾ ಕಾರ್ಯ ಏನಿದೆ ಇದನ್ನು ಸರಿಯಾದ ರೀತಿಯಲ್ಲಿ ಮಾಡಿ, ಈ ಅಂತರಜಲವನ್ನು ಸರಿಯಾಗಿ

ಉಪಯೋಗ ಮಾಡಿಕೊಂಡು ಈ ರೈತನ ಬಾಳಿಗೆ ನೆಮ್ಮದಿಯನ್ನು ತಂದುಕೊಡತಕ್ಕಂಥ ಕೆಲಸವನ್ನು ಸರ್ಕಾರ ಮಾಡಬೇಕಾಗಿದೆಯೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ ಹೀಗೆ ಮಾಡಬೇಕಾದಾಗ ಅವನು ಬರಗಾಲ ಎದುರು ಹೋರಾಟ ಮಾಡಲು ಅವನಿಗೆ ಹೊಸ ಶಕ್ತಿಯನ್ನು ಕೊಡಬೇಕಾದರೆ ಕರ್ನಾಟಕರಾಜ್ಯದಲ್ಲಿ ಪ್ರತಿಯೊಂದು ರೈತ ಕುಟುಂಬಕ್ಕೆ ಒಂದು ಭಾವಿ ಹಾಗೂ ಪಂಪ್‌ಸೆಟ್ಟನ್ನು ಖರೀದಿಸಿ ಕೊಡತಕ್ಕಂಥ ವ್ಯವಸ್ಥೆ ಆಗಬೇಕು. ಬರಗಾಲ ಬಂದಾಗ ಈ ಬರಗಾಲದ ಎದುರು ಸತತವಾಗಿ ಹೋರಾಡತಕ್ಕಂಥ ಶಕ್ತಿಯನ್ನು ರೈತನಿಗೆ ಕೊಡುವುದಕ್ಕೆ ಪ್ರತಿಯೊಬ್ಬರಿಗೂ ಒಂದು ಭಾವಿ ಹಾಗೂ ಪಂಪ್‌ಸೆಟ್ಟನ್ನು ಕೊಡಬೇಕು ಮತ್ತು ಸುಲಭವಾದ 10, 15, 20 ಕಂತುಗಳಲ್ಲಿ ಆ ಹಣವನ್ನು ಮರುಪಾವತಿ ಮಾಡಿಕೊಳ್ಳಬೇಕು ಎಂದು ಈ ಒಂದು ಸಲಹೆಯನ್ನು ಈ ಸಭೆಯಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ ಏಕೆಂದರೆ ಒಂದು ಭಾವಿಯಿಂದ ಹತ್ತಾರು ಜನಕ್ಕೆ ಕೂಲಿ ದೊರೆಯುತ್ತದೆ ಮತ್ತು ಇಡೀ ಗ್ರಾಮಕ್ಕೆ ಅನ್ನ ದೊರೆಯುತ್ತದೆ. ಹೀಗೆ ಮಾಡದೇಹೋದರೆ ಈ ಗ್ರಾಮಗಳ ಸ್ಥಿತಿ ಕಣ್ಣೀರಿನ ಪರಿಸ್ಥಿತಿಯಾಗುತ್ತತೆಂದು ನಾನು ಕಂಡುಕೊಂಡಿದ್ದೇನೆ. ಈ ಬಗ್ಗೆ ಒಂದು ಉದಾಹರಣೆಯನ್ನು ಹೇಳಬೇಕೆಂದರೆ ಧಾರವಾಡ ಜಿಲ್ಲೆಯಲ್ಲಿ ಶಿರಹಟ್ಟಿ ತಾಲ್ಲೂಕ್‌ನ ಬಾಳೆಹೊಸೂರು ಗ್ರಾಮಕ್ಕೆ ನಾನು ಹೋಗಿದ್ದೆ. ಆ ಗ್ರಾಮದಲ್ಲಿ ದನಕರುಗಳಿಗೆ ಮೇವಿನ ಸೌಲಭ್ಯಗಳೇ ಕಂಡುಬರಲಿಲ್ಲ ದನಕರುಗಳ ಸ್ಥಿತಿಯಂತೂ ಹೇಳತೀರದು. ಆ ಹಳ್ಳಿಯ ರೈತರು ನಮಗೆ ಚಾಲೆಂಜ್ ಮಾಡಿದರು. ಏನೆಂದರೆ ಯಾರಿಗಾದರೂ ರಾತ್ರಿಗೆ ಅನ್ನ ಸಿಕ್ಕಿದರೆ ಉಂಟು ಇಲ್ಲದಿದ್ದರೆ ಇಲ್ಲ. ನಾವು ಇಲ್ಲಿ ಬಡತನಕ್ಕೆ ತುತ್ತಾಗಿದ್ದೇನೆ. ನಾವು ಇಲ್ಲಿ ಹೇಗೆ ಬಾಳುತ್ತಿದ್ದೇವೆಂದರೆ ಈ ಫ್ಯಾಮಿಲಿ ಪ್ಲಾನಿಂಗ್ ದೆಸೆಯಿಂದಾಗಿ ಲಗ್ನಕ್ಕೆ ಬಂದಿರುವ ಹೆಣ್ಣುಮಕ್ಕಳು ಜೀಪು ಹತ್ತಿ ಹೋಗುತ್ತಾರೆ ; ಅವರು ಕೊಡತಕ್ಕಂಥ ನೂರು ರೂಪಾಯಿಯಿಂದ ನಾವು ಬದುಕುತ್ತಿದ್ದೇವೆಂಬುದಾಗಿ ಅವರು ಹೇಳಿದರು. ಇನ್ನು ಮುಂದೆ ಅವರ ಕಣ್ಣು, ಕೈ, ಕಾಲುಗಳನ್ನು ತೆಗೆದು ಏನಾದರೂ ರೊಕ್ಕವನ್ನು ಕೊಡುವುದಿದ್ದರೆ ಅದಕ್ಕೂ ಆ ಗ್ರಾಮದ ಜನ ತಯಾರಾಗಿದ್ದಾರೆ. ಅವರು ಇನ್ನೊಂದು ಮಾತನ್ನು ಹೇಳಿದರು ತಾವು ದೇವರಲ್ಲಿ ಕೇಳಿಕೊಂಡು ಬಿಡಿ. ಈ ಬೆಂಕಿಮಳೆಯನ್ನು ಸುರಿಸುವುದಕ್ಕೆ ಬರುವುದಿದ್ದರೆ ಅದನ್ನು ಸುರಿಸಿಬಿಡಲಿ, ನಾವೆಲ್ಲಾ ಸತ್ತುಹೋಗುತ್ತೇವೆ ಎಂದು. ಇಂತಹ ಮಾತುಗಳನ್ನು ಕೇಳಿದಾಗ ನನಗೆ ಹೃದಯ ತುಂಬಿ ಬಂತು. ಆದ್ದರಿಂದ ಅದರ ಕಡೆಗೆ ಸರ್ಕಾರದವರು ಗಮನಕೊಟ್ಟು ಸರ್ವರೀತಿಯಲ್ಲೂ ಅವರಿಗೆ ಸೌಲಭ್ಯಗಳನ್ನು ಒದಗಿಸಿಬೇಕು. ಗ್ರಾಮಾಂತರದಲ್ಲಿ ಭೂ ಅಭಿವೃದ್ಧಿ ಬ್ಯಾಂಕ್‌ಗಳನ್ನು ತೆರೆದು ಅದರ ಮುಖಾಂತರ ಅವರಿಗೆ ಸಹಾಯ ಮಾಡಬೇಕು. ಈ ಬ್ಯಾಂಕ್‌ಗಳಿಂದ ಅವರಿಗೆ ಸಾಲ ದೊರೆಯುವಂತೆ ಏರ್ಪಾಡು ಮಾಡಬೇಕು. ಅಲ್ಲಿ ಒಬ್ಬ ಪ್ರತಿನಿಧಿ ಅವರಿಗೆ ಸಾಲವನ್ನು ಕೊಡಿಸಬೇಕು ಎಂದು ಹೇಳಿ ಶಿಗ್ಲಿ ಗ್ರಾಮಕ್ಕೆ ಕರೆದ ಕೊಂಡು ಹೋಗಿದ್ದನು ಈ ಸಾಲವನ್ನು ಕೊಡಲು ವಿಧಿನಿಯಮ, ರೀತಿನೀತಿಯನ್ನು ಅನುಸರಿಬೇಕೆಂದು ಹೇಳಿ 8 ದಿನಗಳ ಕಾಲ ಅಲ್ಲಿ ತಡೆದು ನಿಲ್ಲಿಸಿದರು. ಆ ಪ್ರತಿನಿಧಿ ಕೆಲಸವೆಲ್ಲಾ ಮುಗಿಸಿ ಮೇಲೆ ಅವನ ಊರಿಗೆ ತಿರುಗಿ ಹೋಗುವುದಕ್ಕೆ ಅವನಿಗೆ ಸಾಧ್ಯವಾಗಲಿಲ್ಲ. ಅವನು ಅರ್ಧ ದಾದಯಲ್ಲಿ ಸತ್ತುಹೋಗಿದ್ದಾನೆ. ಈ ರೀತಿಯ ಪರಿಸ್ಥಿತಿಗಳು ಗ್ರಾಮಾಂತರದಲ್ಲಿ ನಡೆಯುತ್ತವೆ. ಗ್ರಾಮಾಂತರ ಜನರ ಜೀವನ ಇವತ್ತು ಬಹಳ ಅಸ್ತವ್ಯಸ್ತಗೊಂಡಿದೆ. ಆದ್ದರಿಂದ ಇವತ್ತಿನ ದಿವಸ ನಾನು ಹೇಳಬಯಸುವುದೇನೆಂದರೆ ಈ ಷಹರಗಳನ್ನು ಸುಂದರಗೊಳಿಸುವುದಕ್ಕಾಗಿ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುವುದನ್ನು ಬಂದ್ ಮಾಡಿದರೂ ಅಡ್ಡಿ ಇಲ್ಲ. ಗ್ರಾಮಾಂತರ ಜನರಿಗೆ ಸೌಲಭ್ಯಗಳನ್ನು ಒದಗಿಸಲು ಆಧ್ಯತೆಯನ್ನು ಕೊಡಬೇಕೆಂಬ ಮನವಿಯನ್ನು ಹೇಳುವುದಕ್ಕೆ ನಾನು ಇಚ್ಛೆಪಡುತ್ತೇನೆ.

ಇನ್ನು ಎರಡನೆಯದಾಗಿ ಭೂಶಾಸನ ಕಾಯಿದೆ ಬಗ್ಗೆ ರಾಜ್ಯಪಾಲರು ತಮ್ಮ ಭಾಷಣದಲ್ಲಿ ನಿವೇದಿಸಿದ್ದಾರೆ ನಾನು ಹೇಳುತ್ತೇನೆ, ಈ ಭೂ ಶಾಸನ ಕಾಯಿದೆಯನ್ನು ಜಾರಿಗೆ ತಂದು ಇವತ್ತಿನದಿವಸ ಅನೇಕ ಜನ ತಮ್ಮ ಭೂಮಿಗಳನ್ನು ಕಳೆದುಕೊಂಡಿದ್ದಾರೆ. ಒಂದು ಉದಾಹರಣೆಯನ್ನು ಹೇಳಬೇಕಾದರೆ ಒಬ್ಬ ಬಡತನದ ಸಲುವಾಗಿ 300 ರೂಪಾಯಿಯನ್ನು ಸಾಲ ತೆಗೆದುಕೊಳ್ಳಲು ತನ್ನ 7 ಎಕರೆ ಭೂಮಿಯನ್ನು ಅಡವು ಇಟ್ಟಿದ್ದಾನೆ. ಈ ವ್ಯವಸಾಯ ಭೂಮಿಯಲ್ಲಿ ಆತನಿಗೆ ಒಂದು ಎಕರೆಯಾದರೂ ಗೇಣಿಗೆ ಇಲ್ಲವಾಗಿದೆ. ತಾನು ತೆಗೆದುಕೊಂಡ ದುಡ್ಡಿಗೆ ಬಡ್ಡಿ ಮಾತ್ರ ಕೊಡಬೇಕಾಗಿದೆ. ಈ ಬಡ್ಡಿ ಎಲ್ಲಾ ಸೇರಿ ಒಟ್ಟು 700ರೂ ಆಗಿದೆ. ಅವನಿಗೆ ಈ 700ರೂ

ಗಳನ್ನು ಕೊಡುವುದಕ್ಕೆ ಸಾಧ್ಯವಾಗಲಿಲ್ಲ. ಅತನ ಭೂಮಿಯನ್ನು ತೆಗೆದುಕೊಂಡಂತವನ ಕೋರ್ಟಿಗೆ ದಾವೆ ಹಾಕಿದ್ದಾನೆ ಅದರ ಬಗ್ಗೆ ಡಿಕ್ರಿಯೂ ಆಯಿತು. ಆತನ ಭೂಮಿಯನ್ನು ತೆಗೆದುಕೊಂಡಂತವನು ಆ ರೈತನ ಗೇಣೀದಾರ ಎಂದು ಹೆಸರಿಸಿ ತೆಗೆದುಕೊಂಡಿದ್ದಾನೆ. ಇಂತಹ ಅನ್ಯಾಯಗಳನ್ನು ನಿವಾರಣೆ ಮಾಡಲು ಈ ಭೂ ನ್ಯಾಯಮಂಡಳಿಗಳು ಬಹಳ ಪ್ರಾಮಾಣಿಕವಾಗಿ ಕೆಲಸಕಾರ್ಯಗಳನ್ನು ಮಾಡುತ್ತಿದ್ದಾರೆ. ಬಡವರ ಜೀವನದಲ್ಲಿ ಒಂದು ಆಶಾಕಿರಣವನ್ನು ಮೂಡಿಸುವುದಕ್ಕೆ ಇದರಿಂದ ಸಾಧ್ಯವಾಗಿದೆ ಎಂದು ನಾನು ಹೇಳುತ್ತೇನೆ. ಇನ್ನು ಎರಡನೆಯ ದಾಗಿ ನಮ್ಮ ಸರ್ಕಾರದವರು ಅಲ್ಪ ಸಂಖ್ಯಾತವರ್ಗದವರಿಗೆ ರಕ್ಷಣೆಯನ್ನು ಕೊಟ್ಟಿದ್ದಾರೆ. ಈ ಹಿಂದುಳಿದ ವರ್ಗದವರ ಮಾಲಿಕೆಯಲ್ಲಿ ಈ ಮುಸ್ಲಿಮರನ್ನೂ, ಒಕ್ಕಲಿಗರನ್ನೂ ಸೇರಿಸಿ ಅವರಿಗೆ ವಿದ್ಯಾ ಇಲಾಖೆಯಲ್ಲಾಗಲೀ, ಸರ್ಕಾರಿ ನೌಕರಿಯಲ್ಲಿ ಆಗಲೀ 40ರಷ್ಟು ಭಾಗ ರಿಸರ್ವೇಷನ್ ಇಟ್ಟು, ಅವರಿಗೆ ಕೆಲಸ ಸಿಕ್ಕಬೇಕು ಎಂದು ಮಾಡಿರುವುದನ್ನು ನಾನು ಹೆಮ್ಮೆಪಟ್ಟುಕೊಂಡು ಈ ಮಾತನ್ನು ಹೇಳುತ್ತಿದ್ದೇನೆ. ಇನ್ನೊಂದು ಮಾತು ಏನೆಂದರೆ ಈ ಮೈನಾರಿಟೀಸ್ ಕಮ್ಯುನಿಟಿ ಯವರು, ಅಲ್ಪಸಂಖ್ಯಾತವರ್ಗದವರು ದೇಶದಲ್ಲಿ ಬಹಳಷ್ಟು ಇದ್ದಾರೆ. ಈ ತುರ್ತುಪರಿಸ್ಥಿತಿ ಹೋದಾಗಿನಿಂದ ಅವರಿಗೆ ಒಂದು ಭೀತಿ ಆವರಿಸಿದೆ. ಯಾವ ಸಂಘಸಂಸ್ಥೆಗಳ ಮಾನ್ಯತೆಯನ್ನು ಸರ್ಕಾರದವರು ರದ್ದುಪಡಿಸಿದ್ದರೋ ಯಾರು ಇವರೆಗೆ ಬಂಧನಕ್ಕೆ ಒಳಗಾಗಿದ್ದರೋ ಅವರೆಲ್ಲರೂ ಇವತ್ತು ಹೊರಗೆ ಬಂದು ಈ ಶಸ್ತ್ರಗಳ ಅಭ್ಯಾಸ ಮಾಡುವುದನ್ನು ನೋಡಿದಾಗ ಮತ್ತು ಅವರು ದೊಡ್ಡ ದೊಡ್ಡ ಮಹಾಸ್ವಾಮಿಗಳ ಆಶೀರ್ವಾದವನ್ನು ಪಡೆದು ಬೀದಿಗೆ ಬಂದು ಕಸರತ್ತು ಮಾಡುವುದನ್ನು ನೋಡಿದಾಗ ಈ ಅಲ್ಪಸಂಖ್ಯಾತವರ್ಗದವರಲ್ಲಿ ಈ ಮುಸ್ಲಿಮರು ಏನು ಸೇರಿದ್ದಾರೆ. ಅವರೆಲ್ಲರ ಮನಸ್ಸಿನಲ್ಲಿ ಒಂದು ಭಯದ ವಾತಾವರಣ ಇವತ್ತಿನದಿವಸ ನಿರ್ಮಾಣವಾಗಿದೆ. ಆದ್ದರಿಂದ ಈ ಅಲ್ಪಸಂಖ್ಯಾತವರ್ಗದವರಿಗೆ ಸರ್ಕಾರದವರು ಇನ್ನೂ ಹೆಚ್ಚಿನ ರಕ್ಷಣೆಯನ್ನು ಕೊಡಬೇಕು ಎನ್ನತಕ್ಕಂಥ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ಏಕೆಂದರೆ ಇದುವರೆಗೂ ನಡೆದಿರತಕ್ಕಂಥಾದ್ದನ್ನು ನೋಡಿದರೆ ಧರಣಿಗೆ ಅನುದಿನ ರಕ್ತಾಭಿಷೇಕಗೈದು ಜಾತಿಯ ಮತ್ಸರದ ಜ್ವಾಲೆಯನ್ನು ಭುಗಿಲ್ಲೆನ್ನಿಸಿ ವಿಧ್ವಂಸದ ರಚನೆಯ ಘಾಯ ಇನ್ನೂ ಮಾಗಿಲ್ಲ ಈ ಮಂಗಳೂರು, ಹುಬ್ಬಳ್ಳಿಯಲ್ಲಿ ನಡೆದ ಘಟನೆಗಳು ಇನ್ನೂ ಮಾಗಿಲ್ಲ. ಈ ಗಾಯಗಳು ಇನ್ನೂ ಉಳಿದಿರುವಾಗ ಹುಬ್ಬಳ್ಳಿಯಲ್ಲಿ ಆರ್. ಎಸ್. ಎಸ್ ಸಂಘಸಂಸ್ಥೆಗಳವರು ಸಾಂಸ್ಕೃತಿಕ ಕಾರ್ಯಕ್ರಮವನ್ನು ಮಾಡುತ್ತಿದ್ದಾರೆ. ಮಾಡಲಿ, ಅದಕ್ಕೆ ಯಾರ ಆಕ್ಷೇಪಣೆಯೂ ಬರುವುದಿಲ್ಲ. ಅದನ್ನು ಬಿಟ್ಟು ಬೇರೆ ಚಟುವಟಿಕೆಗಳಲ್ಲಿ ಅವರು ತೊಡಗಿದರೆ ಈ ಅಲ್ಪ ಸಂಖ್ಯಾತರ ಮನಸ್ಸಿನಲ್ಲಿ ಒಂದು ತರಹದ ಶಂಕೆಯನ್ನು ಉಂಟು ಮಾಡುತ್ತದೆ. ಕಾರಣ ಸರ್ಕಾರದವರು ಅವರ ರಕ್ಷಣೆಗೆ ಬರಬೇಕು. ಆರ್ಥಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ ಹಿಂದುಳಿದಿರುವ ಮುಸ್ಲಿಂ ಸಮಾಜವನ್ನು ಚೆನ್ನಾಗಿ ಅಭ್ಯಾಸ ಮಾಡಿ, ಹಿಂದುಳಿದ ವರ್ಗಗಳ ಅಭಿವೃದ್ಧಿಗಾಗಿ ಇಪ್ಪತ್ತೈದೂವರೆ ಕೋಟಿ ರೂಪಾಯಿ ಇಟ್ಟು ಸ್ವತಂತ್ರವಾದ ಮಂಡಲಿಯನ್ನು ರಚನೆ ಮಾಡಿ ಅವರ ಕ್ಷೇಮಾಭಿವೃದ್ಧಿಯನ್ನು ಮಾಡಲಿಕ್ಕೆ ಸರ್ಕಾರ ಹೇಗೆ ಸತ್‌ಸಂಪ್ರದಾಯವನ್ನು ಹಾಕಿಕೊಂಡಿದೆಯೋ ಅದೇ ರೀತಿ ಕರ್ನಾಟಕದಲ್ಲಿರತಕ್ಕ ಲಕ್ಷಾಂತರ ಮುಸ್ಲಿಂ ಪ್ರಜೆಗಳ ಉದ್ಧಾರವೂ ಈ ಸರ್ಕಾರದಿಂದ ಆಗಬೇಕಾದ್ದು ಅವಶ್ಯಕ ಎಂದು ಭಾವಿಸಿಕೊಂಡಿದ್ದೇನೆ. ಆರ್ಥಿಕ, ಸಾಮಾಜಿಕ, ರಾಜಕೀಯ ಮತ್ತು ಸಾಂಸ್ಕೃತಿಕ ದಿಸೆಯಲ್ಲಿ ಇವರು ಮಾಡಿರತಕ್ಕ ಪ್ರಗತಿಯನ್ನಾಗಲಿ ಅಭ್ಯಾಸ ಮಾಡಿ ಕೆಲವು ಕೋಟಿ ರೂಪಾಯಿಗಳನ್ನು ಇದಕ್ಕಾಗಿ ಇಟ್ಟು ಒಂದು ಮೈನಾರಿಟಿ ಡೆವಲಪ್‌ಮೆಂಟ್ ಕಾರ್ಪೋರೇಷನ್ ಅಥವಾ ಬೋರ್ಡನ್ನು ಮಾಡಿ ಮುಸ್ಲಿಂ ಜನರ ಉದ್ಧಾರವನ್ನು ಮಾಡಬೇಕು ಎಂದು ಹೇಳುತ್ತೇನೆ ಆ ಕಾರ್ಯವನ್ನು ನಮ್ಮ ಸರ್ಕಾರ ಮಾಡಿದ್ದೇ ಆದರೆ ಜನ್ಮಜನ್ಮಾಂತರಕ್ಕೂ ಈ ಸಮಾಜ ಋಣಿಯಾಗಿರುತ್ತದೆ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ ಅದೇರೀತಿಯಾಗಿ ಸರ್ಕಾರದವರು ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ ಈಗ ವಿದ್ಯಾರ್ಥಿಗಳಲ್ಲಿ ಒಂದು ತರಹದ ಭೀತಿ ಆವರಿಸಿದೆ ಬಿ.ಎ.; ಎಂ ಎ ಮಾಡಿ ಅನೇಕ ವರ್ಷಗಳವರೆಗೆ ಅಲೆದಾಡಿದರೂ ನೌಕರಿ ಸಿಗುತ್ತಿಲ್ಲ. ವಿಳಂಬವಾಗುತ್ತಿದೆ. ಈಗ ರಿಟೈರ್‌ಮೆಂಟ್ ವಯಸ್ಸನ್ನು 55ಕ್ಕೆ ಇಳಿಸಿದ್ದೀರಿ ಮತ್ತು ನೌಕರಿಗೆ ಸೇರಬೇಕಾದರೆ 28 ವರ್ಷ ವಯೋಮಿತಿ ನಿಗದಿ ಮಾಡಿದ್ದೀರಿ ಇದನ್ನು 35 ವರ್ಷಕ್ಕೆ ಏರಿಸಿದರೆ ಅನುಕೂಲವಾಗುತ್ತದೆ. ನಿರುದ್ಯೋಗ ಸಮಸ್ಯೆ ಹೆಚ್ಚಾಗಿ ಅನೇಕ ವಿದ್ಯಾವಂತ ತರುಣರಿಗೆ ನಿರಾಶೆಯಾಗಿರುವುದರಿಂದ ಈ ವಯೋಮಿತಿ

ಯನ್ನು 35 ವರ್ಷಕ್ಕೆ ಏರಿಸಿದರೆ ಅವರು ಇನ್ನೊಂದು ಕಡೆ ನೌಕರಿ ಹುಡುಕುವುದಕ್ಕೆ ಅನುಕೂಲ ವಾಗುತ್ತದೆ. ಇಲ್ಲದಿದ್ದರೆ ತರುಣರಲ್ಲಿ ನಿರಾಶೆ ವಾತಾವರ್ಣ ಬಂದು ಕ್ಷೋಭೆ ಬಂದು ಏನೂ ಮಾಡಲಾರದೆ ಸುಮ್ಮನೆ ಕೂಡತಕ್ಕ ಸ್ಥಿತಿ ಬರುತ್ತದೆ ಹಾಗಾಗದ ರೀತಿಯಲ್ಲಿ ಸರ್ಕಾರಿ ನೌಕರಿಗೆ ಅರ್ಜಿ ಹಾಕಲು ಇರುವ ವಯೋಮಿತಿಯನ್ನು ಹೆಚ್ಚಿಸಬೇಕು ಎಂಬ ಕೋರಿಕೆಯನ್ನು ಈ ಸಂದರ್ಭ ದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಹುಬ್ಬಳ್ಳಿ, ಧಾರವಾಡ ಮಹಾ ನಗರದ ಜನ ನೀರಿಗಾಗಿ ಪರಿತಪಿಸುತ್ತಿದ್ದಾರೆ. ಫರ್ಲಾಂಗ ಗಟ್ಟಲೆ ಕೊಡಗಳನ್ನು ಇಟ್ಟುಕೊಂಡು ಪುರುಷರು ಸ್ತ್ರೀಯರು ನಿಲ್ಲತಕ್ಕ ದೃಶ್ಯ ಅಲ್ಲದೆ. 8 ಕೋಟಿ ರೂಪಾಯಿ ವೆಚ್ಚದ ಮಲಪ್ರಭಾ ಯೋಜನೆ ಹುಬ್ಬಳ್ಳಿ ಧಾರವಾಡಕ್ಕೆ ಮಂಜೂರಾಗಿದ್ದರೂ ಕೂಡ ಅದು ಆಮೆ ನಡೆಯಂತೆ ಮಂದಗತಿಯಿಂದ ಸಾಗಿದೆ. ಇದಕ್ಕೆ ಆಧ್ಯತೆ ಕೊಟ್ಟು ಕ್ಷಿಪ್ರದಲ್ಲಿಯೇ ಕೆಲಸಕಾರ್ಯಗಳನ್ನು ಮಾಡಿಸಬೇಕು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ ಹುಬ್ಬಳ್ಳಿ ಎಂದ ತಕ್ಷಣ ಹೂವಿನ ಸುಗಂಧದಂತೆ ಆ ಊರಿದೆ ಎಂದು ಎಲ್ಲರೂ ಭಾವಿಸಬಾರದು ಅಲ್ಲಿ ದುರ್ಗಂಧದಿಂದ ಕೂಡಿದ ಅನೇಕ ಕೊಳಚೆ ಪ್ರದೇಶಗಳಿದ್ದು ಜನ ವಾಸವಾಗಿದ್ದಾರೆ ಕೊಳಚೆ ನಿವಾರಣೆಗಾಗಿ 67 ಲಕ್ಷ ರೂಪಾಯಿಯನ್ನು ನಮ್ಮ ಸರ್ಕಾರದವರು ಇಟ್ಟಿದ್ದಾರೆ ಕೊಳಚೆ ನಿರ್ಮೂಲನ ಕಾರ್ಯ ಷಹರೆಗಳಲ್ಲಿ ಆಗುತ್ತಿಲ್ಲ ಮತ್ತು ಅಲ್ಲಿರತಕ್ಕ ಜನರಿಗೆ ಸೈಟುಗಳ ವಿತರಣೆ ಸುಲಭರೀತಿಯಿಂದ ಆಗುತ್ತಿಲ್ಲ ಆದಕಾರಣ ಸರ್ಕಾರದವರು ಆ ಜನರ ಕಡೆಗೂ ಆಧ್ಯತೆ ಕೊಟ್ಟು ಶೀಘ್ರವೇ ಅವರಿಗೂ ಕೂಡ ನಿವೇಶನಗಳು ವಿತರಣೆ ಆಗುವಂತಹ ರೀತಿಯಲ್ಲಿ ಕಾರ್ಯಕ್ರಮಗಳನ್ನು ತೆಗೆದುಕೊಂಡು ಯಶಸ್ವಿ ಮಾಡಬೇಕು ಎಂಬ ಮಾತನ್ನು ಹೇಳಿ ಇಷ್ಟು ಹೊತ್ತು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಸನ್ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ಸನ್ಮಾನ್ಯ ಸಭಾಧ್ಯಕ್ಷರೆ, ನನ್ನ ಸ್ನೇಹಿತರಾದಂಥ ಪ್ರೊಫೆಸರ್ ಸನದಿ ಅವರು ಸರಳ. ಸುಂದರವಾದ ಭಾಷಣವನ್ನು ಮಾಡಿದ್ದಾರೆ. ಅವರ ಅನಿಸಿಕೆಗಳನ್ನು ಅಭಿವ್ಯಕ್ತಗೊಳಿಸಿದ್ದಾರೆ ಅವರು ಅನೇಕ ಅನಿಸಿಕೆಗಳಲ್ಲಿ ನಾನೂ ಕೂಡ ಸಹಭಾಗಿಯಾಗುವುದಕ್ಕೆ ಅಪೇಕ್ಷೆಪಡುತ್ತೇನೆ ಮುಖ್ಯವಾಗಿ ಗ್ರಾಮಗಳಿಗೆ ಪ್ರಥಮ ಆಧ್ಯತೆಯನ್ನು ಕೊಡಬೇಕು ಎಂಬ ಅವರ ಮಾತು ಸರಿದೆ ಅದು ನೂರಕ್ಕೆ ನೂರರಷ್ಟು ಒಪ್ಪುವಂಥ ವಿಚಾರ ಆ ಬಗ್ಗೆ ಅವರ ಅಭಿಪ್ರಾಯ ಸೂಕ್ತವೂ ಸಮಂಜಸವೂ ಆಗಿದೆ ಆ ಮಾತುಗಳನ್ನು ಕಳೆದ ಮೂವತ್ತು ವರ್ಷಗಳಿಂದ ನಾವು ಹೇಳಿಕೊಂಡು ಬಂದಿದ್ದೇವೆ ಹಳ್ಳಿಯ ಜನರ ಬಾಳು ಬಂಗಾರ ವಾಗಬೇಕು ಅವರ ಬದುಕು ಹಸನಾಗಬೇಕು ಎಂಬ ಸೂತ್ರವನ್ನು ಇಟ್ಟುಕೊಂಡು ಆ ತತ್ವ ಸಿದ್ಧಾಂತದ ಮೇಲೆ ಹೋರಾಟ ಮಾಡಿಕೊಂಡು ಬಂದಂಥ ಜನ ಈಗ ಕೇಂದ್ರದಲ್ಲಿ ಅನೇಕರು ಅಧಿಕಾರಕ್ಕೆ ಬಂದಿದ್ದಾರೆ ಅವರನ್ನು ನಾನು ಹೃತ್ಪೂರ್ವಕವಾಗಿ ನಮ್ಮ ರಾಜ್ಯದ ಜನರ ಪರವಾಗಿ ಅಭಿನಂದಿಸುವುದಕ್ಕೆ ಅಪೇಕ್ಷೆಪಡುತ್ತೇನೆ ನನ್ನ ಸ್ನೇಹಿತರಾದಂಥ ಸನದಿಯವರಿಗೆ ಒಂದು ಕಳವಳವಿರುವುದು ಕಂಡುಬಂತು ನಮ್ಮ ರಾಜ್ಯದಲ್ಲಿರತಕ್ಕ ರಾಷ್ಟ್ರದಲ್ಲಿರತಕ್ಕ ಅಲ್ಪಸಂಖ್ಯಾತರಿಗೆ ಮುಸಲ್ಮಾನರಿಗೆ ಕ್ರಿಶ್ಚಿಯನ್ನರಿಗೆ ಮತ್ತಿತರರಿಗೆ ಇದುವರೆಗೆ ದೊರೆತಂಥ ಸೌಲಭ್ಯಗಳು ಮುಂದೆ ಏನಾಗುತ್ತದೋ ಎಂಬ ಶಂಕೆಯು ತಲೆದೋರಿರುವ ಹಾಗೆ ಅವರಿಗೆ ಅನ್ನಿಸಿದೆ ಎಂದು ನನಗೆ ಕಾಣುತ್ತದೆ ಆದರೆ ಮಾನ್ಯ ಅಧ್ಯಕ್ಷರೆ ತಮ್ಮ ಮೂಲಕ ಈ ರಾಜ್ಯದ ಅಲ್ಪ ಸಂಖ್ಯಾತರಿಗೆ, ಹಿಂದುಳಿದವರಿಗೆ, ಹರಿಜನಗಿರಿಜನರಿಗೆ ನಾನು ಜವಾಬ್ದಾರಿಯಿಂದ ಒಂದು ಮಾತನ್ನು ಹೇಳುವುದಕ್ಕೆ ಅಪೇಕ್ಷೆಪಡುತ್ತೇನೆ.

ಮಾನ್ಯ ಸದಸ್ಯರೊಬ್ಬರು.—ಕೋಣಂದೂರು ಲಿಂಗಪ್ಪನವರು ಸಂಸತ್ ಸದಸ್ಯರು ಮಾತನಾಡಿದ ಹಾಗೆ ಮಾತನಾಡುತ್ತಿದ್ದಾರೆ

ಶ್ರೀ ಕೋಣಂದೂರು ಲಿಂಗಪ್ಪ.—ನಾನು ಸಂಸತ್ತಿನ ಒಬ್ಬ ಪ್ರತಿನಿಧಿ ಸಂಸತ್ತಿನಲ್ಲಿ ಯಾವ ಪಕ್ಷ (ಜನತಾ ಪಕ್ಷ) ಅಧಿಕಾರದಲ್ಲಿದೆಯೋ ಆ ಪಕ್ಷದ ವಿಧಾನಸಭಾ ಸದಸ್ಯ ನಾನು ಆದ್ದರಿಂದ ಆ ಬಗ್ಗೆ ಹೇಳುವುದಕ್ಕೆ ಅಧಿಕಾರವಿದೆ 100 ಜನರಲ್ಲಿ 3 ಜನರಿಗೆ ಮನೆ ಕಟ್ಟಿಕೊಟ್ಟು 1000 ಜನರಲ್ಲ 6 ಜನರಿಗೆ ಸಾಲ ಕೊಟ್ಟು ಹಾಗೆ ಮಾಡಿದ್ದೇವೆ ಹೀಗೆ ಮಾಡಿದ್ದೇವೆ ಎಂದು ಹೇಳಿ ಮನುಷ್ಯ ಮನುಷ್ಯರಲ್ಲಿ ಬಾಂಧವ್ಯವನ್ನು. ಸ್ನೇಹವನ್ನು ಕದುರಿಸಲಿಕ್ಕೆ ಪ್ರಯತ್ನ ಪಡದೆ ಹಿಂದೂಗಳಲ್ಲ,

ಮುಸಲ್ಮಾನರಲ್ಲಿ ಭೇಧದ ಬೀಜವನ್ನು ಬಿತ್ತಿ ರಾಷ್ಟ್ರದ ಅಲ್ಪಸಂಖ್ಯಾತರ ಹರಿಜನರ ಹೃದಯದಲ್ಲಿ ಇತರರ ಬಗ್ಗೆ ಭೀತಿಯ ಬೀಜವನ್ನು ಬಿತ್ತಿದ ಕೀರ್ತಿ 30 ವರ್ಷದಿಂದ ಯಾರು ಅಧಿಕಾರಗದ್ದುಗೆಯಲ್ಲಿ ಆಳಿಕೊಂಡು ಬಂದರೋ ಅಂತಹ ಮಹಾನುಭಾವರಿಗೆ ಸಲ್ಲುತ್ತದೆ ನನ್ನ ಪಕ್ಷದ ಪರವಾಗಿ ಒಂದು ಮಾತನ್ನು ಹೇಳುವುದಕ್ಕೆ ಅಪೇಕ್ಷೆ ಪಡುತ್ತೇನೆ ನಮ್ಮ ಪಕ್ಷ ಜನತಾ ಪಕ್ಷ, ಈ ರಾಜ್ಯದ ಮಾತ್ರವಲ್ಲ ಈ ರಾಷ್ಟ್ರದ ಎಲ್ಲ ಅಲ್ಪಸಂಖ್ಯಾತರಿಗೆ ಹಿಂದುಳಿದವರಿಗೆ ಹರಿಜನಗಿರಿಜನರಿಗೆ ವಿಶೇಷ ಸವಲತ್ತನ್ನು ಕೊಡತಕ್ಕ ವಾಗ್ದಾನ ಮಾಡಿವೆ ನಾವು ಅವರ ಸಲುವಾಗಿ ಎಂದೂ ಕೇವಲ ಕಣ್ಣೊರೆಸುವ ಮಾತನ್ನಾಗಲೀ ಭರವಸೆಯನ್ನಾಗಲೀ ಕೊಡುವುದಿಲ್ಲ ಮಾಡಿ ತೋರಿಸುತ್ತೇವೆ ಎಂಬ ಮಾತನ್ನು ಹೇಳುತ್ತೇನೆ. ಅದಕ್ಕೋಸ್ಕರ ನಾವು ನಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ....

ಶ್ರೀ ಕೆ. ಶ್ರೀರಾಮುಲು.—ಇಂದಿನ ಪ್ರಧಾನಿ (ಮುರಾರ್ಜಿ ದೇಸಾಯಿ) ಯವರು ಚುನಾವಣಾ ಭಾಷಣಕ್ಕಾಗಿ ಬೆಂಗಳೂರಿಗೆ ಬಂದು ನ್ಯಾಷನಲ್ ಹೈಸ್ಕೂಲ್ ಮೈದಾನದಲ್ಲಿ ಭಾಷಣ ಮಾಡುವಾಗ ನಮಗೆ ಮೂರು ವರ್ಷ ಅಧಿಕಾರ ಕೊಡಿ ನಿರುದ್ಯೋಗ ನಿವಾರಣೆ ಮಾಡುತ್ತೇವೆ ಎಂದು ಹೇಳಿದ್ದಾರೆ ಅದು ಎಲ್ಲ ಪತ್ರಿಕೆಗಳಲ್ಲೂ ಬಂದಿದೆ ಆದರೆ ಈಗ 10 ವರ್ಷದಲ್ಲಿ ನಿರುದ್ಯೋಗ ನಿವಾರಣೆ ಮಾಡುತ್ತೇವೆ ಎಂದು ಹೇಳಿದ್ದಾರೆ ಅಧಿಕಾರಕ್ಕೆ ಬರುವ ಮೊದಲು ಮೂರು ವರ್ಷ ಅಧಿಕಾರ ಕೊಡಿ ಮಾಡುತ್ತೇವೆ ಎಂದು ಹೇಳಿ ಬಂದಮೇಲೆ 10 ವರ್ಷದಲ್ಲಿ ಎಂದು ಹೇಳುತ್ತಾರಲ್ಲಾ ಇದು ಸರಿಯೆ?

ಶ್ರೀ ಕೋಣಂದೂರು ಲಿಂಗಪ್ಪ.—ನಿರುದ್ಯೋಗದ ಬಗ್ಗೆ ಬಡತನದ ಬಗ್ಗೆ......

ಅಧ್ಯಕ್ಷರು.—ಮಾನ್ಯ ಸದಸ್ಯರಿಗೆ ಕೊಟ್ಟಿರುವುದು 10 ನಿಮಿಷಗಳು ಮಾತ್ರ ಬೇಗ ಮುಗಿಸಬೇಕು.

ಶ್ರೀ ಕೋಣಂದೂರು ಲಿಂಗಪ್ಪ.—ಹರಿಜನರಾದಿಯಾಗಿ ಅಲ್ಪಸಂಖ್ಯಾತರು, ಹಿಂದುಳಿದವರು ಯಾರು ಈ ರಾಜ್ಯದಲ್ಲಿದ್ದಾರೆ ಇವರು ಲವಲೇಶವೂ ಯಾವುದೇ ಅನುಮಾನ ಅಥವಾ ಶಂಕೆಗೆ ಒಳಗಾಗಬೇಕಾದ ಅಗತ್ಯ ಇಲ್ಲ ಪ್ರಣಾಳಿಕೆಯಲ್ಲಿ ನಾವು ಹೇಳಿದ್ದೇವೆ ಅದೇ ರೀತಿ ಮಾಡಿ ತೋರಿಸುತ್ತೇವೆ, ಮೈನಾರಿಟೀಸ್‌ಗೆ ರಕ್ಷಣೆ ಕೊಡುತ್ತೇವೆ.

ಶ್ರೀ ಎ.ಎಂ. ಬೆಳ್ಳಿಯಪ್ಪ.—ನೀವು ಅಲ್ಪ ಸಂಖ್ಯಾತರ ವಿಷಯ ಹೇಳುತ್ತಿದ್ದೀರಿ ಕೊಡಗು ಜಿಲ್ಲೆಯಲ್ಲಿ ಜನತಾ ಪಕ್ಷದವರು ಹರಿಜನಗಿರಿಜನರನ್ನು ಹಿಡಿದುಕೊಂಡು ಹೊಡೆದಿದ್ದಾರೆ ನಾಲ್ಕೈದು ಕೇಸ್‌ಗಳಾಗಿವೆ ಮತ್ತು ಕೆಲವರನ್ನು ಅರೆಸ್ಟ್ ಕೂಡ ಮಾಡಿದಾರೆ.

ಶ್ರೀ ಕೋಣಂದೂರು ಲಿಂಗಪ್ಪ.—ನೀವೇ ಕಾಂಗ್ರೆಸ್ಸಿನವರೇ ಕೆಲವು ಗೂಂಡಾಗಳನ್ನು ಬಿಟ್ಟು ಜನತಾಪಕ್ಷದವರ ಮೇಲೆ ಹೊಡೆಸಿದ್ದೀರಿ ಅಂಥ ನಿದರ್ಶನಗಳು ಬೇಕಾದಷ್ಟಿವೆ ರಾಷ್ಟ್ರದಲ್ಲಿರತಕ್ಕ ಅಲ್ಪಸಂಖ್ಯಾತರು, ಹರಿಜನರು ಗಿರಿಜನರು ಮತ್ತು ಹಿಂದುಳಿದವರ ಹಕ್ಕುಭಾದ್ಯತೆಗಳನ್ನು ಸಂಪೂರ್ಣವಾಗಿ ರಕ್ಷಿಸಲು ಅವಶ್ಯಕವಾದ ಸಿವಿಲ್ ರೈಟ್ಸ್ ಕಮಿಷನ್ ಒಂದನ್ನು ಶಾಶ್ವತವಾಗಿ ಸೃಷ್ಟಿ ಮಾಡುತ್ತೇವೆ ಆದುದರಿಂದ ನಮ್ಮ ಸ್ನೇಹಿತರಾದರು ಶಂಕೆಯನ್ನಿಟ್ಟುಕೊಂಡಿದ್ದರೆ ಅಂಥ ಶಂಕೆಯನ್ನಿಟ್ಟುಕೊಳ್ಳಬಾರದೆಂದು ಹೇಳಬಯಸುತ್ತೇನೆ ನಮ್ಮ ರಾಷ್ಟ್ರದಲ್ಲಿ ಬಹಳ ದೊಡ್ಡ ಪ್ರಗತಿಯನ್ನು ಸಾಧಿಸಿದ್ದೇವೆಂದು ಮಾನ್ಯ ಕಾಂಗ್ರೆಸ್ ಮಿತ್ರರು ಹೇಳುತ್ತಿದ್ದಾರೆ 20 ಅಂಶಗಳ ಬಗ್ಗೆಯಂತು ಬಹಳವಾಗಿ ಹೇಳಿದ್ದಾರೆ ಆದರಿಂದ ಯಾರಿಗಾದರೂ ಒಳ್ಳೆಯದಾಗಿದ್ದರೆ ಆ ಬಗ್ಗೆ ಕರುಬತಕ್ಕ ಜನ ನಾವಲ್ಲ ಮಲ ಹೊರುವ ಪದ್ಧತಿಯನ್ನು ರದ್ದು ಮಾಡಿದಾಗ ಅದಕ್ಕೆ ಮೆಚ್ಚಿಗೆಯನ್ನು ವ್ಯಕ್ತಪಡಿಸಿದ್ದೇವೆ ಉತ್ತಮವಾದ ಕಾಯಿದೆಗಳು ಜಾರಿಗೆ ಬಂದಾಗ ಅವುಗಳಿಗೆ ಮೆಚ್ಚಿಗೆಯನ್ನು ವ್ಯಕ್ತಪಡಿಸುವವರಲ್ಲಿ ನಾನು ಒಬ್ಬ ಒಳ್ಳೆಯದನ್ನು ಮಾಡಿದಾಗ ಅದು ಒಳ್ಳೆಯದಲ್ಲ ಎಂದು ಹೇಳುವವರು ನಾವಲ್ಲ ಈ 20 ಅಂಶಗಳನ್ನು ಜಾರಿಗೆ ತರುವುದಕ್ಕೆ ಕಾರಣರು ಯಾರು? ಇದಕ್ಕೆ ಕಾಂಗ್ರೆಸ್ಸಿನವರೇ ಕಾರಣವಿರಬೇಕು ಜೂನ್ 25 1975ರ ಅರ್ಧ ರಾತ್ರಿಯಲ್ಲಿ ದೇಶ ನಿದ್ದೆಯಲ್ಲಿದ್ದಾಗ 20 ಅಂಶಗಳ ಕಾರ್ಯಕ್ರಮವನ್ನು ಘೋಷಣೆ ಮಾಡಿದರು 9ನೇ ಮಾರ್ಚಿ 1975ರಂದು ಅಭಿನವ ಗಾಂಧಿ ಅಭಿನವ ಬುದ್ಧರಾದ ಶ್ರೀಮಾನ್ ಜಯಪ್ರಕಾಶ್ ನಾರಾಯಣ್‌ರವರ ನೇತೃತ್ವದಲ್ಲಿ ಲೋಕಸಭೆಯಲ್ಲಿ 20 ಅಂಶಗಳ ಕಾರ್ಯಕ್ರಮವನ್ನು ಮಂಡಿಸಿದರು ಇದನ್ನು ತಾವು

ಕಾರ್ಯಗತ ಮಾಡಬೇಕೆಂದು 20 ಅಂಶಗಳ ಬೇಡಿಕೆಗಳನ್ನು ರಾಷ್ಟ್ರಪತಿಗಳಿಗೆ ಮತ್ತು ಲೋಕಸಭಾ ಸದಸ್ಯರಿಗೆ ಕೊಟ್ಟರು ಈ ಒಂದು ಬೇಡಿಕೆಗಳು ಏನಿವೆ ಅವುಗಳ ಆಧಾರದ ಮೇಲೆ ಸಂಪೂರ್ಣವಾದ ಕ್ರಾಂತಿಕಾರಕ ಚಳುವಳಿ ರಾಷ್ಟ್ರದಲ್ಲಿ ನಡೆಯಿತು ಈ ವಿಚಾರವನ್ನು ತಾವು ಚನ್ನಾಗಿ ಮನವರಿಕೆ ಮಾಡಿಕೊಳ್ಳಬೇಕು ಈ 20 ಅಂಶಗಳ ಕಾರ್ಯಕ್ರಮದಿಂದ ಬಡವರಿಗೆ ಬಂಗಾರದ ಕಿರೀಟ ವನ್ನಿಟ್ಟಿದ್ದೇವೆಂಬ ಹೊಗಳಿಕೆಯ ಮಾತುಗಳನ್ನಾಡುವುದಾದರೆ ಅದಕ್ಕೆ ಮೂಲ ಕಾರಣರು ಮತ್ತು ಆದ್ಯ ಪ್ರವರ್ತಕರು ಶ್ರೀಮಾನ್ ಜಯಪ್ರಕಾಶ್ ನಾರಾಯಣರೇ ಹೊರತು ಶ್ರೀಮತಿ ಇಂದಿರಾ ಗಾಂಧಿಯವರುಲ್ಲಿಲ್ಲ.

3–00 ಪಿ. ಎಂ.

ಶ್ರೀ ಬಿ. ವಿ. ಕಕ್ಕಿಲಾಯ.—ಈ 20 ಅಂಶಗಳ ಕಾರ್ಯಕ್ರಮವನ್ನು ಜಾರಿ ಮಾಡಿದ್ದರಿಂದ ಅವರು ಸೋತರು ಎಂದು ಹೇಳುತ್ತೀರಾ?

ಶ್ರೀ ಕೋಣಂದೂರು ಲಿಂಗಪ್ಪ.—ಅವರು ಸೋಲಲಿಕ್ಕೆ ಅನೇಕ ಕಾರಣಗಳಿವೆ ಆ ಕಾರ್ಯಕ್ರಮ ವನ್ನು ಜಾರಿ ಮಾಡಿದ್ದರಿಂದ ಸೋತರು ಎಂದು ಹೇಳುವುದಿಲ್ಲ ಅವರ ಜೊತೆಯಲ್ಲಿ ಸೇರಿಕೊಂಡ ದೇಶದ್ರೋಹಿಗಳೇ ಅವರ ಸೋಲಿಗೆ ಕಾರಣರು ಎಂದು ಹೇಳಬಹುದು ಆದರೆ ಅವರ ಜೊತೆಯಲ್ಲಿ ಸೇರಿದವರೆಲ್ಲರೂ ಕೆಟ್ಟವರು ಎಂದು ಹೇಳುವುದಕ್ಕಾಗುವುದಿಲ್ಲ ಶ್ರೀಮತಿ ಇಂದಿರಾ ಗಾಂಧಿಯವರು ಮತ್ತು ಅವರ ಪುತ್ರರ ಪಕ್ಷವನ್ನು ದೇಶದ್ರೋಹಿಗಳ ಪಕ್ಷ ಎಂದು ಕರೆದುದ್ದನ್ನು ಕೇಳಿದ್ದೇನೆ. ಸೋಲು ಗೆಲುವು ಎಂಬುದು ಅವರಿಗೂ ಬರುತ್ತದೆ ನಮಗೂ ಬರುತ್ತದೆ ಆದಕಾರಣ ನಾನು ಅ ಬಗ್ಗೆ ಹೇಳುವುದಿಲ್ಲ.

ಶ್ರೀ ಬಿ. ಸುಬ್ಬಯ್ಯ ಶೆಟ್ಟಿ.—ಎಮರ್ಜನ್ಸಿ ಬರುವುದಕ್ಕೆ ಮೂಲ ಕಾರಣರು ಯಾರು?

ಶ್ರೀ ಕೋಣಂದೂರು ಲಿಂಗಪ್ಪ.—ಅದಕ್ಕೆ ಆ ಸ್ಥಾನ ಕಾರಣವೇ ಹೊರತು ಜನರೂ ಕಾರಣ ದೇಶವೂ ಕಾರಣವಲ್ಲವಲ್ಲ ಈ ದೇಶದಲ್ಲಿ ತುರ್ತು ಪರಿಸ್ಥಿತಿಯನ್ನು ತಂದು 2 ವರ್ಷಗಳ ಕಾಲ ದೇಶದ ಜನರನ್ನು ಗುಲಾಮರನ್ನಾಗಿ ಮಾಡಿದಂತಹ ಪಂಚ ಮಹಾಪಾತಕರನ್ನು ಹೆಸರಿಸದೆ ಹೋದರೆ ಲೋಪವಾಗುತ್ತದೆ ಯಾರು ಈ ದೇಶದ ಸ್ವಾತಂತ್ರ್ಯಕ್ಕೋಸ್ಕರ ತಮ್ಮ ತನು ಮನ ಧನ ಗಳನ್ನು ತ್ಯಾಗ ಮಾಡಿದರೋ ಪ್ರಾಣವನ್ನು ಅರ್ಪಿಸಿದರೋ ಅಂಥವರನ್ನು ಮನೆಗೆ ಕಳುಹಿಸಿ ತಮ್ಮ ಸ್ಥಾನವನ್ನು ಭದ್ರಗೊಳಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಿದ ಪಂಚ ಮಹಾಪಾತಕರು ಯಾರೆಂದರೆ ಶ್ರೀಮತಿ ಇಂದಿರಾಗಾಂಧಿ ಅವರ ಪುತ್ರ ಶ್ರೀ ಸಂಜಯ ಗಾಂಧಿ ಶ್ರೀ ಬನ್ಸಿಲಾಲ್ ಶ್ರೀ ವಿದ್ಯಾಚರಣ್ ಶುಕ್ಲ ಮತ್ತು ಶ್ರೀ ಬರೂವ ಈ ಪಂಚ ಮಹಾ ಪಾತಕರು ಈ ದೇಶದ ಜನರನ್ನು ತಮ್ಮ ಸರ್ವಾಧಿಕಾರದ ಅಡಿಯಲ್ಲಿ ಹಾಕಿ ತುಳಿದಿದ್ದರು.

ಅಧ್ಯಕ್ಷರು.—ಇಲ್ಲಿ ಏಕೆ ಪಾರ್ಲಿಮೆಂಟ್ ಭಾಷಣವನ್ನು ಮಾಡುತ್ತೀರಿ? ನಮ್ಮ ರಾಜ್ಯಪಾಲರ ಭಾಷಣದಲ್ಲಿ ಆ ವಿಷಯಗಳು ಎಲ್ಲಿಯಾದರೂ ಇವೆಯೆ?

ಶ್ರೀ ಕೋಣಂದೂರು ಲಿಂಗಪ್ಪ.—ಮಾನ್ಯ ರಾಜ್ಯಪಾಲರೇ ಅವರ ಕಡೆಯವರು ಅವರು ಪಂಚಶೀಲದ ಆದಾರದ ಮೇಲೆ ಅದಿಕಾರ ನಡೆಸಿದರು.

ಅಧ್ಯಕ್ಷರು.—ವಿನಾಕಾರಣ ಮಾತನಾಡಿದರೆ ಹೆಚ್ಚು ಕಾಲವನ್ನು ಕೊಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ಈ ಸಂದರ್ಭದಲ್ಲಿ ಈ ಕಾಲದಲ್ಲಿ ನಡೆದಂತಹ ಒಂದು ಮಾತನ್ನು ಹೇಳಬೇಕಾಗಿದೆ ಚುನಾವಣೆಗೆ ಮುಂಚೆ ನಮ್ಮ ರಾಜ್ಯದ ಮುಖ್ಯಮಂತ್ರಿಗಳು 28ನೇ ಫೆಬ್ರವರಿ 1977ರಂದು ರಾಜ್ಯದ ಎಲ್ಲ ಕಡೆಗಳಿಗೂ ತಲುಪುವಂತೆ ಒಂದು ಪ್ರಣಾಳಿಕೆಯನ್ನು ಕಳುಹಿಸಿ ಅದರಲ್ಲಿ ಲೋಕಸಭೆಯ ಚುನಾವಣೆಯಿಂದ ಕೇಂದ್ರ ಸರ್ಕಾರ ಮತ್ತಷ್ಟು ಭದ್ರವಾಗು ವಂತೆ ಆ ಮೂಲಕ ನಮ್ಮ ದೇಶ ಬಲವಾಗುವಂತೆ ಮಾಡಬೇಕು ಎಂದು ತಿಳಿಸಿದ್ದರು ಕೇಂದ್ರ ಸರ್ಕಾರ ದೊಡ್ಡ ಮರದ ಬುಡವಿದ್ದ ಹಾಗೆ ರಾಜ್ಯ ಸರ್ಕಾರಗಳು ಆ ಮರದ ಕೊಂಬೆಗಳಿದ್ದ ಹಾಗೆ ತುರ್ತು ಪರಿಸ್ಥಿತಿಯ ಪರಿಣಾಮ ಮೊನ್ನೆ ನಡೆದ ಚುನಾವಣೆಯಲ್ಲಿ ಗೊತ್ತಾಗಿದೆ.

ಇನ್ನು ಋಣ ವಿಮೋಚನೆ ಕಾಯಿದೆಯನ್ನು ತಂದಾಗ ಅದನ್ನು ತಾತ್ವಿಕವಾಗಿ ಸ್ವಾಗತಿಸಿದ್ದೇವೆ. ನಾವು ಹೇಳುವುದು ಜನರನ್ನು ಕೇವಲ ಖಾಸಗೀ ಜನರನ್ನು ಸಾಲದಿಂದ ವಿಮುಕ್ತಿ ಮಾಡಿದರೆ ಸಾಲದು ಬಡವರು ಯಾರು ಯಾರು ಸಹಕಾರ ಸಂಘಗಳಿಂದ ಮತ್ತು ಭೂ ಅಭಿವೃದ್ಧಿ ಬ್ಯಾಂಕುಗಳಿಂದ ಸರ್ಕಾರಿ ಸಾಲಗಳನ್ನು ತಂದಿದ್ದಾರೋ ಅವುಗಳನ್ನು ಸಹ ರದ್ದು ಮಾಡಬೇಕು ಅಂದಮಾತ್ರಕ್ಕೆ ಮಾನ್ಯ ಸಿದ್ಧವೀರಪ್ಪನವರಂಥವರ ಸಾಲವನ್ನು ರದ್ದು ಮಾಡಿ ಎಂದು ಹೇಳುವುದಿಲ್ಲ.

ಇನ್ನು ಇವರ 10 ವರ್ಷಗಳ ಆಳ್ವಿಕೆಯಲ್ಲಿ ಸಾಧಿಸಿದ ಪ್ರಗತಿಯ ಬಗ್ಗೆ ಸಂಕ್ಷಿಪ್ತವಾಗಿ ಹೇಳ ಬಯಸುತ್ತೇನೆ. 10 ವರ್ಷಗಳ ಹಿಂದೆ ಒಂದು ರೂಪಾಯಿನ ಮೌಲ್ಯ 54 ಪೈಸೆ ಇದ್ದರೆ ಇವತ್ತು 10 ಪೈಸೆಗೆ ಇಳಿದಿದೆ 10 ವರ್ಷಗಳ ಹಿಂದೆ 24 ಕೋಟಿ ಜನ ಬಡವರಿದ್ದರೆ 10 ವರ್ಷಗಳಿಂದ ಈಚೆಗೆ 42 ಕೋಟಿಗೆ ಮುಟ್ಟಿದೆ 10 ವರ್ಷಗಳ ಹಿಂದೆ 26 ಲಕ್ಷ ಮಂದಿ ನಿರುದ್ಯೋಗಿಗಳಿದ್ದರೆ. 10 ವರ್ಷಗಳಿಂದ ಈಚೆಗೆ ಒಂದು ಕೋಟಿಗೆ ಮುಟ್ಟಿದೆ ಅನಕ್ಷರಸ್ಥರ ಸಂಖ್ಯೆ 36 ಕೋಟಿ 10 ವರ್ಷದ ಕೆಳಗೆ ಇದ್ದರೆ ಇವತ್ತು 42 ಕೋಟಿ ಆಗಿದೆ ಇದು ಇವರು ಸಾಧಿಸಿರುವ ಪ್ರಗತಿ ಅಂದರೆ ಇವರು ಇವತ್ತು ಹೇಳುತ್ತಾರೆ ಬಹಳ ಒಳ್ಳೆಯ ಪ್ರಗತಿಯನ್ನು ಸಾಧಿಸಿದ್ದೇವೆ ಎಂದು ಮಾನ್ಯ ಅಧ್ಯಕ್ಷರೇ. ನಮ್ಮ ಗುರಿ ಅಂತ್ಯೋದಯ, ಅಂತ್ಯೋದಯದಲ್ಲಿ ದೇಶದಲ್ಲಿರತಕ್ಕ ಜನ ಯಾರಿದ್ದಾರೆ ಅವರ ಉದ್ಧಾರಕ್ಕೋಸ್ಕರ ನಾವು ಕಂಕಣ ತೊಟ್ಟು ನಿಂತಿದ್ದೇವೆ ಈ ಬಗ್ಗೆ ತಾವು ಚೆನ್ನಾಗಿ ನೆನಪಿನಲ್ಲಿಟ್ಟು ಕೊಳ್ಳಬೇಕು ಹಾಗೆಯೇ ತುರ್ತು ಪರಿಸ್ಥಿತಿಯ ಸಮಯದಲ್ಲಿ ಎಷ್ಟೋ ಜನ ವಿದ್ಯಾರ್ಥಿಗಳು. ಅಧ್ಯಾಪಕರುಗಳು ಕೆಲಸ ಹೋಗಿದೆ ಅವರು ಪರೀಕ್ಷೆಗೆ ಹೋಗುವಂತಿಲ್ಲ ಎಷ್ಟೋ ತೊಂದರೆಗಳನ್ನು ಇವರಿಗೆ ಕೊಟ್ಟಿದ್ದಾರೆ ಇವರ ಮೇಲಿನ ಕೇಸುಗಳನ್ನು ವಾಪಸ್ ತೆಗೆದುಕೊಂಡು ಅವರ ಜೀವನ ವನ್ನು ನಡೆಸುವುದಕ್ಕೆ ಬೇಕಾದಂಥ ಅನುಕೂಲತೆಗಳನ್ನು ಮಾಡಿಕೊಡಬೇಕು ಎಂದು ನಾನು ತಮ್ಮನ್ನು ಪ್ರಾರ್ಥಿಸುತ್ತೇನೆ.

ಭೂ ಸುಧಾರಣೆಯ ಬಗ್ಗೆ ಕೆಲವು ಮಾತುಗಳನ್ನು ಹೇಳುತ್ತೇನೆ ಚುನಾವಣೆಯ ಸಮಯ ದಲ್ಲಿ ಇವರು ಏನು ಅಪಪ್ರಚಾರ ಮಾಡಿದರು ಎಂದರೆ, ಜನತಾ ಪಕ್ಷ ಅಧಿಕಾರಕ್ಕೆ ಬಂದರೆ ಗೇಣಿ ದಾರರಿಂದ ಭೂಮಾಲಿಕರಿಗೆ ಭೂಮಿಯನ್ನು ವಾಪಸ್ ಕೊಡುವಂತೆ ಮಾಡುತ್ತದೆ ಎಂದು ಇಂಥ ಅಪಪ್ರಚಾರದಿಂದಲೇ ಅವರು ಈ ರಾಜ್ಯದಲ್ಲಿ ಗೆದ್ದು ಬಂದಿದ್ದಾರೆ.

ಶ್ರೀ ಡಿ.ಕೆ ನಾಯ್ಕರ್.—ರೆಸ್ಟೋರೇಷನ್ ಆಫ್ ಪ್ರಾಪರ್ಟಿ ರೈಟ್ಸ್ ಎಂದು ತಮ್ಮ ಮ್ಯಾನಿಫೆಸ್ಟೋದಲ್ಲ ಬರೆದುಕೊಂಡಿದ್ದೀರಿ, ಇದಕ್ಕೆ ಏನು ಹೇಳುತ್ತೀರಿ?

ಶ್ರೀ ಬಿ ಸುಬ್ಬಯ್ಯ ಶೆಟ್ಟಿ.—ನಿಮ್ಮ ಮ್ಯಾನಿಫೆಸ್ಟೋ ಏನು?

ಶ್ರೀ ಕೋಣಂದೂರು ಲಿಂಗಪ್ಪ.—ನಮ್ಮ ಮ್ಯಾನಿಫೆಸ್ಟೋದಲ್ಲಿರುವುದನ್ನು ನಾನು ಹೇಳುತ್ತಿದ್ದೇನೆ ಅನೇಕ ಜನ ಭೂಮಾಲೀಕರು ಭೂಮಿಯನ್ನು ಕಳೆದುಕೊಂಡು ನಿರ್ಗತಿಕ ರಾಗಿದ್ದಾರೆ ಅವರ ದುಸ್ಥಿತಿಯನ್ನು ನೋಡಲಿಕ್ಕೂ ಸಾಧ್ಯವಿಲ್ಲ ಗೇಣಿದಾರರಿಂದ ಪರಿಹಾರ ತೆಗೆದು ಕೊಂಡು ಸರ್ಕಾರಿ ಖಜಾನೆಯಲ್ಲಿಟ್ಟುಕೊಂಡು ಅವರಿಗೂ ಕೊಡದೆ, ಇವರಿಗೂ ಕೊಡದೆ, ಸರ್ಕಾರ ದವರು ತೊಂದರೆ ಮಾಡುತ್ತಿದ್ದಾರೆ ಇನ್ನು ಮುಂದೆ ಗೇಣಿದಾರರು ಕೊಟ್ಟಂಥ ಹಣವನ್ನು ಸರ್ಕಾರಿ ಖಜಾನೆಯಲ್ಲಿಡದೆ ಭೂಮಾಲೀಕರಿಗೆ ಕೊಡಿ ಎಂದು ಹೇಳುತ್ತೇವೆ ದೇಶದಲ್ಲಿ ನಿರುದ್ಯೋಗಿಗಳು ಸಂಪೂರ್ಣವಾಗಿ ಉದ್ಯೋಗದಲ್ಲಿರುವಂತೆ ಮಾಡಬೇಕು. ನಿರುದ್ಯೋಗಿಗಳಿಗೆ ನಿರುದ್ಯೋಗ ಭತ್ಯ ವನ್ನು ಕೊಡಬೇಕು. ನಮ್ಮ ಸ್ನೇಹಿತರು ಕುಟುಂಬ ಯೋಜನೆಯ ಬಗ್ಗೆ ಮಾನ್ಯ ರಾಜ್ ನಾರಾಯಣ್ ಅವರು ಹೇಳಿದಂಥ ಮಾತನ್ನು ಹೇಳಿದರು. ಆದರೆ ನಾನು ಅವರು ಹೇಳಿದ್ದನ್ನು ಇವರು ಅರ್ಥ ಮಾಡಿಕೊಂಡಿಲ್ಲ ಎಂದು ಹೇಳಬೇಕಾಗುತ್ತದೆ. ಅವರು ಕೊಡತಕ್ಕ ಐದು ಸಾವಿರ ರೂಪಾಯಿಗಳ ಪರಿಹಾರ ಯಾರಿಗೆ ಎಂದರೆ, ಕುಟುಂಬಯೋಜನೆಯ ಕ್ರಿಯೆಯಿಂದ ಯಾರು ಸಂಪೂರ್ಣವಾಗಿ ಇನ್‌ವ್ಯಾಲಿಡ್ ಆಗಿದ್ದಾರೋ ಅಂಥವರಿಗೆ ತಮ್ಮ ಜೀವನ ನಿರ್ವಹಣೆಯನ್ನು ನಡೆಸಲು ಯಾರು ಸಂಪೂರ್ಣವಾಗಿ ಅಸಮರ್ಥರಾಗಿದ್ದಾರೋ ಯಾರಿಗೆ ಕೆಟ್ಟ ಆಪರೇಷನ್ ಕೆಟ್ಟ ಔಷಧ ಕೊಟ್ಟು ನಡೆಯುದಕ್ಕೂ ಆಗದಂತೆ ಮಾಡಿದ್ದಾರೆ ಅವರಿಗೆ ಪರಿಹಾರ ಕೊಡಬೇಕು ಎಂದು ಅವರು ಹೇಳಿದ್ದಾರೆ. ಸರ್ಕಾರದವರು ಬಡವರ ಉದ್ಧಾರ ಮಾಡುತ್ತೇವೆಂದು ಹೇಳುತ್ತಿದ್ದಾರೆ.

ಆದರೆ, ಕಡಿಮೆ ಹಿಡುವಳಿದಾರ ರೈತರಿಗೆ ಎಲ್ಲಾ ತೆರಿಗೆಗಳನ್ನು ಸಂಪೂರ್ಣವಾಗಿ ರದ್ದು ಮಾಡುತ್ತೇವೆಂದು ಹೇಳುವ ಬಗ್ಗೆ ಒಂದು ಅಕ್ಷರವನ್ನು ಹೇಳಿಲ್ಲ. ಇಲ್ಲಿ ಗೆದ್ದಿದ್ದಾರೆ, ಅಲ್ಲಿ ಸೋತಿದ್ದಾರೆ ಎಂದಲ್ಲ ಭಾರತ ಒಂದೇ ಎನ್ನುವ ಭಾವನೆಯನ್ನು ಇಟ್ಟುಕೊಳ್ಳಬೇಕು. ನಮ್ಮ ಪ್ರಧಾನಿಯವರು ದಕ್ಷಿಣ ಭಾರತದ ಬಗ್ಗೆ ತಾರತಮ್ಯ ಮಾಡುವುದಿಲ್ಲ ಎಂದು ಸ್ಪಷ್ಟವಾಗಿ ಹೇಳಿದ್ದಾರೆ.

ಕಡೆಯದಾಗಿ, ತುರ್ತು ಪರಿಸ್ಥಿತಿಯ ಸಮಯದಲ್ಲಿ ಮಾಡಿದಂಥ ಅನೇಕ ವಿಚಾರಗಳನ್ನು ಹೇಳುತ್ತೇನೆ. ನನ್ನ ಸ್ನೇಹಿತರಾದ ಚಂದ್ರಶೇಖರ ಪಾಟೀಲ್ ಅವರು ಇದರ ಬಗ್ಗೆ ಒಂದು ಕವನವನ್ನು ಬರೆದಿದ್ದಾರೆ ಆದರ ಕೆಲವು ಸಾಲುಗಳನ್ನು ನಾನು ಇಲ್ಲಿ ಓದುತ್ತೇನೆ.

"ಖಾಲಿ ಗದ್ದಲದ ಈ ನಾಡಿನ ಉದ್ದಗಲಕ್ಕೂ ಈಗ ಶಾಂತಿ ನೆಲಸಿದೆ,
ನರನಾಡಿಯೆಲ್ಲ ನಿಂತೇ ಹೋದಂತಾಗಿ ನಾವೆಲ್ಲ ಯೋಗಿಗಳಾಗಿದ್ದೇವೆ
ಹಾದಿ ಮಾತು ಬೀದಿ ಭಾಷಣಗಳ ಸದ್ದಡಗಿ ಕಿವಿ ತುಂಬ ಹುಲುಸಾಗಿ
ಕೂದಲು ಬೆಳೆಯುತ್ತಿದೆ.
ಅನಾಚಾರ ಅತ್ಯಾಚಾರ ಭ್ರಷ್ಟಾಚಾರಗಳ ಬದಲು
ಪತ್ರಿಕೆಗಳ ತುಂಬ ಶುದ್ಧ ಸಮಾಚಾರ ತುಂಬಿವೆ
ಎಲ್ಲಾ ಸಾಮಾನುಗಳ ಬೆಲೆ ಇಳಿದೂ ಇಳಿದೂ ಈಗ ಕೈಗೆ
ಸಿಗದಂತಾಗಿದೆ.
ಬಿಡಾಡಿ ನಾಯಿಗಳ ನಿರ್ಬೀಕರ್ಣವಾಗಿದೆ ಭಾರತದ ಜನಸಂಖ್ಯೆ ಇಳಿಯುತ್ತಿದೆ.
ಹೆದ್ದಾರಿಯ ಮೇಲೆ ಕೆಟ್ಟು ನಿಂತ ಟ್ರಕ್ಕು ಕೂಡ
ನಾಡು ಮುನ್ನಡೆದಿದೆ–ಎಂಬ ಸಂದೇಶ ಹೊತ್ತಿದೆ
ರೇಡಿಯೋದ ಗಿಳಿವಿಂಡು ಅದೋ ಒಕ್ಕೊರಲಿಂದ ಅದೇ ಹಾಡು
ಹಾಡುತ್ತಿದೆ ಧನ್ಯತೆಯ ಈ ಕ್ಷಣದಿ, ಓ ಮುದ್ದುರಂಗ,
ಕಿವಿ ಮುಚ್ಚಿ ಕಣ್ಣು ಮುಚ್ಚಿ ನೆನೆ ನೆನೆ ಗಾಂಧಿಯನು
(ಯಾವ ಗಾಂಧಿ? ಅಂತ ತಿಳಿದಿದ್ದೆ ಪೆದ್ದಲಿಂಗ)
ಬಾಯಿ ಮುಚ್ಚಿ
ನೆನೆ ನೆನೆ ಗಾಂಧಿಯನು"

ಮಾನ್ಯ ಅಧ್ಯಕ್ಷರೇ ರಾಜ್ಯಪಾಲರು ಮೊದಲನೆಯದಾಗಿ ಇಲ್ಲಿಗೆ ಬಂದು ಭಾಷಣ ಮಾಡಲಿಕ್ಕೆ ಅನರ್ಹರು. ಇವರೂ ಸಹ ಮಾನ್ಯ ಸುಖಾಡಿಯಾ ಮಾಡಿದ ಹಾಗೆ ರಾಜೀನಾಮೆ ಕೊಟ್ಟು ಹೋಗಬಹುದಿತ್ತು. ಇದು ಅವರ ನೈತಿಕ ಜವಾಬ್ದಾರಿ. ಆದರೆ ನಾನು ಮಾನ್ಯ ರಾಜ್ಯಪಾಲರ ಬಗ್ಗೆ ವೈಯುಕ್ತಿಕವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಅವರ ಬಗ್ಗೆ ಬೇಕಾದಷ್ಟು ಆರೋಪಗಳು ಇವೆ ಇದು ಪ್ರಜಾಪ್ರಭುತ್ವದ ದೃಷ್ಟಿಯಿಂದ ಆಶ್ಚರ್ಯದ ವಿಷಯ. ಇದ್ದಕಿದ್ದ ಹಾಗೆ ಕಾಂಗ್ರೆಸ್ ಪ್ರಜಾಪ್ರಭುತ್ವ ಪ್ರಜಾತಂತ್ರ ಎಂದು ಜಪಿಸುವುದಕ್ಕೆ ಶುರು ಮಾಡಿ ಬಿಟ್ಟಿದೆ ಇದುವರೆಗೂ ಎರಡು ವರ್ಷಗಳಿಂದ ಗುಲಾಮರಾಗಿ ಯಾರು ಜನತೆಯನ್ನು ತಳ್ಳಿದ್ದರೋ ಅವರಿಗೆ ಜನತೆ ತಮ್ಮ ತಿಳುವಳಿಕೆಯಿಂದ ಕೇಸ ಮಾಡಿರುವುದು ಎಲ್ಲರೂ ಅರ್ಥಮಾಡಿಕೊಳ್ಳುವಂಥ ವಿಷಯ. ಆದ್ದರಿಂದ ನಾನು ಭಾರತದ ಜನತೆಗೆ ನನ್ನ ಕೃತಜ್ಞತೆಯನ್ನು ಅರ್ಪಿಸಿ ತಮಗೆ ವಂದನೆಯನ್ನು ಸಲ್ಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು.— ಬೇರೆ ಸದಸ್ಯರು ಮಾತನಾಡುವಾಗ ಏನಾದರೂ ಪ್ರಶ್ನೆ ಕೇಳಬೇಕು ಎಂದರೆ ಅದನ್ನು ನೋಟ್ ಮಾಡಿಕೊಂಡು ಅವರಿಗೆ ಕಳುಹಿಸಬೇಕು. ಮಧ್ಯೆ ಮಧ್ಯೆ ಎದ್ದು ಮಾತನಾಡುವವರಿಗೆ ತೊಂದರೆ ಮಾಡಬಾರದು.

† ಶ್ರೀ ಎಂ. ಮಲ್ಲಪ್ಪ (ಬೀರೂರು).— ಸನ್ಮಾನ್ಯ ಅಧ್ಯಕ್ಷರೇ, ಕರ್ನಾಟಕದ ರಾಜ್ಯಪಾಲರು ವಿಧಾನಮಂಡಲದಲ್ಲಿ ಮಾಡಿದ ಭಾಷಣಕ್ಕೆ ಶ್ರೀಮಾನ್ ಬಸವಲಿಂಗಪ್ಪನವರು ಮಂಡಿಸಿರುವ ವಂದನಾನಿರ್ಣಯವನ್ನು ಬೆಂಬಲಿಸಿ ಒಂದೆರಡು ವಿಷಯಗಳನ್ನು ಹೇಳಬಯಸುತ್ತೇನೆ. ಭಾರತದಲ್ಲಿ ಚರಿತ್ರಾರ್ಹವಾದ ಚುನಾವಣೆಗಳು ಲೋಕಸಭೆಗೆ ನಡೆದಿವೆ. ಉತ್ತರ ಮತ್ತು ದಕ್ಷಿಣದಲ್ಲಿ ಚುನಾ

ವಣಿಯ ಫಲಿತಾಂಶ ಉತ್ತರ ದಕ್ಷಿಣಾದಷ್ಟೆ ಅಂತರವನ್ನು ಒಳಗೊಂಡಿದೆ. ಉತ್ತರದಲ್ಲಿ ಜನತೆ ಕಾಂಗ್ರೆಸ್ ಅನ್ನು ತ್ಯಜಿಸಿದರೆ, ದಕ್ಷಿಣದಲ್ಲಿ ಕಾಂಗ್ರೆಸ್‌ನ ಸಾಧನೆಯ ಬಗ್ಗೆ ನಂಬಿಕೆಯನ್ನು ಪುನ: ವ್ಯಕ್ತಪಡಿಸಿದ್ದಾರೆ. ಶ್ರೀಮಾನ್ ಲಿಂಗಪ್ಪನವರು ತಮ್ಮ ಭಾಷಣದಲ್ಲಿ ತಾವು ಕವಿಗಳಾಗಿ ರವಿ ಕಾಣದ್ದನ್ನು ಕವಿ ಕಂಡ ಎನ್ನುವ ರೀತಿಯಲ್ಲಿ ತಮ್ಮ ಭಾಷಣವನ್ನು ಮಾಡಿದ್ದಾರೆ. ನಿಜವಾಗಿಯೂ ಜನತಾ ಪಕ್ಷ ಅಧಿಕಾರದ ಗದ್ದುಗೆಯನ್ನು ಏರಿದೆ. ಶ್ರೀಮಾನ್ ಮೊರಾರ್ಜಿ ದೇಸಾಯಿಯವರು ಪ್ರಧಾನಿಗಳಾಗಿದ್ದಾರೆ. ಆದರೆ ಅವರು ನಡೆದು ಬಂದದಾರಿ ಅವರ ಜೀವನದ ಹುಟ್ಟು, ಬೆಳವಣಿಗೆ ಯಾವರೀತಿಯಾಗಿದೆ ಎನ್ನುವುದನ್ನು ಶ್ರೀಮಾನ್ ಲಿಂಗಪ್ಪನವರು ಮರೆತಿರಬಹುದು. ಅವರು 30 ವರ್ಷಗಳಿಂದ ಕಾಂಗ್ರೆಸ್‌ನಲ್ಲಿದ್ದು, ಕಾಂಗ್ರೆಸಿನ ಧ್ಯೇಯಧೋರಣೆಗಳನ್ನು ಒಪ್ಪಿ ಆಚರಿಸಿದರು. ಅವುಗಳಂತೆ ನಡೆದುಬಂದರು ಎನ್ನುವ ಅಂಶವನ್ನು ಲಿಂಗಪ್ಪನವರು ಗಮನದಲ್ಲಿಟ್ಟು ಕೊಳ್ಳಬೇಕು. ಕಳೆದ 30 ವರ್ಷಗಳ ಇತಿಹಾಸ, ಸಾಧನೆಗಳನ್ನು ತಾವು ಮರೆಮಾಚುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ, ಸ್ವಾತಂತ್ರ್ಯವನ್ನು ಗಳಿಸಿದ್ದು ಕಾಂಗ್ರೆಸ್, ಬ್ರಿಟಿಷರನ್ನು ಭಾರತದಿಂದ ತೊಲಗಿ ಎಂದು ಹೇಳಿ ಸ್ವಾತಂತ್ರ್ಯವನ್ನು ತಂದುಕೊಟ್ಟಿದ್ದು ಕಾಂಗ್ರೆಸ್. ಇಂಥ ಒಂದು ಸಂಸ್ಥೆಯ ಸದಸ್ಯರಾಗಿ ಹೋರಾಡಿದ ವ್ಯಕ್ತಿಯಾ ಅವರು ಹೌದು.

[MR. CHAIRMAN (SRI KANTHA ROW DESAI in the chair]

ಅಂದಮೇಲೆ ನಾವು ಅವರ ಸಾಧನೆಯನ್ನು ಅಪ್ರತ್ಯಕವಾಗಿ ಅಲ್ಲಗಳೆದಂತಾಗುತ್ತದೆಯೇ ಹೊರತು ಮತ್ತು ನೀವು ಈಗತಾನೆ ಏನು ಹೇಳಿದಿರಿ ರವಿ ಕಾಣದ್ದನ್ನು ಕವಿ ಕಂಡ ಅಂಶ ಏನು ಹೇಳಿದಿರಿ ಅದನ್ನು ಉತ್ರೇಕ್ಷಮಾಡಿ ಹೇಳಿದಂತಾಗುತ್ತದೆ; ಮತ್ತು ಈ ಭಾರತದಲ್ಲಿ ನ್ಯಾಯವನ್ನೇ ಮರೆತಂತಾಗುತ್ತದೆ ಎಂದು ಹೇಳುತ್ತೇನೆ. ತಾವು ಕಾಂಗ್ರೆಸ್ ಸಾಧನೆ ಬಗ್ಗೆ ಅಷ್ಟೊಂದು ಲಘುವಾಗಿ ಮಾತನಾಡಬಾರದು. ಮತ್ತು ಈ ಬಗ್ಗೆ ಉಪದೇಶ ಮಾಡಬೇಕು ಅನ್ನುವ ಅಂಶವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಉತ್ತರ ಪ್ರದೇಶದಲ್ಲಿ ಕಾಂಗ್ರೆಸ್ ಬಹಳ ಸಾಧಿಸಿದೆ ಅನ್ನುವ ಅಂಶ ಎಲ್ಲರಿಗೂ ಗೊತ್ತಿದೆ. ಅದೇನೂ ಗೊತ್ತಿಲ್ಲದೇ ಇರುವ ವಿಷಯ ಏನೂ ಅಲ್ಲ ನಿಜವಾಗಿಯೂ ಹೇಳುವುದಾದರೆ ಈ ಬಗ್ಗೆ ಏನು ಲೋಪದೋಷಗಳು ಕಂಡಿವೆಯೋ ಅದನ್ನು ಸರಿಪಡಿಸಿಕೊಂಡು ದೇಶದ ಸೇವೆಯನ್ನೂ ಮತ್ತು ಜನರ ಸೇವೆಯನ್ನೂ ಮಾಡಿಕೊಂಡು ಹೋಗುವ ಧೈರ್ಯ ಮತ್ತು ಸಾಹಸವನ್ನು ಕಾಂಗ್ರೆಸ್‌ನವರು ಮಾಡುವ ಪ್ರಯತ್ನದಲ್ಲಿದ್ದಾರೆ, ಮುಂದೆ ಗೆಲ್ಲುವ ದಾರಿಗೆ ಪ್ರಯತ್ನ ಮಾಡುತ್ತಿದ್ದಾರೆ, ಇದನ್ನು ತಾವು ಮರೆಯಬಾರದು, ಈ ವತ್ತಿನ ದಿವಸ ಹೊಸದಾಗಿ ಅಡಳಿತಕ್ಕೆ ಬಂದಿರುವ ಸರ್ಕಾರ ತಮ್ಮ ಪಕ್ಷದ ಆಡಳಿತದ ಬಗ್ಗೆ ಸಾಧನೆ ಮಾಡಿ ತೋರಿಸಬೇಕಾಗಿದೆ. ಅವರ ಧ್ಯೇಯಗಳೇನೋ ಒಳ್ಳೆಯದು ಇರಬಹುದು; ಮಾತಿನಲ್ಲಿ ಒಳ್ಳೆಯದು ಇರಬಹುದು, ಬಾಯಿಯೂ ಒಳ್ಳೆದು ಇರಬಹುದು, ಆದರೆ ಅದನ್ನು ಸಾಧನೇ ಮಾಡಿ ತೋರಿಸಬೇಕಾಗಿದೆ. 10 ವರ್ಷದಲ್ಲಿ ನಾವು ಬಡತನವನ್ನು ನಿರ್ಮೂಲನ ಮಾಡುತ್ತೇವೆ ಅನ್ನುವುದು ಮತ್ತು ದೇಶದಲ್ಲಿ ಎಲ್ಲರಿಗೂ ಉದ್ಯೋಗವನ್ನು ಕಲ್ಪಿಸಿಕೊಡುತ್ತೇವೆ ಅನ್ನುವುದು ಈ ಕಾರ್ಯಕ್ರಮ ಏನೋ ಒಳ್ಳೆಯದು ಆದರೆ ಇದು ಎಷ್ಟರಮಟ್ಟಿಗೆ ಸಾಧನೆಯಾಗುತ್ತದೆ ನೋಡಬೇಕು. ದೇಶದಲ್ಲಿ ಬಡತನವನ್ನು ನಿರ್ಮೂಲ ಮಾಡುವುದು ಸಾಧ್ಯವೇ ಅನ್ನುವುದನ್ನು ಕಾದು ನೋಡಬೇಕಾಗಿದೆ. ಈ ಕಾರ್ಯಕ್ರಮದಲ್ಲಿ ಅವರ ಚಾಚೂ ತಪ್ಪದೆ ಕೆಲಸ ಮಾಡಬೇಕು ಎಂದು ನಾನು ಈ ಸಮಯದಲ್ಲಿ ಹೇಳಯಸುತ್ತೇನೆ. ನಮ್ಮ ಕರ್ನಾಟಕದಲ್ಲಿ ಚುನಾವಣೆ ಹೇಗೆ ಆಯಿತು ಅನ್ನುವುದು ಎಲ್ಲರಿಗೂ ಗೊತ್ತಿದೆ ನಾವು ಒಳ್ಳೆಯ ಕಾರ್ಯಕ್ರಮಗಳನ್ನು ದೇಶದಲ್ಲಿ ಮಾಡಿದ್ದಕ್ಕೋಸ್ಕರ ಇಲ್ಲಿ ಕಾಂಗ್ರೆಸ್ ಜಯಭೇರಿ ಹೊಡೆದಿದೆ ನಮ್ಮ ಕರ್ನಾಟಕ ರಾಜ್ಯದಲ್ಲಿ 28 ಲೋಕಸಭಾ ಕ್ಷೇತ್ರಕ್ಕೆ 26 ಕ್ಷೇತ್ರದಲ್ಲಿ ಕಾಂಗ್ರೆಸ್‌ನವರನ್ನು ಆರಿಸಿ ಜಯಭೇರಿ ಹೊಡೆಸಿದ್ದಾರೆ. ಇದೇನೂ ಸುಲಭವಾದ ಮಾತಲ್ಲ ನಿಮ್ಮ ಕ್ಷೇತ್ರವನ್ನೇ ತೆಗೆದುಕೊಳ್ಳಿ ನೀವು ವಿರೋಧಪಕ್ಷದಲ್ಲಿ ಇದ್ದರೂ ಕೂಡ ಕಾಂಗ್ರೆಸ್ಸಿಗೆ ಬಹುಮತ ಬಂದಿಲ್ಲವೇ? ಈ ಸರ್ಕಾರ ಮಾಡಿರುವಂಥಾ ಸಾಧನೆಯನ್ನು ಯಾರೂ ಮರೆಯುವಂತೆ ಇಲ್ಲ. ಯಾವ ಒಂದು ಕ್ಷೇತ್ರವನ್ನು ತೆಗೆದುಕೊಂಡರೂ ಕೂಡ ನಾವು ಮಾಡಿರುವ ಕಾರ್ಯಕ್ರಮವನ್ನು ಅವರು ಒಪ್ಪಿಕೊಂಡಿದ್ದಾರೆ ಅನ್ನುವುದು ಇದರಿಂದಲೇ ಗೊತ್ತಾಗುತ್ತದೆ. ಉಳುವವನೇ ನೆಲದ ಒಡೆಯ ಆಗಬೇಕು ಅಂತ ತಾವೇ ಒಪ್ಪಿಕೊಂಡಿದ್ದೀರಿ. ಆದರಂತೆ ಕರ್ನಾಟಕದಲ್ಲಿ ಈ ಭೂಸುಧಾರಣೆಯ

ಫರವಾಗಿ ಯಾರು ಯಾರು ಜಮೀನುಗಳನ್ನು ಉಳುತ್ತಾರೋ ಅವರೆಲ್ಲಾ ಈ ಹೊತ್ತಿನ ದಿವಸ ಒಡೆಯರಾಗಿದ್ದಾರೆ. ಭೂಸುಧಾರಣೆ ಶಾಸನದಲ್ಲಿ ಅನೇಕ ಲೋಪದೋಷ ಇರಬಹುದು ಇಲ್ಲ ಎಂತಲ್ಲ. ಆದರೆ ಆ ಲೋಪದೋಷಗಳನ್ನು ತಿದ್ದಿ ಜನಸಾಮಾನ್ಯರಿಗೆ ಅನುಕೂಲವಾದ ರೀತಿಯಲ್ಲಿ ಶಾಸನ ಮಾಡುವುದರಲ್ಲಿ ತಪ್ಪೇನೂ ಇಲ್ಲವಲ್ಲಾ. ಇವೊತ್ತು ಲ್ಯಾಂಡ್ ಟ್ರಿಬ್ಯೂನಲ್ಸ್‌ನಲ್ಲಿ ಅನೇಕ ಲೋಪದೋಷಗಳು ಇರಬಹುದು. ಆದರಲ್ಲಿ ಕಾನೂನಿನ ತಿಳುವಳಿಕೆ ಇಲ್ಲದ ಜನ ಇರಬಹುದು ಆದರೆ ಅವರ ಹೃದಯ, ಮನಸ್ಸು ಒಂದಾಗಿ ಈ ಸ್ಕೀಮಿನಿಂದ ಜನತೆಯ ಹಿತವನ್ನು ಸಾಧಿಸಬಹುದು ಅನ್ನುವುದನ್ನು ತಾವು ಮರೆಯಬಾರದು. ನಮ್ಮ ಕರ್ನಾಟಕದಲ್ಲಿ ಈ ಭೂಸುಧಾರಣೆಯಿಂದ ಒಂದು ಕ್ರಾಂತಿಕಾರಕವಾದ ಬದಲಾವಣೆ ಉಂಟಾಗಿದೆ. ಈವೊತ್ತು ನಮ್ಮ ಕರ್ನಾಟಕದಲ್ಲಿ ನಿಜವಾಗಿಯೂ ಯಾರು ಕೃಷಿಕರು ಇದ್ದಾರೆ, ಅವರಿಗೆ ಜಮೀನು ದೊರೆತಿದೆ ಎಂದು ಹೇಳುತ್ತೇನೆ. ಅದರಲ್ಲಿ ಲೋಪದೋಷಗಳು ಏನಾದರೂ ಇದ್ದರೆ ಅದನ್ನು ತಿದ್ದುಪಡಿ ಮಾಡಿದರೆ ಅದರಿಂದ ಇನ್ನೂ ಹೆಚ್ಚಿನ ಪ್ರಯೋಗ ಮಾಡುವುದಾದರೆ ಅದರಿಂದ ಇನ್ನೂ ಹೆಚ್ಚಿನ ಸಾಧನೆಯನ್ನು ಮಾಡಬಹುದು ಎಂದು ಹೇಳುತ್ತೇನೆ. ಈ ಹೊತ್ತು ನಿಜವಾದ ಕೃಷಿಕರು ಯಾರು ಇರುತ್ತಾರೋ, ಯಾರು ಭೂಮಿಯನ್ನು ನ್ಯಾಯವಾಗಿ ಸಾಗುವಳಿ ಮಾಡುತ್ತಿದ್ದಾರೋ ಅವರಿಗೆಲ್ಲಾ ಭೂಮಿ ದೊರೆಯಬೇಕು ಅನ್ನುವುದೇ ಸರ್ಕಾರದ ಧ್ಯೇಯ. ಅದೇರೀತಿಯಾಗಿ ಲ್ಯಾಂಡ್ ಗ್ರಾಂಟ್ ಕಮಿಟಿ ಮಾಡಿ ಯಾರು ಹಿಂದುಳಿದವರು ಇದ್ದಾರೋ ಯಾರು ಪರಿಶಿಷ್ಟ ವರ್ಗದವರು ಇದ್ದಾರೋ ಅಂಥಾವರಿಗೆ ಜಮೀನು ವಿತರಣೆ ಮಾಡಿದ್ದಾರೆ. ಅರಣ್ಯ ಪ್ರದೇಶದಲ್ಲಿ 20 ವರ್ಷದಿಂದಲೂ ಕೆಲವು ಭಾಗದಲ್ಲಿಅಕ್ರಮಿಸಿಕೊಂಡಂಥಾ ಭಾಗದಲ್ಲಿ ಕೆಲವರಿಗೆ .ಅನ್ಯಾಯವಾಗಿರಬಹುದು. ಆ ಕೃಷಿಕರು ಈ ಜಮೀನನ್ನೇ ನಂಬಿ ಏನು ವ್ಯವಸಾಯ ಮಾಡುತ್ತಿದ್ದರೋ ಅಂಥಾವರಿಗೆ ಕೆಲವರಿಗೆ ಇನ್ನೂ ಮಂಜೂರು ಆಗಿಲ್ಲ ಅವರಿಗೆ ತೊಂದರೆಯಾಗಿರುವುದು, ನಿಜ. ಹಿಂದಿನ ಸರ್ಕಾರದಲ್ಲೂ ಕೂಡದ ಇದರ ಬಗ್ಗೆ ನಿಧಾನವಾಗಿದೆ. ಅಮೃತಮಹಲ್ ಕಾವಲಿನಲ್ಲಿರತಕ್ಕಂಥ ಜಮೀನೆ ಆಗಲಿ, ಅರಣ್ಯಕ್ಕೆ ಸೇರಿರತಕ್ಕಂಥ ಜಮೀನೇ ಆಗಲಿ ಅಥಾವ ರೆವಿನ್ಯೂ ಡಿಪಾರ್ಟ್‌ಮೆಂಟಿಗೆ ಸಂಬಂಧಪಟ್ಟ ಜಮೀನೇ ಆಗಿರಲಿ ನ್ಯಾಯವಾದ ಕೃಷಿಕನಾಗಿದ್ದರೆ, ಅವನು ಸ್ವತಂತ್ರವಾಗಿ ವ್ಯವಸಾಯ ಮಾಡುತ್ತಾ ಇದ್ದರೆ ಅತನಿಗೆ ಜಮೀನು ಕೊಡುವುದನ್ನು ನಿಧಾನ ಮಾಡಿದ್ದಾರೆ. ಎಷ್ಟೋ ಸಂದರ್ಭದಲ್ಲಿ ಅಂತಹ ಜಮೀನನ್ನು ನಾವು ಮಂಜೂರು ಮಾಡಿದ್ದೇವೆ. ಇನ್ನು ಎಷ್ಟೋ ಜಮೀನುಗಳು ಮಂಜೂರು ಆಗದೇ ಇರುವುದು ಉಂಟು. ಕೃಷಿಯನ್ನೇ ನಂಬಿ ವ್ಯವಸಾಯ ಮಾಡುತ್ತಾ ಇರತಕ್ಕಂಥಾವರಿಗೆ ಕೆಲವರಿಗೆ ಅನ್ಯಾಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಸರ್ಕಾರದವರು ಇದನ್ನು ಪರಿಶೀಲಿಸುವುದಕ್ಕೆ ಒಪ್ಪಿದ್ದಾರೆ. ಈಗಲಾದರೂ ಕೂಡ ಕಾಲವಿಳಂಬ ಮಾಡದೆ ಅಂಥಾ ಜಮೀನುಗಳನ್ನು ಅವರ ಸ್ವಾಧೀನಕ್ಕೆ ಕೊಡುವುದು ಅತ್ಯಾವಶ್ಯಕ, ಅದು ಅರಣ್ಯ ಇಲಾಖೆಯವರದೇ ಆಗಿರಲಿ, ರೆವಿನ್ಯೂ ಡಿಪಾರ್ಟ್‌ಮೆಂಟಿಗೆ ಸೇರಿರಲಿ ಆ ಜಮೀನನ್ನು ಬಿಟ್ಟುಕೊಡಬೇಕು ಅರಣ್ಯ ಇಲಾಖೆಯವರು ಅರಣ್ಯವನ್ನು ಬೆಳೆಸುವುದಕ್ಕೆ ಆ ಜಾಗವನ್ನು ಉಪಯೋಗಿಸದೇ ಇದ್ದಿದ್ದರೆ ಅದು ವ್ಯವಸಾಯಕ್ಕೆ ಉಪಯೋಗವಾಗುವ ಹಾಗೆ ಇದ್ದಿದ್ದರೆ ಅದನ್ನು ವ್ಯವಸಾಯ ಮಾಡುವ ಕೃಷಿಕರಿಗೆ ಬಿಟ್ಟುಕೊಡಬೇಕು ಎಂದು ಹೇಳುತ್ತೇನೆ. ಈ ಬಗ್ಗೆ ಒಂದು ಕಾನೂನು ತಂದು ಶೀಘ್ರವಾಗಿ ತಿದ್ದುಪಡಿ ಮಾಡಿ ಸರ್ಕಾರದವರು ಆ ಜನರಿಗೆ ತಕ್ಕ ಅನುಕೂಲವನ್ನು ಒದಗಿಸಿಕೊಡಬೇಕೆಂದು ನಾನು ಈ ಸಭೆಯದಲ್ಲಿ ಹೇಳುತ್ತೇನೆ.

ಇನ್ನು ಲೋಕೋಪಯೋಗಿ ಇಲಾಖೆ ಬಗ್ಗೆ ಹೇಳುವುದಾದರೆ ಅವರಿಗೆ ಈಗ ಹೆಚ್ಚು ಹಣ ದೊರಕುತ್ತಾ ಇದೆ, ಅವರು ದಕ್ಷತೆಯಿಂದ ಮತ್ತು ಪ್ರಾಮಾಣಿಕತೆಯಿಂದ ಈವಾಗ ಕೆಲಸ ಮಾಡುತ್ತ ಇದ್ದಾರೆ, ಆದರೆ ಅವರು ಇನ್ನು ಹೆಚ್ಚಿನ ದಕ್ಷತೆಯಿಂದ ಮತ್ತು ಪ್ರಾಮಾಣಿಕತೆಯಿಂದ ಕೆಲಸ ಮಾಡಬೇಕು ಎಂದು ಹೇಳುತ್ತೇನೆ. ನಿಮಗೆ ಉದಾಹರಣೆ ಹೇಳುವುದಾದರೆ ಹಿರೇಕಟ್ಟು ಒಡ್ಡು ಅಂತ ಇದೆ. ಅದು ಹಾಸನ ಜಿಲ್ಲೆಗೆಸೇರಿದ್ದು. ಅದರಿಂದ ಹಾಸನ ಜಿಲ್ಲೆಯ ಕೆಲವು ಭಾಗಗಳಿಗೂ ಮತ್ತು ಚಿಕ್ಕಮಗಳೂರಿನ ಕೆಲವು ಭಾಗಗಳಿಗೂ ನೀರನ್ನು ಒದಗಿಸಲು ಆ ಯೋಜನೆಗೆ ಮಂಜೂರಾತಿ ಆಗಿ 10 ವರ್ಷ ಆಗಿದೆ. ಆದರಲ್ಲಿ ಕೆಲವು ಕೆಲಸಗಳು ಕಾರ್ಯಗತವಾಗಿವೆ. ಇದುವರೆಗೆ ಅದಕ್ಕೆ ಖರ್ಚಾಗಿರುವ ಹಣ 14 ಲಕ್ಷ ರೂಪಾಯಿಗಳು. ಆದರ ಅದು ಒಡ್ಡು ಕಟ್ಟಿದ ಮೇಲೆ ಕಾಲುವೆಗಳನ್ನು ತೋಡಿಸಿ ಆ ನೀರನ್ನು ಕಾಲುವೆಗಳ ಮೂಲಕ ಒದಗಿಸಬೇಕಾಗಿತ್ತು. 5 ವರ್ಷದಿಂದ ನಾನು ಈ ಬಗ್ಗೆ ಪ್ರಯತ್ನ ಮಾಡುತ್ತಿದ್ದೇನೆ. ಇಲಾಖೆಯವರು ಇದರ ಬಗ್ಗೆ ಗಮನ

ಕೊಟ್ಟಿಲ್ಲ. ಈ ವರ್ಷವೂ ಅದಕ್ಕೆ 50 ಸಾವಿರ ರೂಪಾಯಿ ಮಂಜೂರು ಆಗಿರಬಹುದು. ಆದರೂ ಸಹ ಆ ಜಮೀನಿಗೆ ಇನ್ನೂ ನೀರು ಬಂದಿಲ್ಲ. ಈ ರೀತಿಯಾಗಿ ಈ ಇಲಾಖೆಯವರು ನಿರ್ಲಕ್ಷ್ಯ ಮನೋಭಾವದಿಂದ ಕೆಲಸ ಮಾಡುತ್ತಿದ್ದಾರೆ. ಇದೊಂದನ್ನು ಏತಕ್ಕೆ ಉದಾಹರಣೆಯಾಗಿ ಕೊಟ್ಟೆ ಎಂದರೆ ಇಲಾಖೆಯಲ್ಲಿ ಇನ್ನೂ ಹೆಚ್ಚಿನ ದಕ್ಷತೆಯಿಂದ ಮತ್ತು ಪ್ರಾಮಾಣಿಕತೆಯಿಂದ ಕೆಲಸ ಮಾಡಿದರೆ ಇದು ಒಂದು ಭಾಗದ ಕೃಷಿಕರಿಗೆ ಮಾತ್ರವಲ್ಲ ಎಲ್ಲಾ ಭಾಗದ ಕೃಷಿಕರಿಗೂ ನೀರಾವರಿ ಸೌಲಭ್ಯ ದೊರೆಯುತ್ತದೆ. ಹಣವೇನೂ ಅಪಾರವಾಗಿ ವೆಚ್ಚ ಮಾಡುತ್ತಿದ್ದಾರೆ. ಇದನ್ನು ಸದುಪಯೋಗ ಪಡಿಸಿಕೊಳ್ಳಲು ಈ ಇಲಾಖೆಯವರು ಇನ್ನೂ ಹೆಚ್ಚಿನ ದಕ್ಷತೆಯಿಂದ ಮತ್ತು ಪ್ರಾಮಾಣಿಕತೆಯಿಂದ ಕೆಲಸ ಮಾಡಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ

ಇನ್ನು ಕುಡಿಯುವ ನೀರಿನ ಬಗ್ಗೆ ಹೇಳುವುದಾದರೆ ಈ ಕುಡಿಯುವ ನೀರನ್ನು ಎಲ್ಲರಿಗೂ ಒದಗಿಸುವುದು ಸರ್ಕಾರದ ಆದ್ಯ ಕರ್ತವ್ಯ. ಹಳ್ಳಿಗಳಲ್ಲಾಗಲಿ, ಪಟ್ಟಣಗಳಲ್ಲಾಗಲಿ ಈ ಪೊತ್ತಿನ ದಿವಸ ಕುಡಿಯುವ ನೀರನ್ನು ಒದಗಿಸುವ ಯೋಜನೆ ಏನು ಇದೆ ಇದರ ಬಗ್ಗೆ ಹೇಳುವುದಾದರೆ ಇದಕ್ಕೆ ಹಣವನ್ನು ಮಂಜೂರು ಮಾಡುವುದರಲ್ಲಿ ಸ್ವಲ್ಪ ತಾರತಮ್ಯ ತೋರಿಸುತ್ತಿದ್ದಾರೆ. ಒಂದು ಜಿಲ್ಲೆಗೆ 10 ಲಕ್ಷ ರೂಪಾಯಿ ಕೊಡುವುದು, ಇನ್ನೊಂದು ಜಿಲ್ಲೆಗೆ $1\frac{1}{2}$ ಕೋಟಿ ರೂಪಾಯಿ ಕೊಡುವುದು ಈರೀತಿ ವಹಿವಾಟು ನಡೆಯುತ್ತಾ ಇದೆ. ಈರೀತಿ ಆಗಬಾರದು. ಏತಕ್ಕೆಂದರೆ ಕುಡಿಯುವ ನೀರಿನ ಅವಶ್ಯಕತೆ ಎಲ್ಲಾ ಹಳ್ಳಿಗಳಿಗೂ ಉಂಟು ಮತ್ತು ಎಲ್ಲಾ ಪಟ್ಟಣಗಳಿಗೂ ಉಂಟು ಅದರಲ್ಲೂ ಕೂಡ ಶುದ್ಧವಾದ ನೀರನ್ನು ಒದಗಿಸುವ ಜವಾಬ್ದಾರಿ ಸರ್ಕಾರಕ್ಕೆ ಇದೆ. ಉದಾಹರಣೆಗೆ ಈ ಯೋಜನೆ ಕಾರ್ಯಗತ ಆಗುವ ಕಾಲದಲ್ಲಿ ಹೆಚ್ಚು ಹಣವನ್ನು ಒದಗಿಸಿ ಗ್ರಾಮೀಣ ಪ್ರದೇಶಗಳಿಗೆ ಶುದ್ಧವಾದ ನೀರನ್ನು ಒದಗಿಸುವುದಕ್ಕೆ ಸರ್ಕಾರದವರು ಹೆಚ್ಚು ಪ್ರಯತ್ನ ಮಾಡಬೇಕು ಎಂದು ಹೇಳುತ್ತೇನೆ. ಈ ಯೋಜನೆ ಕಾರ್ಯಗತವಾಗಬೇಕು ಎಂದು ಮತ್ತೊಮ್ಮೆ ಹೇಳುತ್ತೇನೆ.

ಇನ್ನು ಆಹಾರದ ವಿಷಯದಲ್ಲಿ ಹೇಳುವುದಾದರೆ ನಮ್ಮ ರಾಜ್ಯದಲ್ಲಿ 175 ತಾಲ್ಲೂಕಿನಲ್ಲಿ ಈವೊತ್ತು 117 ತಾಲ್ಲೂಕುಗಳಲ್ಲಿ ಅಭಾವ ಪರಿಸ್ಥಿತಿ ಒದಗಿದ್ದರೂ ಕೂಡ ನಮ್ಮ ಜೀವನಾವಶ್ಯಕವಾದ ವಸ್ತು ಬೆಲೆಗಳು ನೋಡಿದರೆ ನ್ಯಾಯವಾದ ಬೆಲೆಗಳಲ್ಲಿ ದೊರಕುತ್ತಾ ಇದೆ. ಇದಕ್ಕೆ ಏನು ಕಾರಣ ಎಂದರೆ ನಮ್ಮಲ್ಲಿದ್ದ ತುರ್ತು ಪರಿಸ್ಥಿತಿಯೇ ಕಾರಣ ಎಂದು ಹೇಳಿದರೆ ತಪ್ಪೇನೂ ಆಗಲಾರದು. ಈ ತುರ್ತು ಪರಿಸ್ಥಿತಿಯಿಂದ ಕೆಲವು ಒಳ್ಳೆಯದಾಗೂ ಇವೆ. ಆದರೆ ನಮ್ಮ ಸ್ನೇಹಿತರೊಬ್ಬರು ಯಾವುದೋ ಒಂದು ವಿಷಯವನ್ನು ತೆಗೆದು ಕೊಂಡು ತುರ್ತು ಪರಿಸ್ಥಿತಿಯನ್ನು ಅಲ್ಲಗಳೆದರು. ಈ ತುರ್ತು ಪರಿಸ್ಥಿತಿಯಲ್ಲಿ ಕೆಲವು ಒಳ್ಳೆಯದಾಗಿರುವ ಕೆಲಸಗಳನ್ನು ಮರೆಯಬಾರದು ಕರ್ನಾಟಕ ರಾಜ್ಯದಲ್ಲಿ ಅಭಾವ ಪೀಡಿತ ಪ್ರದೇಶದಲ್ಲಿ 39 ಕೋಟಿ ರೂಪಾಯಿಯಷ್ಟು ಕೆಲಸ ಮಾಡಿಸಿದ್ದಾರೆ, ಅದನ್ನು ಮರೆಯಬಾರದು.

ಶ್ರೀ ವಿ. ಎನ್. ಪಾಟೀಲ್.— ಈ ತುರ್ತು ಪರಿಸ್ಥಿತಿಯಿಂದ ಬಹಳ ಲಾಭವಾಗಿದೆಯಲ್ಲವೆ. Some gains are there.

ಶ್ರೀ ಎಂ ಮಲ್ಲಪ್ಪ.— ನಮ್ಮಲ್ಲಿ ಶಿಸ್ತು ಉಂಟಾಗಿದೆ. ಈಗ ನೋಡಿ ಇಂಜಿನಿಯರಿಂಗ್ ಕಾಲೇಜಿನವರು ಪರೀಕ್ಷೆಗೆ ಕೂಡಲು ಹೋಗುವುದಿಲ್ಲ ಎಂದು ಸಂಪು ಮಾಡುತ್ತಿದ್ದಾರೆ. ಮತ್ತು ಕೈಗಾರಿಕೆಗಳಲ್ಲಿ ಸಂಪು ಆಗುತ್ತಿದೆ. ಹೀಗಾದರೆ ಬಡತನವನ್ನು ದೇಶದಲ್ಲಿ ನಿರ್ಮೂಲ ಮಾಡುವುದಕ್ಕೆ ಸಾಧ್ಯವೇ? ದೇಶದಲ್ಲಿ ಹೆಚ್ಚಾಗಿ ಸಂಪನ್ಮೂಲಗಳನ್ನು ರೂಢೀಕರಿಸದಿದ್ದರೆ, ಹೆಚ್ಚು ಮಾಡದೇ ಇದ್ದರೆ ಬಡತನ ಹೇಗೆ ನಿರ್ಮೂಲವಾಗುತ್ತದೆ ಹೇಳಿ. ಈವೊತ್ತಿನ ದಿವಸ ಕೋಟ್ಯಾಂತರ ರೂಪಾಯಿಯನ್ನು ಪ್ರಿಂಟ್ ಮಾಡಿದರೂ ಕೂಡ ಒಂದು ಕೆ.ಜಿ. ಅಕ್ಕಿಗೆ 10 ರೂಪಾಯಿ ಆದರೆ ಬಡತನ ನಿರ್ಮೂಲವಾಗುವುದಕ್ಕೆ ಸಾಧ್ಯವೇ ಬಡತನ ನಿರ್ಮೂಲವಾಗಬೇಕಾದರೆ ದೇಶದಲ್ಲಿರುವ ಕೈಗಾರಿಕಾ ಕ್ಷೇತ್ರದಲ್ಲಿ ಹೆಚ್ಚು ಸಂಪನ್ಮೂಲಗಳನ್ನು ಮಾಡಬೇಕು ಕೈಗಾರಿಕಾ ಕ್ಷೇತ್ರವನ್ನು ಉತ್ತಮ ಮಾಡಿ ಸಂಪನ್ಮೂಲಗಳನ್ನು ಹೆಚ್ಚಿಸಿದರೆ ಮಾತ್ರ ಬಡತನ ಹೋಗುತ್ತದೇ ವಿನಾ ಬರೀ ಬಾಯಿಯಲ್ಲಿ ಮಾತನಾಡಿದರೆ ಅಥವಾ ಘೋಷಣೆಗಳಿಂದ ಬಡತನ ನಿರ್ಮೂಲ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ಅವರೇ ಹೇಳಿದ್ದಾರೆ, ಇವೆಲ್ಲವನ್ನು ತಾವು ಅರಿತಿದ್ದೀರಿ, ಅದನ್ನು ಹೇಳಬೇಕು ಎಂದು ನಾನು ಈ ಸಂದರ್ಭದಲ್ಲಿ ಕೇಳುತ್ತೇನೆ.

ಶ್ರೀ ವಿ ಎನ್. ಪಾಟೀಲ್.— ಆಹಾರಧಾನ್ಯ ಬೇಕಾದಷ್ಟಿದೆ,ಎಂದು ತಾವು ಹೇಳುತ್ತೀರಿ, ಅದು ಎಲ್ಲದೆ

ಶ್ರೀ ಎಂ. ಮಲ್ಲಪ್ಪ — ತುರ್ತುಪರಿಸ್ಥಿತಿ ಜಾರಿಗೆ ಬರುವುದಕ್ಕೆ ಮುಂಚೆ ಕೇರಳಾ ರಾಜ್ಯದಲ್ಲಿ ಒಂದು ಕೆ.ಜಿ. ಅಕ್ಕಿಯ ಬೆಲೆ 6 ರೂ.ಗಳಿತ್ತು. ಆದರೆ ತುರ್ತು ಪರಿಸ್ಥಿತಿ ಜಾರಿಯಾದಮೇಲೆ ಅಲ್ಲಿಯಾ ಸಹ ನಮ್ಮ ರಾಜ್ಯದಲ್ಲಿದ್ದಂಥ ಬೆಲೆಯಲ್ಲಿಯೇ ಸಿಗುತ್ತಿತ್ತು. ಅಂದರೆ ಇದರ ಅರ್ಥ ವಾದರೂ ಏನು ಈಗ ಕೇಂದ್ರದಲ್ಲಿ ಹೊಸ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಒಂದು ಕ್ವಿಂಟಾಲ್ ಅಕ್ಕಿಯ ಬೆಲೆ 40 ರಿಂದ 50 ರೂ ಗಳವರೆಗೆ ಜಾಸ್ತಿಯಾಗಿರಲು ಕಾರಣವೇನು ಅಧಿಕಾರದಲ್ಲಿ ಯಾರೇ ಇರಲಿ, ಇಂತಹ ವಿಚಾರಗಳನ್ನು ತೆರೆದ ಮನಸ್ಸಿನಿಂದ ವಿಚಾರ ಮಾಡಬೇಕು ಮತ್ತು ಇರತಕ್ಕಂಥ ವಾಸ್ತವಾಂಶಗಳನ್ನು ಪರಿಶೀಲನೆ ಮಾಡುವುದಕ್ಕೆ ನಮ್ಮ ಮನಸ್ಸನ್ನು ತೆರೆಯದಿದ್ದ ಪಕ್ಷದಲ್ಲಿ ಬಹಳ ವಿಚಾರಗಳು ನಮ್ಮ ಗಮನಕ್ಕೆ ಬರುವುದಿಲ್ಲ.

3-30 ಪಿ. ಎಂ.

ಇನ್ನು ಕುಟುಂಬ ಯೋಜನೆಯ ಬಗ್ಗೆಯೂ ಸಹ ಬಹಳ ಸಾಧನೆಯಾಗಿದೆ. ಎಲ್ಲಿಯಾದರೂ ಇದರ ದುರುಪಯೋಗವಾಗುತ್ತಿದ್ದರೆ ಅದನ್ನು ತಪ್ಪಿಸಬೇಕು. ಈ ಮಾತನ್ನು ಮಾನ್ಯ ಆರೋಗ್ಯ ಮಂತ್ರಿಗಳೇ ಹೇಳಿದ್ದಾರೆ. ಕೇಂದ್ರದ ಆರೋಗ್ಯ ಮಂತ್ರಿಗಳಾದ ಶ್ರೀ ರಾಜನಾರಾಯಣ ಅವರು ಈ ಯೋಜನೆಯಲ್ಲಿ ಭಾಗವಹಿಸಿದವರಿಗೆ 5 ಸಾವಿರ ರೂ. ಗಳನ್ನು ಪರಿಹಾರವಾಗಿ ಕೊಡುತ್ತೇವೆಂದು ಹೇಳಿದ್ದಾರೆ. ಪರಿಹಾರವೆಂದರೆ ಯಾರಿಗೆ ಸತ್ತವರಿಗೋ ಅಥವಾ ಕಾಂಪ್ಲಿಕೇಷನ್ ಆದವರಿಗೋ ಕಾಂಪ್ಲಿಕೇಷನ್ ಆದವರಿಗೆ ಎಂದರೆ, ಆ ಬಗ್ಗೆ ಸರ್ಟಿಫಿಕೇಟ್‌ನ್ನು ಯಾರು ಕೊಡಬೇಕು. ಇಂತಹ ಯೋಜನೆಗಳನ್ನೆಲ್ಲಾ ನೀವು ಮಾಡಿಕೊಂಡು ಬರುವುದಾದರೆ, ಅದರಿಂದ ಏನು ಸಾಧನೆ ಮಾಡಿದಂತೆ ಆಗುತ್ತದೆ ?

ಶ್ರೀ ಕೋಣಂದೂರು ಲಿಂಗಪ್ಪ.— ಆ ಬಗ್ಗೆ ಅವರು ಏನು ವಿವರಣೆ ಹೇಳಿದ್ದಾರೆಂದರೆ, ಈ ಕುಟುಂಬ ಯೋಜನೆಯ ಪರಿಣಾಮವಾಗಿ ಯಾರಿಗೆ ಮುಂದೆ ತಮ್ಮ ಜೀವನವನ್ನು ನಡೆಸುವುದಕ್ಕೆ ಸಾಧ್ಯವಿಲ್ಲವೂ ಅಂತಹವರಿಗೆ, ಯಾರು ದೈಹಿಕವಾಗಿ ನಿಸ್ತೇಜನ ಹೊಂದಿದ್ದಾರೋ, ಅಂತಹವರಿಗೆ ಕೊಡಲಾಗುತ್ತದೆಂದು ಅದು ಬಿಟ್ಟು ಈ ಯೋಜನೆಗೆ ಒಳಪಟ್ಟವರಿಗೆಲ್ಲಾ ಕೊಡಬೇಕೆಂದರೆ ನನಗೂ ಸಹ ಕೊಡಬೇಕಾಗುತ್ತದೆ.

ಶ್ರೀ ಎಂ ಮಲ್ಲಪ್ಪ.—ಈ ಶಸ್ತ್ರ ಚಿಕಿತ್ಸೆಯಿಂದ ದೈಹಿಕವಾಗಿ ನಿಸ್ತೇಜನ ಹೊಂದುತ್ತಾರೆಂದು ಹೇಳಿದರೆ ಅದು ಯಾರಾದರು ಒಪ್ಪುವ ಮಾತೇ?

ಶ್ರೀ ಕೋಣಂದೂರು ಲಿಂಗಪ್ಪ.— ನಮ್ಮ ಭಾಗದಲ್ಲಿ ಜನರನ್ನು ಎಳೆದುಕೊಂಡು ಹೋಗಿ ಈ ಶಸ್ತ್ರಚಿಕಿತ್ಸೆಯನ್ನು ನಡೆಸಿದ್ದಾರೆ. ಆ ರೀತಿ ಎಳೆದುಕೊಂಡು ಹೋಗುವಾಗ ಕೆಲವರ ಕೈಕಾಲುಗಳು ಮುರಿದಿವೆ, ಮತ್ತೆ ಕೆಲವರಿಗೆ ಕಣ್ಣೇ ಹೋಗಿದೆ.

ಶ್ರೀ ಎಂ. ಮಲ್ಲಪ್ಪ.— ನಮ್ಮ ಕರ್ನಾಟಕ ರಾಜ್ಯದಲ್ಲಿ ಆ ರೀತಿ ಎಳೆದುಕೊಂಡು ಹೋದರು, ಆ ಸಮಯದಲ್ಲಿ ಕೆಲವರಿಗೆ ಕೈಕಾಲು ಮುರಿಯಿತು, ಕಣ್ಣು ಹೋಯಿತೆಂದು ಹೇಳತಕ್ಕಂಥ ಮಾತು ಉತ್ಪ್ರೇಕ್ಷೆಯ ಮಾತು ಮತ್ತು ಅದು ಸತ್ಯಕ್ಕೆ ದೂರವಾದಂಥ ಮಾತು. ಅಂತಹ ನಿದರ್ಶನಗಳೇನಾದರೂ ಇದ್ದರೆ ರಾಜ್ಯ ಸರ್ಕಾರಕ್ಕೆ ಬರೆದು ಕೊಡಿ.

ಶ್ರೀ ಕೋಣಂದೂರು ಲಿಂಗಪ್ಪ.—ಮುಂಡಗದ್ದೆಯಲ್ಲಿ ಜನರನ್ನು ಶಿಕಾರಿ ಮಾಡಿದ್ದಾರೆ.

ಶ್ರೀ ಎಂ. ಮಲ್ಲಪ್ಪ — ಅಂತಹ ನಿರ್ದಿಷ್ಟವಾದ ಉದಾಹರಣೆಗಳು ಏನಾದರೂ ಇದ್ದರೆ, ಅವುಗಳನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತಂದರೆ, ತೊಂದರೆಗೊಳಗಾದವರಿಗೆ ನಿಜಕ್ಕೂ ಪರಿಹಾರ ದೊರಕುತ್ತದೆ. ಇಲ್ಲಿಯವರೆಗೆ ತಾವು ಅದನ್ನು ಏತಕ್ಕೆ ಹೇಳಲಿಲ್ಲ. ತಾವು ಏತಕ್ಕೆ ಕರ್ತವ್ಯಬಾಹಿರರಾದಿರಿ? ತಾವು ವಿವರಗಳನ್ನು ಕೊಟ್ಟರೆ ಸರ್ಕಾರದಿಂದ ಪರಿಹಾರ ಸಿಗುತ್ತದೆ.

ಇನ್ನು ಪ್ರಾಥಮಿಕ ಶಿಕ್ಷಣದ ಬಗ್ಗೆ ಮಾನ್ಯ ಲಿಂಗಪ್ಪನವರು ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಈಗ ನಮ್ಮ ರಾಜ್ಯದಲ್ಲಿ ಕೇವಲ 30 ರಷ್ಟು ವಿದ್ಯಾವಂತರಿದ್ದಾರೆ.

ಅಂದರೆ ಬರೆಯುತಕ್ಕವರು ಮತ್ತು ಓದತಕ್ಕವರಿದ್ದಾರೆ. ಇವರ ಸಂಖ್ಯೆ ಹೆಚ್ಚಾಗಬೇಕಲ್ಲದೆ ಶಿಕ್ಷಣದ ಗುಣ ಮಟ್ಟವೂ ಹೆಚ್ಚಾಗಬೇಕು. ಈಗ ಸರ್ಕಾರದವರು ವಿದ್ಯಾಭ್ಯಾಸಕ್ಕಾಗಿ 114 ಕೋಟಿ ರೂ.ಗಳನ್ನು ಖರ್ಚು ಮಾಡುತ್ತಿದ್ದಾರೆ. ಆದ ಕಾರಣ ಶಿಕ್ಷಣದ ಗುಣ ಮಟ್ಟದ ಬಗ್ಗೆ ಒಂದು ಒಳ್ಳೆಯ ವಾತಾವರಣವನ್ನು ಕಲ್ಪನೆ ಮಾಡಬೇಕಾಗಿದೆ. ದೇಶದ ಆಗುಹೋಗುಗಳ ಬಗ್ಗೆ ಯೋಚನೆ ಮಾಡುವಂತಹ ಒಂದು ಶಕ್ತಿ ಬರಬೇಕಾದರೆ ಎಲ್ಲರೂ ವಿದ್ಯಾವಂತರಾಗಬೇಕು. ಅಂತಹ ಒಂದು ಒಳ್ಳೆಯ ವಾತಾವರಣವನ್ನು ಸರ್ಕಾರದವರು ನಿರ್ಮಾಣ ಮಾಡುವುದು ಅವಶ್ಯಕ. ಇಂದು ಶಾಲಾಕಾಲೇಜುಗಳಲ್ಲಿ ಓದುತ್ತಿರುವ ಮಕ್ಕಳ ಸ್ಥಿತಿಯನ್ನು ನೋಡಿದರೆ ಚಿಂತಾಜನಕವಾಗುತ್ತದೆ. ಕಾರಣವೇನೆಂದರೆ, ಅವರ ಗುಣಮಟ್ಟ ಹೆಚ್ಚಾಗಿಲ್ಲ. ಶಿಕ್ಷಣದ ಗುಣಮಟ್ಟ ಹೆಚ್ಚಾಗುವ ರೀತಿಯಲ್ಲಿ ಈಗಿನ ಶಿಕ್ಷಣದ ಪದ್ಧತಿಯು ಮಾರ್ಪಾಡಾಗಬೇಕು. ಆ ರೀತಿ ಆದಾಗ ಮಾತ್ರ ನಾವು ಇಂದು ಶಿಕ್ಷಣಕ್ಕೆ ಇಷ್ಟೊಂದು ಹಣವನ್ನು ಏನು ಖರ್ಚು ಮಾಡುತ್ತಿದ್ದೇವೆ, ಅದು ಸದುಪಯೋಗವಾಗುತ್ತದೆ.

ಇನ್ನು ಕೃಷಿ ಮತ್ತು ನೀರಾವರಿ ಅಭಿವೃದ್ಧಿಗಾಗಿ ನಮ್ಮ ಸರ್ಕಾರ 208 ಕೋಟಿ ರೂ.ಗಳ ಯೋಜನೆಯನ್ನು ಹಾಕಿಕೊಂಡು ಕಾರ್ಯಗತ ಮಾಡುತ್ತಿದೆ. ನಮ್ಮ ರಾಜ್ಯದಲ್ಲಿ ಕೃಷಿ ಅಭಿವೃದ್ಧಿ ಚೆನ್ನಾಗಿ ಆಗುತ್ತಿದೆ. ಮಾನ್ಯ ಲಿಂಗಪ್ಪನವರ ಜಿಲ್ಲೆಯಾದ ಶಿವಮೊಗ್ಗ ಜಿಲ್ಲೆಯಲ್ಲಿ ಈ ಮೊದಲು ಒಂದು ಎಕರೆಗೆ 5 ಪಲ್ಲ ಭತ್ತ ಬೆಳೆಯುತ್ತಿದ್ದವರು ಇಂದು 50 ಪಲ್ಲ ಬೆಳೆಯುತ್ತಿದ್ದಾರೆ. ತಾಂತ್ರಿಕ ಅನುಭವ ಮತ್ತು ರೈತರ ಪರಿಶ್ರಮ ಸೇರಿದ್ದರಿಂದ ಇದು ಸಾಧ್ಯವಾಗಿದೆ. ಇದನ್ನು ಯಾರೂ ಅಲ್ಲಗಳೆಯುವಂತಿಲ್ಲ. ಈಗ ನಮ್ಮ ರಾಜ್ಯದಲ್ಲಿ 16 ರಿಂದ 20 ಪರ್ಸೆಂಟ್‌ವರೆಗೆ ನೀರಾವರಿ ಯಾಗುತ್ತಿದೆ ಎಂದು ಲೆಕ್ಕ ಕೊಟ್ಟಿದ್ದಾರೆ. ಇದನ್ನು ಎಷ್ಟರಮಟ್ಟಿಗೆ ಒಪ್ಪಬೇಕು ಎಂಬ ಬಗ್ಗೆ ನನಗೆ ಶಂಕೆ ಇದೆ. ಈಗ ಹಳೆಯ ಸಣ್ಣಪುಟ್ಟ ಕೆರೆಗಳಲ್ಲಿನ ಮಣ್ಣನ್ನು ತೆಗೆಯುತ್ತಿರುವುದರ ಜೊತೆಗೆ ಹೊಸ ಕೆರೆಗಳನ್ನು ನಿರ್ಮಾಣ ಮಾಡಬೇಕು, ಲಿಫ್ಟ್ ಇರಿಗೇಷನ್ ಸ್ಕೀಮುಗಳನ್ನು ಕಾರ್ಯಗತ ಮಾಡಬೇಕು ಮತ್ತು ಎಲ್ಲ ನೀರಾವರಿ ಯೋಜನೆಗಳನ್ನು ಕಾರ್ಯಗತ ಮಾಡಿ ಕೃಷಿಗೆ ನೀರಾವರಿ ಸೌಲಭ್ಯವನ್ನು ಹೆಚ್ಚು ಹೆಚ್ಚಾಗಿ ಒದಗಿಸಬೇಕು. ಬಡತನ ನಿರ್ಮೂಲವಾಗಬೇಕಾದರೆ ಸರ್ಕಾರದವರು ಕೃಷಿಗೆ ಹೆಚ್ಚಿನ ಅಧ್ಯತೆ ಕೊಡಬೇಕು. ಕೃಷಿ ಮತ್ತು ನೀರಾವರಿ ಯೋಜನೆಗಳ ಅಭಿವೃದ್ಧಿಗೆ ಸರ್ಕಾರದವರು ಯಾವ ರೀತಿಯಿಂದಲೂ ಅಡ್ಡಿ ಮಾಡಬಾರದು. ಮಾನ್ಯ ಲಿಂಗಪ್ಪನವರು ಹೇಳಿದರೆಂದು ಬಿಡುವುದೂ ಬೇಡ, ನಾನು ಹೇಳಿದೆನೆಂದು ಕೈಕೊಳ್ಳುವುದು ಬೇಡ. ಇದನ್ನು ಪಕ್ಷದ ದೃಷ್ಟಿಯಿಂದ ನೋಡದೆ, ತಾಂತ್ರಿಕ ಪರಿಣತರು ಏನು ಅಭಿಪ್ರಾಯ ಪಡುತ್ತಾರೋ ಅದರಂತೆ ಕಾರ್ಯಗತ ಮಾಡಿದರೆ, ಅದರಿಂದ ಈ ದೇಶಕ್ಕೆ ಒಳ್ಳೆಯದಾಗುತ್ತದೆಂದು ಹೇಳುತ್ತೇನೆ.

ಇನ್ನು ಪಶುಗಳ ಅಭಿವೃದ್ಧಿಯ ಬಗ್ಗೆ ಈ ಸರ್ಕಾರದ ಸಾಧನೆ ನಿಜಕ್ಕೂ ಮೆಚ್ಚತಕ್ಕದ್ದು. ಈಗ ಬೆಂಗಳೂರು, ಶಿವಮೊಗ್ಗ, ಹಾಸನ ಈ ಕಡೆಗಳಲ್ಲಿ ಸ್ಥಾಪನೆಯಾಗಿರುವ ಡೈರಿಗಳು ಬಹಳ ಚೆನ್ನಾಗಿ ಕೆಲಸ ಮಾಡುತ್ತಿವೆ. ಅವು ಇನ್ನೂ ಅಭಿವೃದ್ಧಿಯಾಗಬೇಕು. ಉತ್ತಮ ತಳಿಗಳನ್ನು ಸಾಕಲು ಬಡವರಿಗೆ, ಹಿಂದುಳಿದವರಿಗೆ ಹಾಗೂ ದುರ್ಬಲ ವರ್ಗದವರಿಗೆ ಹೆಚ್ಚು ಹೆಚ್ಚಾಗಿ ಒದಗಿಸಬೇಕು. ಅಭಾವ ಪೀಡಿತ ಪ್ರದೇಶಗಳಲ್ಲಿ ಅಧಿಕಾರಿಗಳು ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿದ್ದಾರೆಯೋ ಎಂಬ ಬಗ್ಗೆ ಅನುಮಾನ ಬರುತ್ತಿದೆ. ಏಕೆಂದರೆ, ಯಾರಿಗೆ ಜಮೀನು ಇದೆಯೋ ಅವರಿಗೆ ಮಾತ್ರ ಹಸುಗಳನ್ನು ಕೊಡುತ್ತೇವೆಂದು ಅಧಿಕಾರಿಗಳು ಹೇಳುತ್ತಿದ್ದಾರೆ. ಜಮೀನು ಇಲ್ಲದವರಿಗೂ ಸಹ ಹಸುಗಳನ್ನು ಕೊಟ್ಟರೆ, ಅವರು ತಿಂಗಳಿಗೆ 250 ರಿಂದ 300 ರೂ ಗಳವರೆಗೆ ಸಂಪಾದನೆ ಮಾಡಿ ತಮ್ಮ ಜೀವನವನ್ನು ನಡೆಸುವುದಕ್ಕೆ ಒಂದು ಅವಕಾಶ ಮಾಡಿಕೊಟ್ಟಂತಾಗುತ್ತದೆಂದು ನಾನು ಅಧಿಕಾರಿಗಳಿಗೆ ಹೇಳಿದಾಗ ಅವರು ಈ ಯೋಜನೆಯಲ್ಲಿ ಕೆಲವೊಂದು ಕ್ಲಾಜ್‌ಗಳನ್ನು ಹಾಕಿದೆ, ಅದರ ಪ್ರಕಾರ ಕೊಡಲು ಸಾಧ್ಯವಾಗುವುದಿಲ್ಲವೆಂದು ಹೇಳುತ್ತಾರೆ. ನಮ್ಮ ಕಡೂರು ತಾಲ್ಲೂಕ್ ಸಹ ಅಭಾವ ಪೀಡಿತ ಪ್ರದೇಶಕ್ಕೆ ಒಳಪಟ್ಟಿರುವುದರಿಂದ 30 ಹಸುಗಳನ್ನು ಹಂಚಿದರು. ನಂತರ ಮೇಲಿನ ಅಧಿಕಾರಿಗಳು ಅಲ್ಲಿಗೆ ಬಂದಾಗ ಜಮೀನು ಇಲ್ಲದವರಿಗೆ ಹಸುಗಳನ್ನು ಕೊಟ್ಟಿದ್ದಾರೆ. ಅದನ್ನು ವಜಾ ಮಾಡಿ ಎಂದು ಹೇಳಿದರು. ಆಗ ನಾನು ಅವರಿಗೆ ನಿಮಗೇನಾದರೂ ಬುದ್ಧಿ ಇದೆಯೋ, ಬಡವರಿಗೆ ಅನುಕೂಲ ಮಾಡಬೇಕೆಂದು ಅನೇಕ ಯೋಜನೆಗಳನ್ನು ಕೈಕೊಳ್ಳುತ್ತಿರುವಾಗ, ಅದನ್ನು ಕಾರ್ಯಗತ ಮಾಡುವ ಕಾಲದಲ್ಲಿ ಅಧಿಕಾರವನ್ನು ದುರುಪಯೋಗಪಡಿ

ಕೊಳ್ಳುವುದು ಸರಿಯಲ್ಲ, ಜಮೀನು ಇಲ್ಲದವರಿಗೂ ಹಸುಗಳನ್ನು ಕೊಟ್ಟರೆ ತಪ್ಪೇನಿದೆ, ಈ ಹಸುಗಳಿಗೆ 80 ಪರ್ಸೆಂಟ್‌ವರೆಗೆ ಇನ್ಸೂರೆನ್ಸ್ ಮಾಡಿಸಲಾಗಿದೆ, ಇನ್ನು ಇಪ್ಪತ್ತು ಪರ್ಸೆಂಟ್ ಹಣವನ್ನು ಹಸುಗಳನ್ನು ಪಡೆದವರು ಕ್ರಮೆಯಿಂದ ಕೊಡುತ್ತಾರೆ, ಒಂದು ಪಕ್ಷ ಹಸು ಸತ್ತರೂ ಸಹ ಇನ್ಸೂರೆನ್ಸ್ ಮಾಡಿಸಿರುವುದರಿಂದ ಹಣದ ಭದ್ರತೆಯೂ ಇರುವುದರಿಂದ ಜಮೀನು ಇಲ್ಲದವರಿಗೂ ಹಸುವನ್ನು ಕೊಟ್ಟರೆ ತಪ್ಪೇನಿದೆ ಎಂದು ಅವರೊಡನೆ ವಾದ ವಿವಾದ ಮಾಡಿದ ಮೇಲೆ ಅವರು ಒಪ್ಪಿಕೊಂಡರು. ಈಗಿನ ಪದ್ಧತಿಯನ್ನು ಬದಲಾವಣೆ ಮಾಡಬೇಕು. ಯಾರು ಹಿಂದುಳಿದಿದ್ದಾರೆ, ಯಾರಿಗೆ ಜಮೀನು ಇಲ್ಲ, ಅಂತಹವರಿಗೂ ಸಹ ಹಸುಗಳನ್ನು ಕೊಡಿ. ನಮಗೆ ಈಗ ಹಾಲಿನ ಅವಶ್ಯಕತೆ ಬಹಳ ಇದೆ. ವ್ಯವಸಾಯದ ಜೊತೆಗೆ ಉಪಕಸುಬುಗಳನ್ನು ಇವರು ಕೈಕೊಳ್ಳದಿದ್ದರೆ ಜೀವನ ಸಾಗಿಸುವುದು ಬಹಳ ಕಷ್ಟವಾಗುತ್ತದೆ. ಈಗ ನಮ್ಮಲ್ಲಿ ಶೇಕಡಾ 16ರಷ್ಟು ಮಾತ್ರ ನೀರಾವರಿ ಸೌಲಭ್ಯವಿದೆ. ಉಳಿದ 84 ಪರ್ಸೆಂಟ್ ಜಮೀನಿನಲ್ಲಿ ಬೆಳೆ ಬೆಳೆಯಬೇಕಾದರೆ ಮಳೆಯನ್ನೇ ಆಶ್ರಯ ಮಾಡಬೇಕು. ಹೋದ ವರ್ಷ ಮಳೆ ಬರಲಿಲ್ಲ. ಇದರಿಂದ ರೈತರ ಕಷ್ಟ ಹೇಳತೀರದು. ನಮ್ಮ ಜಿಲ್ಲೆಯ ಬಗ್ಗೆ ಹೇಳಬೇಕೆಂದರೆ, ಭತ್ತ ಬೆಳೆಯುವ ಪ್ರದೇಶಗಳಲ್ಲಿಯೂ ಸಹ ಒಂದು ಕಾಳನ್ನು ಸಹ ಬೆಳೆಯಲಿಲ್ಲ.

ನಾನು ನನ್ನ ಅನುಭವದಲ್ಲಿ ಹೇಳುವುದಾದರೆ ನಮ್ಮ ಮನೆತನದಲ್ಲಿ ಅಕ್ಕಿಯನ್ನು ಕೊಂಡು ಕೊಂಡು ತಿಂದಿದ್ದು ಗೊತ್ತಿಲ್ಲ. ಇವೊತ್ತು ನಾವು ಅಕ್ಕಿಯನ್ನು ಕೊಂಡು ಕೊಂಡು ತಿನ್ನುವಂಥಾ ಪರಿಸ್ಥಿತಿ ಬಂದಿದೆ. ಮಳೆ ಬಾರದೆ ಇದ್ದುದರಿಂದ ಇಷ್ಟು ಕಷ್ಟವಾಗಿದೆ. ಆದ್ದರಿಂದ ಭೂಮಿಯಲ್ಲಿರುವ ನೀರನ್ನು ತೆಗೆದು ರೈತರಿಗೆ ಬೇಸಾಯಕ್ಕೆ ಅನುಕೂಲ ಮಾಡಿಕೊಡಬೇಕು. ನೀರಾವರಿ ಕಾಮಗಾರಿಗಳಿಗೆ ಹೆಚ್ಚಿನ ಹಣವನ್ನು ಒದಗಿಸಬೇಕು. ಸಮೃದ್ಧಿಯಾದ ರಾಷ್ಟ್ರವನ್ನು ದೇಶವನ್ನು ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಕೇಂದ್ರ ಸರ್ಕಾರದ ಸಹಾಯವನ್ನು ಪಡೆದುಕೊಂಡು ನೀರಾವರಿ ಕೆಲಸಗಳಿಗೆ ಹೆಚ್ಚು ಹೆಚ್ಚು ಹಣವನ್ನು ಒದಗಿಸಬೇಕು. ಈ ಕೆಲಸಕ್ಕೆ ಹಣ ಇಲ್ಲ ಎಂದು ಹೇಳಬಾರದು.

ಗ್ರಾಮಾಂತರ ಪ್ರದೇಶಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸುವುದರಲ್ಲಿ ಬಹಳ ಮಂದಗತಿಯಾಗಿದೆ. ಮೊದಲು ಒಂದು ಕಾಲದಲ್ಲಿ ರೈತನ ಮನೆಯ ಬಾಗಿಲಿಗೆ ಹೋಗಿ ವಿದ್ಯುಚ್ಛಕ್ತಿಯನ್ನು ತೆಗೆದುಕೊಳ್ಳಿ ಎಂದು ಹೇಳುತ್ತಿದ್ದರು. ಆದ್ದರಿಂದ ಈಗ ಗ್ರಾಮಾಂತರ ಪ್ರದೇಶಗಳಿಗೆ ವಿದ್ಯುಚ್ಛಕ್ತಿಯನ್ನು ಹೆಚ್ಚು ಒದಗಿಸುವುದಕ್ಕೆ ಸರ್ಕಾರ ಪ್ರಾಮಾಣವಾಗಿ ಕೆಲಸ ಮಾಡಬೇಕು ಮತ್ತು ವಿದ್ಯುಚ್ಛಕ್ತಿಯನ್ನು ಒದಗಿಸಬೇಕು ಎಂದು ನಾನು ಹೇಳುತ್ತೇನೆ. ದೇಶದ ಅಭಿವೃದ್ಧಿ ಆಗಿದೆಯೋ ಅಥವಾ ಇಲ್ಲವೋ ಎಂಬುದನ್ನು ನೋಡಬೇಕಾದರೆ ಗ್ರಾಮಾಂತರ ಪ್ರದೇಶದ ಕಡೆ ತಿರುಗಿ ನೋಡಬೇಕು. ಬೆಂಗಳೂರಿನಲ್ಲಿ ಟಾರ್ ರೋಡು ಮತ್ತು ಕುಡಿಯುವ ನೀರು ಇದ್ದರೆ ಎಲ್ಲವೂ ಸಮೃದ್ಧಿಯಾಗಿದೆ ಎಂದು ಹೇಳುವುದಕ್ಕಾಗುವುದಿಲ್ಲ. ಹಳ್ಳಿಗಳಲ್ಲಿ ಏನು ವಾತಾವರಣ ಇದೆ ಎಂಬುದನ್ನು ನೋಡಬೇಕು. ಇವೊತ್ತು ಒಳ್ಳೆಯ ಜೀವನವನ್ನು ನಡೆಸುವುದಕ್ಕೆ ಉತ್ತಮ ಜೀವನವನ್ನು ನಡೆಸುವುದಕ್ಕೆ ಬೇಕಾದಂತಹ ವಾತಾವರಣ ಹಳ್ಳಿಗಳಲ್ಲಿ ನಿರ್ಮಾಣವಾಗದಿದ್ದರೆ ಖಂಡಿತವಾಗಿಯೂ ತೊಂದರೆಯಾಗುತ್ತದೆ.

ಮತ್ತೊಂದು ವಿಷಯವನ್ನು ಹೇಳಬೇಕು ಎಂದರೆ ಕೈಗಾರಿಕೆಗಳ ವಿಕೇಂದ್ರೀಕರಣವಾಗಬೇಕು. ನಾನು ಈ ವಿಚಾರವನ್ನು ಪ್ರತಿ ಅಧಿವೇಶನದಲ್ಲಿಯೂ ಹೇಳುತ್ತಿದ್ದೇನೆ. ಭಾರತ ಸರ್ಕಾರದವರು ಹಾಗೆಯೇ ಮಾಡುತ್ತಾರೆ, ರಾಜ್ಯ ಸರ್ಕಾರದವರೂ ಹಾಗೆಯೇ ಮಾಡುತ್ತಾರೆ. ತಾಲ್ಲೂಕು ಮಟ್ಟದಲ್ಲಿ ಹೆಚ್ಚು ಹೆಚ್ಚು ಕೈಗಾರಿಕೆಗಳನ್ನು ಸ್ಥಾಪನೆ ಮಾಡಿ ಅದರಿಂದ ನಿರುದ್ಯೋಗ ಸಮಸ್ಯೆಯನ್ನು ಪರಿಹಾರ ಮಾಡುವುದಕ್ಕೆ ಅನುಕೂಲವಾಗುತ್ತದೆ. ಅದಕ್ಕಾಗಿ ಹೆಚ್ಚು ಅನುಕೂಲಗಳನ್ನು ಏರ್ಪಾಟು ಮಾಡಬೇಕು. ಹೆಚ್ಚು ಪ್ರೋತ್ಸಾಹವನ್ನು ತಾಲ್ಲೂಕು ಮಟ್ಟದಲ್ಲಿ ಜಿಲ್ಲಾ ಮಟ್ಟದಲ್ಲಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದಕ್ಕೆ ರಾಜ್ಯಸರ್ಕಾರದವರು ಮತ್ತು ಕೇಂದ್ರಸರ್ಕಾರದವರು ಪ್ರಯತ್ನ ಮಾಡಿದರೆ ನಿಜವಾಗಿಯೂ ಅದರಿಂದ ಒಳ್ಳೆಯದಾಗುತ್ತದೆ.

ಆಡಳಿತ ಶುದ್ಧವಾಗಬೇಕು. ಈ ಒಂದು ಪ್ರಯೋಜನ ರೈತನಿಗೆ ಮುಟ್ಟಬೇಕಾದರೆ ಗ್ರಾಮ ಮಟ್ಟದಲ್ಲಿ ಅನುಕೂಲವಾಗಬೇಕು. ಅಲ್ಲಿ ಆಡಳಿತ ಶುದ್ಧವಾಗಿರಬೇಕು. ಆದರೆ ನಾನು ನಿಜವಾಗಿಯೂ ಹೇಳಬೇಕಾದರೆ ತಾಲ್ಲೂಕಿನಿಂದ ಹಿಡಿದು ವಿಧಾನಸೌಧದವರೆಗೂ ಆಡಳಿತ ಶುದ್ಧವಿಲ್ಲ. ತಾಲ್ಲೂಕಿ

ನಿಂದ ಹಿಡಿದು ವಿಧಾನಸೌಧದವರೆಗೂ ಇದೆಯೋ ಪ್ರಾಮಾಣಿಕತೆ ಇದೆಯೋ ಎನ್ನುವ ತರ್ಕಕ್ಕೆಂಥಾ ಅರ್ಥವನ್ನು ನೋಡಿದರೆ ಯಾರಿಗೂ ಸಂಶಯ ಬಾರದೆ ಇರುವುದಿಲ್ಲ. ಮೊದಲು ತಾಲ್ಲೂಕು ಮಟ್ಟದಲ್ಲಿ ಲಂಚರುಷವತ್ತುಗಳೇನಿವೆ ಅದು ಹೋಗಬೇಕು. ಎಲ್ಲಿಯವರೆಗೆ ಆಡಳಿತ ಶುದ್ಧವಾಗಿರುವುದಿಲ್ಲ ಅಲ್ಲಿಯವರೆಗೆ ಜೀವನ ಉತ್ತಮವಾಗಿರುವುದಿಲ್ಲ ಎಂದು ನಾನು ಒತ್ತಿ ಹೇಳಬಯಸುತ್ತೇನೆ. ಲೋಕೋಪಯೋಗಿ ಇಲಾಖೆಯಲ್ಲಿ ದಕ್ಷತೆ ಮತ್ತು ಪ್ರಾಮಾಣಿಕತೆ ಹೆಚ್ಚಬೇಕಾದರೆ ಶುದ್ಧವಾದ ಆಡಳಿತ ಬರಬೇಕು ಎಂದು ನಾನು ಹೇಳುತ್ತೇನೆ.

ಮನೆಗಳನ್ನು ಕಟ್ಟಿಕೊಡುವುದರಿಂದ ಕೆಲವು ಜನಗಳಿಗೆ ಬಹಳ ಉಪಕಾರವಾಗಿದೆ. ಆದರೆ ತಾಲ್ಲೂಕಿನ ಜನಸಂಖ್ಯೆಯ ಆಧಾರದ ಮೇಲೆ ಹರಿಜನರಿಗೆ ದುರ್ಬಲವರ್ಗದವರಿಗೆ ಅವರು ಇರತಕ್ಕ ಸಂಖ್ಯೆಯ ಆಧಾರದ ಮೇಲೆ ನೋಡಿದರೆ ಇನ್ನೂ ಹೆಚ್ಚಿನ ಮನೆಗಳನ್ನು ಕಟ್ಟಿಕೊಡಬೇಕಾಗಿದೆ. ಬಡವರು ಮತ್ತು ನಿರ್ಗತಿಕರಿಗೆ ಮನೆಗಳನ್ನು ಕಟ್ಟಿಸಿ ಕೊಟ್ಟು ಅವರು ಉತ್ತಮವಾದ ಜೀವನವನ್ನು ಮಾಡುವುದಕ್ಕೆ ಅನುಕೂಲ ಮಾಡಿಕೊಡಬೇಕು. ನಿಜವಾಗಿಯೂ ಕೂಡ ಕೃಷಿ ಕೈಗಾರಿಕೆ ನೀರಾವರಿ ಇವುಗಳಿಗೆ ಹೆಚ್ಚು ಆದ್ಯತೆಯನ್ನು ಕೊಡಬೇಕು ಎಂದು ರಾಜ್ಯಪಾಲರು ಪ್ರಧಾನವಾಗಿ ಹೇಳಿದ್ದಾರೆ. ಬಡತನ ನಿರುದ್ಯೋಗ ಇವುಗಳನ್ನು ನಿರ್ಮೂಲನ ಮಾಡುವ ಕಾರ್ಯದಲ್ಲಿ ನಾವೆಲ್ಲರೂ ಅವರೊಡನೆ ಹೊಂದಿಕೊಂಡು ಕೆಲಸ ಮಾಡೋಣ ಎಂದು ಹೇಳಿ ನನಗೆ ಇಷ್ಟು ವಿಷಯಗಳನ್ನು ಹೇಳುವುದಕ್ಕೆ ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಪ್ರಭಾಕರರೆಡ್ಡಿ (ಚಾಮರಾಜಪೇಟೆ)—ಮಾನ್ಯ ಅಧ್ಯಕ್ಷರೇ ರಾಜ್ಯಪಾಲರ ಭಾಷಣದ ಬಗ್ಗೆ ನಾನು ಕೆಲವು ಮಾತುಗಳನ್ನು ಹೇಳಬಯಸುತ್ತೇನೆ. ರಾಜ್ಯಪಾಲರು 25 ಅಂಶಗಳ ಕಾರ್ಯಕ್ರಮದ ಬಗ್ಗೆ ಕೆಲವೊಂದು ವಿಷಯಗಳನ್ನು ಹೇಳಿದ್ದಾರೆ. ಹಿಂದೆ ಇದ್ದಂತಹ ಮಾಜಿ ಪ್ರಧಾನ ಮಂತ್ರಿ ಶ್ರೀಮತಿ ಇಂದಿರಾಗಾಂಧಿಯವರ 20 ಅಂಶಗಳ ಕಾರ್ಯಕ್ರಮಕ್ಕೆ ಸಂಜಯ ಗಾಂಧಿಯವರ 5 ಅಂಶದ ಕಾರ್ಯಕ್ರಮಗಳನ್ನು ಸೇರಿಸಿದ್ದಾರೆ. ಈ 5 ಅಂಶದ ಕಾರ್ಯಕ್ರಮಗಳನ್ನು ಹಿಂದೆ ಇದ್ದಂತಹ ಮಾಜಿ ಪ್ರಧಾನ ಮಂತ್ರಿಗಳಾದ ಶ್ರೀಮತಿ ಇಂದಿರಾಗಾಂಧಿಯವರ ಪುತ್ರ ಸಂಜಯ ಗಾಂಧಿಯವರು ಮಾಡಿದ್ದಾರೆ. ಈ 5 ಅಂಶಗಳ ಕಾರ್ಯಕ್ರಮಕ್ಕೆ ರಾಜ್ಯಗಳ ಮುಖ್ಯ ಮಂತ್ರಿಗಳು ಮತ್ತು ರಾಜ್ಯಪಾಲರುಗಳು ಹೆಚ್ಚಿನ ರೀತಿಯ ಶ್ರದ್ಧೆಯನ್ನು ವಹಿಸಿರುವುದನ್ನು ನೋಡಿದರೆ ಬಹಳ ಆಶ್ಚರ್ಯವಾಗುತ್ತದೆ. ಸಂಜಯ ಗಾಂಧಿಯವರು ಮಾಜಿ ಪ್ರಧಾನ ಮಂತ್ರಿಗಳ ಪುತ್ರನಾಗಿರಬಹುದು. ಅಂದಾಕ್ಷಣಕ್ಕೆ ಅವರ 5 ಅಂಶಗಳ ಕಾರ್ಯಕ್ರಮಕ್ಕೆ ಅಷ್ಟೊಂದು ಬೆಲೆಯನ್ನು ಕೊಡುವುದು ಸರಿಯಲ್ಲ. ಅವರ ಕಾರ್ಯಕ್ರಮ ಒಳ್ಳೆಯದಾಗಿರಬಹುದು, ಆದರೆ ಅದಕ್ಕೆ ಎಷ್ಟು ಬೆಲೆಯನ್ನು ಕೊಡಬೇಕೋ ಅಷ್ಟು ಕೊಡಬೇಕೇ ಹೊರತು ಅದನ್ನೇ ದೊಡ್ಡದು ಮಾಡುವುದು ಸರಿಯಲ್ಲ. ಸಂಜಯ ಗಾಂಧಿಯವರು ಅವರ 5 ಅಂಶಗಳ ಕಾರ್ಯಕ್ರಮದ ಅಂಗವಾಗಿ ಅವರು ನಮ್ಮ ರಾಜ್ಯಕ್ಕೆ ಬಂದಿದ್ದಾಗ ಅವರಿಗೆ ನೀಡಿದ ಗೌರವ ಎಷ್ಟು ಎಂದರೆ ಇವೊತ್ತು ಸ್ವಾತಂತ್ರ್ಯಕ್ಕೆ ಹೋರಾಟ ಮಾಡಿದಂತಹ ಯಾವ ಮಹಾವ್ಯಕ್ತಿಗೂ ಅಂಥಾ ಒಂದು ಗೌರವ ನೀಡಿಲ್ಲ. ಅವರು ನಮ್ಮ ರಾಜ್ಯಕ್ಕೆ ಬಂದಾಗ ಕೆಲವು ಚಿಕ್ಕ ಮಂತ್ರಿಗಳು ದೊಡ್ಡ ಮಂತ್ರಿಗಳಾಗಬೇಕು ಎನ್ನುವ ದೃಷ್ಟಿಯಿಂದ ಅವರಿಗೆ ಅದ್ದೂರಿಯ ಸ್ವಾಗತವನ್ನು ನೀಡಿ ಅವರ ತಲೆಗೆ ಮೈಸೂರು ಪೇಟವನ್ನು ಇಟ್ಟು ಅವರಿಗೆ ಗೌರವ ಸೂಚಿಸಿದರು. ಅವರು ಏತಕ್ಕೋಸ್ಕರ ಸಂಜಯಗಾಂಧಿಯವರಿಗೆ ಈ ರಾಜ್ಯದಲ್ಲಿ ಹೆಚ್ಚಿನ ಗೌರವವನ್ನು ನೀಡಿದರು ಎಂದರೆ ನಮ್ಮ ಸ್ಥಾನ ಭದ್ರವಾಗಿರುತ್ತದೆ ನಮಗೆ ಪ್ರಮೋಷನ್ ಸಿಕ್ಕುತ್ತೆ ಎಂದು. ಅದರ ಫಲದಿಂದ ಕೆಲವು ಚಿಕ್ಕ ಮಂತ್ರಿಗಳಿಗೆ ದೊಡ್ಡ ಮಂತ್ರಿಗಳ ಸ್ಥಾನ ಸಿಕ್ಕಿತು. ಮತ್ತು ಹಿಂದೆ ಇದ್ದ ಪ್ರಧಾನ ಮಂತ್ರಿಗಳಿಗೆ ಸಂತೋಷವುಂಟಾಗುತ್ತದೆ ಎಂದು ಅದರ ಮೆಚ್ಚಿಗೆಯನ್ನು ಪಡೆಯುವ ದೃಷ್ಟಿಯಿಂದ ಸಂಜಯಗಾಂಧಿಯವರಿಗೆ ಹೆಚ್ಚಿನ ರೀತಿಯ ಗೌರವವನ್ನು ಕೊಟ್ಟರು. ಸನ್ಮಾನ ಮಾಡಿದರು. ಆ ರೀತಿ ಅವರು ಮಾಡಿದ್ದರಿಂದ ಕೆಲವರಿಗೆ ದೊಡ್ಡ ಮಂತ್ರಿಗಳ ಪದವಿಯೂ ಸಿಕ್ಕಿತು. ಕೆಲವು ಮಂತ್ರಿಗಳಿಗೆ ಸ್ಥಾನ ಪಲ್ಲಟವೂ ಆಯಿತು. ಈ 5 ಅಂಶಗಳ ಕಾರ್ಯಕ್ರಮದ ಬಗ್ಗೆ ನಮ್ಮ ರಾಜ್ಯಪಾಲರು ಭಾಷಣ ಮಾಡಿರುವುದನ್ನು ನೋಡಿದರೆ ನನಗೆ ಬಹಳ ವ್ಯಥೆಯಾಗುತ್ತದೆ. ಈ 5 ಅಂಶಗಳ ಕಾರ್ಯಕ್ರಮದಲ್ಲಿ ಜಾತೀಯತೆಯ ನಿರ್ಮೂಲನವೂ ಸೇರಿದೆ. ಇವೊತ್ತು ಮೊನ್ನೆ ನಡೆದಂತಹ ಲೋಕಸಭೆಯ

ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾದಂತಹ ಮಂಗಳೂರಿನ ಅಭ್ಯರ್ಥಿಯ ಬಗ್ಗೆ ಪತ್ರಿಕೆಗಳಲ್ಲಿ ಜಾಹಿರಾತನ್ನು ನೀಡಿ ಜಾತಿಯ ಹೆಸರಿನಲ್ಲಿ 85 ಸಾವಿರ ಬಿಲ್ಲವ ಜಾತಿಯವರನ್ನು ಆಧಾರವಾಗಿಟ್ಟು ಕೊಂಡು ಜಾತಿಯ ಹೆಸರಿನಲ್ಲಿ ಒಂದು ಜಾಹಿರಾತನ್ನು ನೀಡಿದ್ದಾರೆ. ಇದು ಇದರ 5 ಅಂಶದ ಕಾರ್ಯಕ್ರಮ.

ಶ್ರೀ ಸಿ. ಬೈರೇಗೌಡ.— ಮಾನ್ಯ ಮುಖ್ಯ ಮಂತ್ರಿಗಳು ಸಿದ್ದಾಪುರದಲ್ಲಿ ಅವರ ಕೋಮಿನ ಸಂಘದ ಉದ್ಘಾಟನೆ ಮಾಡಿಲ್ಲವೇನೋ ?

ಶ್ರೀ ಕೆ. ಪ್ರಭಾಕರ ರೆಡ್ಡಿ.— ಜಾತಿಯ ಹೆಸರಿನಲ್ಲಿ ಜಾಹಿರಾತು ಕೊಟ್ಟಿರುವುದು ಇದೆ.

ಶ್ರೀ ಕೊಣಂದೂರು ಲಿಂಗಪ್ಪ.— ಇವರ ಕೋಮಿನ ಸಂಘದ ಉದ್ಘಾಟನೆ ಮಾಡಿದ್ದು ಉಂಟು.

ಶ್ರೀ ಕೆ. ಪ್ರಭಾಕರ ರೆಡ್ಡಿ.— ಓಟು ಪಡೆಯುವುದಕ್ಕೆ ಜಾತಿಯ ಹೆಸರಿನಲ್ಲಿ ಪ್ರಚಾರ ಮಾಡಿದ್ದಾರೆ.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು.— ಜಾತಿಯ ಆಧಾರದ ಮೇಲೆ ಅಂದರೆ, ಲಿಂಗಾಯಿತು ನಿಂತಾಗ ಲಿಂಗಾಯಿತರು, ಬ್ರಾಹ್ಮಣರಿಗೆ ಬ್ರಾಹ್ಮಣರು, ಒಕ್ಕಲಿಗರಿಗೆ ಒಕ್ಕಲಗರು ಮತ ಹಾಕಿಲ್ಲವೇ.

ಶ್ರೀ ಕೆ. ಪ್ರಭಾಕರ ರೆಡ್ಡಿ.— ಈ 20 ಅಂಶಗಳ ಕಾರ್ಯಕ್ರಮದಲ್ಲಿ ಬೆಲೆಗಳನ್ನು ಇಳಿಸುತ್ತೇವೆ ಎನ್ನುವುದು ಒಂದು ಅಂಶ. ಹಿಂದೆ ಇದ್ದಂಥ ಸಚಿವರು ಹೋಟೆಲ್ ತಿಂಡಿಗಳ ಬೆಲೆ ಇಳಿಯಬೇಕು ಎನ್ನುವ ದೃಷ್ಟಿಯಿಂದ ಇಳಿಸಿದರು. ಅದಾದನಂತರ ಅವರ ಜವಾಬ್ದಾರಿ ಇರತಕ್ಕಂಥ ಆ ಹಕ್ಕನ್ನು ಕಿತ್ತು ಮಾನ್ಯ ಆಹಾರ ಸಚಿವರಿಗೆ ನೀಡಿದರು. ಅವರು ಹೋಟೆಲ್ ತಿಂಡಿಗಳ ಬೆಲೆ ಇಳಿಸುವ ಬದಲು ಏರಿಸಿದ್ದಾರೆ. ಹಿಂದೆ ಹೋಟೆಲ್ ತಿಂಡಿಗಳ ಬೆಲೆ ಬಹಳ ಕಡಿಮೆ ಇತ್ತು.

ಶ್ರೀ ವಿ. ಎನ್. ಪಾಟೀಲ್.— ನಾನು ಬೆಂಗಳೂರಿಗೆ ಬಂದು ಒಂದು ಹೋಟೆಲಿಗೆ ಹೋದಾಗ ಅಲ್ಲಿ ಅವರು ಮಾಮೂಲು ದೋಸೆಬೇಕೋ ಶ್ರೀ ರಾಮುಲು ದೋಸೆ ಬೇಕೋ ಎಂದು ಕೇಳಿದರು. ಇದು ನಿಮಗೆ ಶಿಕ್ಷೆಯಾಗಿದೆ,

ಶ್ರೀ ಕೆ. ಶ್ರೀರಾಮುಲು.— ನನಗೆ ಶಿಕ್ಷೆಯಾಗಿಲ್ಲ, ಜನರ ತೀರ್ಮಾನ ಇದೆ ನಾನೂ ಕೂಡ ಅಷ್ಟಕ್ಕೇ ಮುಕ್ತಾಯ ಮಾಡಿದ್ದೇನೆ ಎಂದು ಯಾರಿಗೂ ಭಾವಿಸಬೇಡಿ. ಈಗಾಗಲೇ ಹೋಟಿಲುಗಳನ್ನು ವರ್ಗೀಕರಣ ಮಾಡಿದ್ದೇವೆ. 'ಎ, ಕ್ಲಾಸ್ ಮಾಡುವುದಕ್ಕೆ ಸಕಾರಣಗಳು ಏನಿತ್ತು ಎಂದು ಸಂಬಂಧಪಟ್ಟ ಇಲಾಖೆಯವರಿಗೆ ಇದರ ಬಗ್ಗೆ ಕೇಳಲಾಗಿದೆ· ಅವರು ವರದಿ ಕೊಟ್ಟಮೇಲೆ ಪರಿಶೀಲನೆ ಮಾಡತಕ್ಕಂಥ ಪರಿಸ್ಥಿತಿಯಲ್ಲಿದ್ದೇನೆ.

ಶ್ರೀ ಕೊಣಂದೂರು ಲಿಂಗಪ್ಪ.—ನೀವು ಪರಿಶೀಲನೆಮಾಡಿ ಅಂತಿಮ ನಿರ್ಧಾರ ತೆಗೆದುಕೊಳ್ಳುವುದಕ್ಕೆ ಜವಾಬ್ದಾರಿ ಇದೆಯೇ.

ಶ್ರೀ ಕೆ. ಪ್ರಭಾಕರ ರೆಡ್ಡಿ.— ಮೊದಲು ಬಡವರಿಗೆ ಅನುಕೂಲವಾಗಲಿ ಎಂದು ಹೋಟೆಲ್ ತಿಂಡಿಗಳ ಬೆಲೆಯನ್ನು ಇಳಿಸಿದರು ಜನರು ಸಂತೋಷವಾಗಿದ್ದರು ನಂತರ ಎ. ಬಿ. ಸಿ. ಡಿ. ದರ್ಜೆ ಎಂದು ವರ್ಗೀಕರಣ ಮಾಡಿದ್ದಾರೆ. ವರ್ಗೀಕರಣ ಮಾಡುವುದಕ್ಕೆ ಉದ್ದೇಶ ಏನಿತ್ತು ಎನ್ನುವುದು ಅವರಿಗೆ ಗೊತ್ತಿದೆ.

ಶ್ರೀ ಕೊಣಂದೂರು ಲಿಂಗಪ್ಪ.— ಅದು ತೆರೆಮರೆ.

ಶ್ರೀ ಸಿ. ಬೈರೇಗೌಡ.— ಅದು ಕಾಣದ ಕೈಗಳ ವ್ಯವಹಾರ.

ಶ್ರೀ ಕೆ. ಪ್ರಭಾಕರ ರೆಡ್ಡಿ.— ಇವತ್ತು ಸುಮಾರು 5 ಲಕ್ಷ ವಾರ್ಷಿಕ ವರಮಾನ ಇರತಕ್ಕಂಥ ಹೋಟೆಲ್‌ಗಳು 'ಎ' ದರ್ಜೆಯಾಗಿವೆ. ಅವರಿಗೆ ತಿಂಡಿಗಳ ಬೆಲೆ ನಿಗದಿ ಇಲ್ಲ ಎಷ್ಟು ಬೇಕಾದರೂ ಮಾಡಬಹುದು. ಒಂದು ದೋಸೆಗೆ 1 ರೂಪಾಯಿ, 2 ರೂಪಾಯಿ ಬೇಕಾದರೂ ಮಾಡಬಹುದು. ಅವರು ಬಡ ಹೋಟೆಲ್ ಮಾಲೀಕರಲ್ಲ, ಶ್ರೀಮಂತರು. 25 ಅಂಶಗಳ ಕಾರ್ಯಕ್ರಮದಲ್ಲಿ ಇದು ಒಂದು ಕಾರ್ಯಕ್ರಮ ಶ್ರೀಮಂತರಿಗೆ,

ಶ್ರೀ ಕೆ. ಶ್ರೀರಾಮುಲು.— ಇದರ ಮೇಲೆ ವಿಶೇಷವಾಗಿ ಭಾಷಣ ಮಾಡುವುದಕ್ಕೆ ನನ್ನ ಅಭ್ಯಂತರವಿಲ್ಲ. ಹಚ್ಚಿಗೆ ಮಾತನಾಡಿ. ನಿಮ್ಮ ಜನತಾ ಪಕ್ಷದಲ್ಲಿರತಕ್ಕ ಸದಸ್ಯರೇ ಬರವಣಿಗೆ ಮುಖಾಂತರ ಇಡ್ಲಿಗೆ ಇಷ್ಟು, ಕಾಫಿಗೆ ಇಷ್ಟು ರೇಟು ನಿಗದಿ ಮಾಡಬೇಕು ಎಂದು ಕೊಟ್ಟಿದ್ದಾರೆ ಮಾನ್ಯ ಶಾಸಕರಾದ ಶ್ರೀ ಟಿ. ಆರ್. ಶಾಮಣ್ಣನವರು ಬರವಣಿಗೆ ಮೂಲಕ ಕೊಟ್ಟಿರುವುದು ನನ್ನ ಹತ್ತಿರ ಇದೆ. ನಾನು ಹೇಳುವುದಕ್ಕೆ ಶುರು ಮಾಡಿದರೆ ನಿಮಗೆ ವಿರೋಧವಾಗತಕ್ಕಂಥ ಪ್ರಸಂಗ ಆಗಬಹುದು. ನಾನು ಇಷ್ಟು ಮಾತ್ರ ಹೇಳುತ್ತೇನೆ, ಬಡವರಿಗೆ ತಿನ್ನುವುದಕ್ಕೆ ಅವಕಾಶವಾಗ ಬೇಕು ಎನ್ನುವ ದೃಷ್ಟಿಯಿಂದಲೇ ಧವಸಗಳ ಬೆಲೆ ಜಾಸ್ತಿಯಾದರೂ ಎಣ್ಣೆ ಬೆಲೆ 10 ರೂಪಾಯಿ ಮಾರಾಟ ಇದ್ದರೂ. ಕಾಳುಗಳ ಬೆಲೆ 4 ರೂಪಾಯಿ ಇದ್ದರೂ, ಅಕ್ಕಿ ಬೆಲೆ ಜಾಸ್ತಿ ಇದ್ದರೂ ನನ್ನ ರೇಟಿನಲ್ಲೇ ಮಾರುವುದಕ್ಕೆ ಸಾಧ್ಯವಿದೆಯೆಂದು ಖಚಿತವಾದ ಅಭಿಪ್ರಾಯ ಬಂದ ಮೇಲೆ ನಾನು ತೀರ್ಮಾನ ಕೊಟ್ಟಿರುವುದು. ಇದು ತಾತ್ಕಾಲಿಕವಾಗಿ ಬದಲಾವಣೆ ಮಾಡಿರತಕ್ಕಂಥದ್ದು. ಇದು ಪುನರ್ಪರಿಶೀಲನೆಯ ಘಟ್ಟದಲ್ಲಿದೆ. ವರದಿ ಬಂದ ತಕ್ಷಣ ಇದನ್ನು ಪುನರ್ಪರಿಶೀಲನೆ ಮಾಡುತ್ತೇನೆ.

ಶ್ರೀ ಕೊಣಂದೂರು ಲಿಂಗಪ್ಪ.— ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುವುದಕ್ಕೆ ನಿಮಗೆ ಅಧಿಕಾರ ಇದೇತಾನೆ ?

ಶ್ರೀ ಕೆ. ಶ್ರೀರಾಮುಲು — ನಾನು ಕಾರ್ಮಿಕ ಖಾತೆ ತೆಗೆದುಕೊಂಡರೂ ಇದು ನನ್ನ ಹತ್ತಿರ ಇದೆ.

ಶ್ರೀ ಕೆ. ಪ್ರಭಾಕರ ರೆಡ್ಡಿ.— ಕೆಂಪೇಗೌಡ ಸರ್ಕಲ್‌ನಲ್ಲಿ ಎಲ್ಲಾ 'ಎ' ದರ್ಜೆ ಹೋಟೆಲ್‌ಗಳಿವೆ ಅಲ್ಲಿ ಬೆಲೆ ನಿಗದಿ ಇಲ್ಲ. ಬಡವ ಆ ಹೋಟೆಲ್‌ಗಳಿಗೆ ಹೋಗುವುದಕ್ಕೆ ಭಯ ಪಡುತ್ತಾನೆ. ಇದು 20 ಅಂಶದ ಕಾರ್ಯಕ್ರಮ. ಇದನ್ನು ನೋಡಿದಾಗ ಜನಗಳಿಗೆ ಒಂದು ರೀತಿಯ ಶಂಕೆ ಬಂದಿದೆ ಯಾವ ದೃಷ್ಟಿಯನ್ನಿಟ್ಟುಕೊಂಡು ಇವರು ಹೋಟೆಲುಗಳನ್ನು ವರ್ಗೀಕರಣ ಮಾಡಿದರು. ಬಡವರನ್ನು ದೃಷ್ಟಿಯಲ್ಲಿಟ್ಟುಕೊಂಡು ಮಾಡಿದ್ದಾರೋ, ಇಲ್ಲ ಕೆಲವು ಹೋಟೆಲ್ ಮಾಲೀಕರ ಒತ್ತಾಯಕ್ಕೆ ಬೇರೆ ರೂಪದಿಂದ ಮಣಿದು ವರ್ಗೀಕರಣ ಮಾಡಿದ್ದಾರೋ ಎಂಬ ಶಂಕೆ ಇವತ್ತು ಜನತೆಗೆ ಬಂದಿದೆ. ಇವತ್ತು ಬಡವರನ್ನು ಉದ್ಧಾರ ಮಾಡುತ್ತೇವೆ, ಬಡವರಿಗೆ ಸುಲಭ ಬೆಲೆಯಲ್ಲಿ ತಿಂಡಿಗಳನ್ನು ನೀಡುತ್ತೇವೆ ಎಂದು ಹೇಳುವವರು ಹೋಟೆಲ್ ಮಾಲೀಕರಿಗೆ ಅನುಕೂಲವಾಗುವ ಸ್ಥಿತಿಯಲ್ಲಿ ಮಾಡುತ್ತಾ ಇರುವುದನ್ನು ನೋಡಿದರೆ ಇವರ ಕಾರ್ಯಕ್ರಮ ಏನು ಎನ್ನುವುದನ್ನು ಅರ್ಥ ವಾಗುತ್ತದೆ.

ಇವರ ಇನ್ನೊಂದು ಘೋಷಣೆ ಏನೆಂದರೆ, ಸ್ಲಂ ಕ್ಲಿಯರೆನ್ಸ್ ಬೋರ್ಡ್ ಮಾಡಿದ್ದೇವೆ, ಹಿಂದುಳಿದ ಜನಾಂಗಗಳಿಗೆ ಬಡವರಿಗೆ ಗುಡಿಸಲುಗಳನ್ನು, ಮನೆಗಳನ್ನು ಕಟ್ಟಿಸಿಕೊಡುತ್ತೇವೆ, ನಿವೇಶನಗಳನ್ನು ಕೊಡುತ್ತೇವೆ. ಅವರಿಗೆ ಖಾಯಂ ಮಾಡುತ್ತೇವೆ ಎಂದು ಹೇಳಿದರು. ಒಂದು ಉದಾಹರಣೆಯನ್ನು ಕೊಡುತ್ತೇನೆ. ಏನೆಂದರೆ, ಬೆಂಗಳೂರು ನಗರದಲ್ಲಿ ಇರತಕ್ಕ ಜಕ್ಕರಾಯನ ಕೆರೆಯಲ್ಲಿ ಸುಮಾರು 150–200 ಗುಡಿಸಲುಗಳಿತ್ತು. ಆ ಗುಡಿಸಲುಗಳನ್ನು ತೆಗೆದು ಆ ಜಾಗ ವನ್ನು ಒಬ್ಬ ಶ್ರೀಮಂತ ಮಾಲೀಕ, ಅಂದರೆ ಕೃಷ್ಣ ಫ್ಲೋರ್‌ಮಿಲ್‌ನ ಮಾಲೀಕ ಪಾಂಡುರಂಗಶೆಟ್ಟಿ ಎಂಬುವರಿಗೆ ಲೀಸ್‌ಗೆ ಕೊಟ್ಟಿದ್ದಾರೆ. ಬಡವರ ಗುಡಿಸಲುಗಳನ್ನು ಕಿತ್ತು ಒಂದೂವರೆ, ಎರಡು ವರ್ಷವಾಯಿತು.

ಶ್ರೀ ಕೆ. ಶ್ರೀರಾಮುಲು.— ತಮ್ಮ ಹೇಳಿಕೆಯನ್ನು ಸಭೆಯ ಮುಂದೆ ಇಡುವಾಗ ಪೂರ್ಣ ಸತ್ಯಾಂಶ ಇರತಕ್ಕ ವಿಷಯವನ್ನು ಹೇಳುವುದು ಒಳ್ಳೆಯದು ಅಲ್ಲಿ 13 ಎಕರೆ ಜಾಗ ಇತ್ತು. 1500 ಜನರು ಗುಡಿಸಲುಗಳನ್ನು ಹಾಕಿದ್ದರು. ಅವರಿಗೆ ಬೇರೆ ಕಡೆ ಸ್ಥಳ ಮಾಡಿಕೊಟ್ಟ ಮೇಲೆ 1960ರಲ್ಲಿಯೇ ಆ ಜಾಗದಲ್ಲಿ ಸ್ಟೇಡಿಯಂ ಮಾಡಬೇಕೆಂದು ತೀರ್ಮಾನವಾಗಿತ್ತು. ಅದರಲ್ಲಿ ಅಕ್ವೈರ್ ಮಾಡಿದ್ದು ಸ್ವಲ್ಪ. ಸುಮಾರು 200 ಅಡಿ ಮಾತ್ರ ಲೀಸ್ ಕೊಟ್ಟಿದೆ. ಕಾರ್ಪೊರೇಷನ್ನಿನಲ್ಲಿ ಕಾರ್ಪೊರೇಷನ್ ಸದಸ್ಯರುಗಳಿದ್ದಾಗಲೇ ತೀರ್ಮಾನ ಮಾಡಿ ಕೊಟ್ಟಿದ್ದು.

4-00 P. M.

ಶ್ರೀ ಕೆ. ಪ್ರಭಾಕರ ರೆಡ್ಡಿ.— ಅದರ ಆಡಳಿತ ಸರ್ಕಾರಕ್ಕೆ ಬಂದ ಮೇಲೆ ಲೋಕಲ್ ಬಾಡಿಗೆ ಅಷ್ಟಾಗಿ ಮಾನ್ಯತೆ..................

ಶ್ರೀ ಕೆ. ಶ್ರೀರಾಮುಲು.— ಬಡವರ ಗುಡಿಸಲುಗಳನ್ನು ಕೀಳಿಸಿ ಯಾರಿಗೂ ಕೊಟ್ಟಿಲ್ಲ. ಹೇಳುವಾಗ ಸತ್ಯಾಂಶ ಹೇಳಿ ಬೇಡ ಎಂದು ಹೇಳುವುದಿಲ್ಲ. ಯಾರಾದರೂ ತಪ್ಪು ಮಾಡಿದ್ದರೆ. ಅದರ ಬಗ್ಗೆ ಹೇಳತಕ್ಕ ಜವಾಬ್ದಾರಿ ನಿಮಗೆ ಇದ್ದರೆ ಹೇಳಿ ಗುಡಿಸಲುಗಳನ್ನು ಕಿತ್ತುಹಾಕಲು ಮೊದಲು ಯೋಚನೆ ಇತ್ತು ಆದರೂ ಅದನ್ನು ಕೀಳಿಸಿ ಯಾರಿಗೂ ಕೊಟ್ಟಿಲ್ಲ.

ಶ್ರೀ ಕೆ. ಪ್ರಭಾಕರ ರೆಡ್ಡಿ.— ಸುಮಾರು 6-7 ಮೈಲಿಗಳ ದೂರದಿಂದ ಅವರ ಜೀವನಕ್ಕಾಗಿ ಇಲ್ಲಿಗೆ ಕೆಲಸ ಮಾಡಲು ಬರಬೇಕಾದರೆ ಅವರಿಗೆ ಸಿಗುವ ಕೂಲಿ ಕೇವಲ 5-6 ರೂಪಾಯಿಗಳು ಮಾತ್ರ. ಅದು ಅವರು ಅಲ್ಲಿಂದ ಬರುವ ಕೂಲಿಗೆ ಸಾಕಾಗುವುದಿಲ್ಲ.

ಶ್ರೀ ಕೆ ಶ್ರೀರಾಮುಲು.— ನಿಮಗೆ ಎಷ್ಟು ವಿಷಯಗಳು ಗೊತ್ತಿದೆಯೋ ಅದಕ್ಕಿಂತಲೂ ಹೆಚ್ಚಿನ ವಿಷಯ ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಹಾಗೆ ನನಗೆ ಗೊತ್ತಿದೆ. ಆ ಗುಡಿಸಲುಗಳಿಗೆ ಹಿಂದೆ ಒಂದೊಂದು ರೂಪಾಯಿನಂತೆ ಮನೆ ಮಾಲೀಕರ ಹಾಗೆ ವಸೂಲಿ ಮಾಡುತ್ತಿದ್ದವರು ಈಗ ಅಲ್ಲಿ ಕೆಲವು ಪುಡಾರಿಗಳು ಸೇರಿಕೊಂಡು ಒಂದು ಗುಡಿಸಲಿಗೆ 1 ರೂಪಾಯಿನಿಂದ 10 ರೂಪಾಯಿಗಳವರೆಗೆ ವಸೂಲಿ ಮಾಡುತ್ತಿದ್ದಾರೆ.

ಶ್ರೀ ಕೆ. ಎಚ್. ಹನುಮೇಗೌಡ.— ಅದನ್ನು ಹೇಳುವುದಿಲ್ಲ. ಅಂತಹವರ ಮೇಲೆ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಕೆ. ಶ್ರೀರಾಮುಲು.— ಪುಡಾರಿಗಳು ಅಂದರೆ ಇಂತಹ ಪಕ್ಷದವರೇ ಎಂದಲ್ಲ. ಅಲ್ಲಿ ಎಲ್ಲ ಪಕ್ಷದವರೂ ಇದ್ದಾರೆ.

ಶ್ರೀ ಕೆ. ಪ್ರಭಾಕರ ರೆಡ್ಡಿ.— ತಪ್ಪು ಯಾರ್ಯಾರು ಮಾಡಿದ್ದಾರೋ ಅಂತಹವರ ಬಗ್ಗೆ ಕ್ರಮ ತೆಗೆದುಕೊಳ್ಳುವುದರಲ್ಲಿ ನಮ್ಮ ಅಭ್ಯಂತರವಿಲ್ಲ. ಇವತ್ತು ನನ್ನ ಕ್ಷೇತ್ರದಲ್ಲಿರತಕ್ಕ ಹೊಸಹಳ್ಳಿ ಬಡಾವಣೆಯಲ್ಲಿ ಸುಮಾರು 95 ಗುಡಿಸಲುಗಳಿವೆ ಸುಮಾರು 10-15 ವರ್ಷಗಳಿಂದಲೂ ಅವನ್ನು ಸ್ಲಂ ಕ್ಲಿಯರೆನ್ಸ್ ಬೋರ್ಡಿಗೆ ಸೇರಿಸಿಲ್ಲ. ಅಲ್ಲಿಗೆ ಸ್ಲಂ ಕ್ಲಿಯರೆನ್ಸ್ ಬೋರ್ಡಿನವರು ಬರುತ್ತಾರೆ ಹೋಗುತ್ತಾರೆ ಇವತ್ತು ಅವರ ಸ್ಥಿತಿ ಚಿಂತಾಜನಕವಾಗಿದೆ. ಸ್ಲಂ ಕ್ಲಿಯರೆನ್ಸ್ ಬೋರ್ಡಿನ ಅಧಿಕಾರಿಗಳು ಅಲ್ಲಿಗೆ ಬಂದು ಸುಮ್ಮನೆ ನೋಡಿಕೊಂಡು ಹೋಗುತ್ತಿದ್ದಾರೆಯೇ ವಿನಃ ಇವತ್ತಿನ ವರೆಗೆ ಆ ಕೆಲಸವನ್ನು ಮಾಡಿಲ್ಲ.

ನಮ್ಮ ಸರ್ಕಾರ ಕನ್ನಡ ಅಭಿವೃದ್ಧಿಯ ಬಗ್ಗೆ ಒಂದು ಪ್ರತ್ಯೇಕ ಖಾತೆಯನ್ನು ಮಾಡಿದೆ. ಅದನ್ನು ಪ್ರತ್ಯೇಕವಾಗಿ ಒಬ್ಬ ಸಚಿವರಿಗೆ ವಹಿಸಿಕೊಟ್ಟಿದ್ದೀರಿ ಆ ಖಾತೆಯ ಸಚಿವರು ಇದುವರೆಗೂ ಕನ್ನಡದ ಅಭಿವೃದ್ಧಿ ಬಗ್ಗೆ ಯಾವ ರೀತಿಯ ಒಂದು ಕಾರ್ಯಕ್ರಮವನ್ನೂ ಕೈಗೊಂಡಿಲ್ಲ. ಇವತ್ತು ಮೂರು ವಿಶ್ವವಿದ್ಯಾನಿಲಯಗಳಲ್ಲಿಯೂ ಕನ್ನಡವನ್ನು ಮಾಧ್ಯಮವನ್ನಾಗಿ ತೆಗೆದುಕೊಂಡಂಥ ಸುಮಾರು 500 ಜನ ವಿದ್ಯಾರ್ಥಿಗಳು ಬರುತ್ತಿದ್ದಾರೆ. ಇವತ್ತು ವಿಶ್ವವಿದ್ಯಾನಿಲಯದಲ್ಲಿ ಕನ್ನಡವನ್ನು ಮಾಧ್ಯಮವನ್ನಾಗಿ ತೆಗೆದುಕೊಂಡಿರತಕ್ಕಂಥ ವಿದ್ಯಾರ್ಥಿಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡುತ್ತಿಲ್ಲ. ಅವರಿಗೆ ಸಾಕಷ್ಟು ಹುದ್ದೆಗಳನ್ನು ನೀಡುತ್ತಾ ಇಲ್ಲ ಇವತ್ತು ಕನ್ನಡ ಮಧ್ಯಮ ಮಾಡಿರುವ ವಿದ್ಯಾರ್ಥಿಗಳಿಗೆ ಕನ್ನಡ ಅಭಿವೃದ್ಧಿ ಸಚಿವರು ಏನು ಮಾಡಿದ್ದಾರೆ ? ಅವರಿಗೆ ಉದ್ಯೋಗ, ವಗೈರೆ ನೀಡಬೇಕು. ಈ ರೀತಿಯ ಪ್ರೋತ್ಸಾಹದಿಂದ ಮುಂದೆ ಇನ್ನು ಹೆಚ್ಚು ಹೆಚ್ಚಾಗಿ ವಿದ್ಯಾರ್ಥಿಗಳು ಕನ್ನಡವನ್ನು ಮಾಧ್ಯಮವನ್ನಾಗಿ ತೆಗೆದುಕೊಳ್ಳುವುದಕ್ಕೆ ತಕ್ಕ ಅವಕಾಶ ಮಾಡಿಕೊಡಬೇಕೆಂದು ನಾನು ಹೇಳುತ್ತೇನೆ.

ಇವತ್ತು ತುರ್ತು ಪರಿಸ್ಥಿತಿಯಲ್ಲಿ ಕೆಲವು ಒಳ್ಳೆಯದಾಗಿದೆಯೆಂದು ಹೇಳುತ್ತೀರಿ. ಇವತ್ತು ಅಷ್ಟೇ ಕೆಲವು ಕಡೆಗಳಲ್ಲಿ ಜನರು ಇನ್ನು ಭಯ ಭೀತಿಯಲ್ಲಿದ್ದಾರೆ. ಇವತ್ತು ನನ್ನ ಒಂದು ಕ್ಷೇತ್ರದಲ್ಲಿ ಬಿನ್ನಿಮಿಲ್ ಕಾರ್ಖಾನೆಯಲ್ಲಿ ನಾನು ನೋಡಿದ್ದೇನೆ. ಅಲ್ಲಿನ ಕಾರ್ಮಿಕರು ಬೋನಸ್ಸಿ

ಗಾಗಿ ನ್ಯಾಯ ರೀತಿಯಿಂದ ಕೇಳಿದಾಗ, ತುರ್ತು ಪರಿಸ್ಥಿತಿಯ ಅವಕಾಶವನ್ನು ಉಪಯೋಗ ಮಾಡಿಕೊಂಡು ಪೋಲೀಸಿನವರು ಲಾಠಿಯಿಂದ ಕಾರ್ಮಿಕರನ್ನು ಹೊಡೆದು ಲಾಕಪ್ಪಿಗೆ ಹಾಕಿದ್ದಾರು. ಈ ವಿಚಾರ ಸರ್ಕಾರದ ಗಮನಕ್ಕೆ ಬಂದಿದ್ದರೂ ಕೂಡ ಕಾರ್ಮಿಕರ ಬಗ್ಗೆ ಕರುಣೆ ಅನುಕಂಪ ತೋರಿಸಲಿಲ್ಲ ಸರ್ಕಾರದವರು ಕೇವಲ ಕಾರ್ಖಾನೆಯ ಮಾಲೀಕರ ಬಗ್ಗೆ ಕರುಣೆ ತೋರಿಸಿದ್ದಾರೆ ಇವತ್ತು ತುರ್ತು ಪರಿಸ್ಥಿತಿಯಲ್ಲಿ ಕಾರ್ಮಿಕರಿಗೆ ಒಂದು ಭಯವನ್ನು ಹುಟ್ಟಿಸಿ ನೀವೇನಾದರೂ ಯಾವ ರೀತಿಯಲ್ಲಾಗಲೀ ಬೋನಸ್ಸನ್ನು ಕೇಳಿದರೆ ನಿಮ್ಮನ್ನು ಸೆರೆಮನೆಯಲ್ಲಿ ಹಾಕುತ್ತೇವೆಂದು ಹೆದರಿಸಿದ್ದಾರೆ. ಈ ರೀತಿ ಅಲ್ಲಿ ಅಧಿಕಾರವನ್ನು ದುರುಪಯೋಗ ಮಾಡುತ್ತಿದ್ದಾರೆ. ಇದನ್ನು ಕೂಡಲೇ ತಪ್ಪಿಸಬೇಕು

ಕೊನೆಯದಾಗಿ, ನನಗೆ ಇಷ್ಟು ಹೊತ್ತು ಮಾತನಾಡಲು ಅವಕಾಶವನ್ನು ಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† SMT. ADDY SALDHANA (Mangalore).— Madam Speaker, I fully support the motion of thanks on the Governor's Address proposed by Sri B. Basavalingappa. Speakers before me have spoken at length on all the subjects, food, medical services, family planning policies, education etc, etc. I would like to highilght some of the grievances people have put before me.

Urban Celling.— This is not done where there are agricultural properties and middle-class people and who are taking paddy crops as well as sugarcane crps have not been exempted. Agricultural lands notified under the Master Plan should be exempted.

Slum Clearance.— Very old schemes in Mangalore budgeted in 1958-59 should be expedited.

Drainage.— Weaker sections, those who are the owners and dwellers should be given loan at simple interest and they should also be subsidised to carry ovt these works.

Hudco.— Housing board buildings are incomplete since a long time at Shaleti Nagar, Mangalore, Some of the houses that are built are vacant while people are having hardship due to dearth of houses. This should be looked into

Harijan Colonies.— Drinking water wells will be dried up in April and may and there will be no water in the wells. Therefore, alternative arrangements should be made to provide drinking water by extending the water supply system upto Kavoor near M. C. F. colony. In the town, even people living in higher levels do not get water. Proper arrangements should be made to provide drinking water to these people.

Medical Services.— The hospitals are not kept clean to the satisfaction of the patients. Supply of medicine is inadequate in most of the hospitals. Equipment grants should be provided to these hospitals on priority for open heart surgery. Filaria and Malaria should be brought under control.

Land Reforms.— The staff provided is inadequate and sufficient number of surveyors have also not been posted in our area. I request the Government to set up additional Land Tribunals so that the pending cases are settled as early as possible. Arrangement should also be made for payment of compensation to the widows, minors and physically handicapped people immediately.

Tree-Cutting,— I see people being harassed for cutting a tree from their own compounds when it is dried up or is in danger of falling on the roof. People should be allowed to cut trees from their own grardens for firewood or for preparing planks to build houses.

There are people who are having small lands and there are no roads for them to take their paddy to the mills I request the Government to provide good roads and also licences should be given to put up hullers for these people for getting their paddy milled.

I want to touch upon the Kudremukh project. In this project, the local people have no opportunity to get jobs. But people from other places have been brought and appointed. This is not good when our people are available with suitable qualifications. Our people are unemployed. This discrimination should go Further I want to bring to the notice of the Government that more and more job opportunities could be created by starting more and more small industries at the village level so that the people from the villages could have amlpe chances for jobs.

Some people have occupied revenue lanes and they are cultivating them since a very long time They are all landless people. If the Government confirm their right of cultivation, they would be vary happy. Therefore, please confirm the lands occupied by them.

The minimum needs programme is the centrally sponsored scheme I am sorry to say this scheme is not being utilised by our State. I Suggest that this scheme should be utilisid by our Government to best advantage of our people. With these words I conclude my speech and thank the Chair

ಶ್ರೀ ಪಿ. ಸಿ. ಸೆಟ್ಟರ್ (ಹಾನಗಲ್ಲ).—ಮಾನ್ಯ ಅಧ್ಯಕ್ಷರೇ ಮಾನ್ಯ ಬಸವಲಿಂಗಪ್ಪನವರು ತಂದಂತಹ ವಂದನಾ ನಿರ್ಣಯವನ್ನು ವಿರೋಧಮಾಡುತ್ತಾ ಕೆಲವು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ರಾಜ್ಯಪಾಲರು ಮಾಡಿದ ಭಾಷಣವನ್ನು ನೋಡಿದರೆ ನನಗನಿಸುತ್ತದೆ. ಇದು ವ್ಯಾಪಾರಸ್ಥರು ಸುಳ್ಳು ಲೆಕ್ಕ ಬರೆದ ಅಂಕಿಗಳನ್ನು ತುಂಬಿ ಇನ್‌ಕಂ ಟ್ಯಾಕ್ಸ್ ರಿಟರ್ನ್ ಕಳುಹಿಸಿದಂತೆ ಇದೆಯೆಂದು ಹೇಳಿದರೆ ತಪ್ಪಾಗಲಾರದು. ಅದಕ್ಕೂ ಹೆಚ್ಚಿನ ಮಹತ್ವ ನನಗೇನು ಕಾಣಿಸುತ್ತಾ ಇಲ್ಲ. ಏತಕ್ಕೆಂದರೆ ಇವತ್ತು ಅವರ ಸಂಪೂರ್ಣ ಭಾಷಣವನ್ನು ಓದಿದಾಗ ಸೆಕ್ರೆಟ್ರಿಯೇಟ್ ನಲ್ಲಿರತಕ್ಕಂಥ ಅಂಕಿಗಳನ್ನೆಲ್ಲಾ ಶೇಖರಿಸಿಟ್ಟಿದ್ದ ವರದಿಯನ್ನು ಇಲ್ಲಿ ತಿಳಿಸಿದ್ದಾರೆ ಮತ್ತೆ ಇನ್ನು ಯಾವ ಕೆಲಸವನ್ನು ಮಾಡಲಿಲ್ಲವೆಂದು ಹೇಳಬಹುದು. ಮಾನ್ಯ ರಾಜ್ಯಪಾಲರು ಅವರ ಭಾಷಣವನ್ನು ಇಲ್ಲಿ ಓದುವ ಪೂರ್ವದಲ್ಲಿ ಕೂಲಂಕುಷವಾಗಿ ಇದನ್ನು ಓದಿ ನೋಡಿದ್ದರೆ ಚೆನ್ನಾಗಿತ್ತು, ಆಗ ಇದನ್ನು ವಿರೋಧಿಸುವ ಸಮಸ್ಯೆ ಬರುತ್ತಿರಲಿಲ್ಲವೆಂದು ಕಾಣುತ್ತದೆ. ಮಾನ್ಯ ರಾಜ್ಯಪಾಲರು ಈ

ಮೊದಲು ಒಳ್ಳೆಯ ದಕ್ಷಮಂತ್ರಿಗಳಾಗಿ ಅದರಲ್ಲೂ ಪ್ರಾಮುಖ್ಯವಾದ ಪೋರ್ಟ್‌ಫೋಲಿಯೋ ಪಡೆದಂತಹವರು. ಅದರಲ್ಲೂ ಲೋಕ ಸಭೆಯ ಚುನಾವಣೆ ಆದನಂತರ ಅವರು ತಮ್ಮ ಭಾಷಣವನ್ನು ಈ ಪ್ರಕಾರ ಕೊಟ್ಟಿದ್ದನ್ನು ನೋಡಿದರೆ ಅವರು ಕೇವಲ ಸರ್ಕಾರದ ಬಗ್ಗೆ ಏನು ಹೇಳಿದ್ದಾರೆ ಅದಕ್ಕೆ ಇವರು ಅಸ್ತು ಅಂದಿದ್ದಾರೆ ಎನ್ನುವುದು ಗೊತ್ತಾಗುತ್ತದೆ. ಇದರಲ್ಲಿ ಅವರ ನೀತಿ ಧೋರಣೆಯನ್ನು ಸರಿಯಾದ ಅಂಕಿಸಂಖ್ಯೆಗಳನ್ನು ಕೊಟ್ಟಿದ್ದರೆ ಚೆನ್ನಾಗಿತ್ತು. ಈಗ ಹೋದವರ್ಷ ಆದಂತಹ ಕೆಲಸದ ಪಟ್ಟಿಯನ್ನು ಕೊಟ್ಟಿದ್ದಾರೆ ಇದನ್ನು ವಿಮರ್ಶೆಮಾಡಬೇಕಾದರೆ ಚರ್ಚೆ ಮಾಡಬೇಕಾದರೆ ಹೋದವರ್ಷ ಏನು ಕೆಲಸಕಾರ್ಯಗಳನ್ನು ಹಾಕಿಕೊಂಡಿದ್ದರು ಎಷ್ಟು ಕೆಲಸವಾಗಿದೆ ಎನ್ನುವುದನ್ನು ಅಂಕಿಸಂಖ್ಯೆಗಳನ್ನು ಕೊಟ್ಟಿದ್ದರೆ ಈ ಸಭೆಯ ಮಾನ್ಯ ಸದಸ್ಯರು ವಿಮರ್ಶೆ ಮಾಡಬಹುದಾಗಿತ್ತು. ಅದನ್ನು ಮಾಡದೆ ಮಾನ್ಯ ರಾಜ್ಯಪಾಲರು ಘಟನಾತ್ಮಕವಾಗಿ ರಾಜ್ಯದ ಮುಖರು ಅನಿಸಿಕೊಂಡವರು ಈ ಸಭೆಗೆ ಸರಿಯಾದ ವರದಿಯನ್ನು ಇಡದೆ ಇರುವುದನ್ನು ನೋಡಿದರೆ ನನಗೆ ಬಹಳ ವಿಷಾದವೆನಿಸುತ್ತದೆ. ಕೆಲವೊಂದು ವಿಷಯಗಳನ್ನು ಚರ್ಚೆ ಮಾಡುವ ಪೂರ್ವದಲ್ಲಿ ಈ ಭಾಷಣವು ಲೋಕಸಭೆಯ ಚುನಾವಣೆ ಆದನಂತರ ಬರುತ್ತಾ ಇದ್ದು ಹಾಗು ಇದರಲ್ಲಿ ಚುನಾವಣೆಯ ಪ್ರಸ್ತಾಪಮಾಡಿದ್ದಾರೆ ಕಾರಣ ಆ ಬಗ್ಗೆ ಮಾತಾಡ ಬಯಸುತ್ತೇನೆ. ಈ ಹಿನ್ನಲೆಯಲ್ಲಿ ಎಲ್ಲಾ ವಿಷಯಗಳ ಮೇಲೆ ಮಾತನಾಡುವುದಕ್ಕೂ ಮನಸ್ಸಿಲ್ಲ. ಲೋಕಸಭೆಯ ಚುನಾವಣೆಯಲ್ಲಿ ನಡೆದಂತ ಎಲ್ಲ ಸಂಗತಿಗಳನ್ನು ಹಾಗು ಕಾರ್ಯಕ್ರಮವನ್ನು ಪರಿಶೀಲನೆಮಾಡಿದರೆ ಈ ಮನೆಯ ಎರಡು ಕಡೆಯ ಜನರು ಯೋಚನೆ ಮಾಡಬೇಕಾಗಿದೆ. ಜನತಾ ಪಕ್ಷವೇ ಇರಬಹುದು, ಕಾಂಗ್ರೆಸ್ ಪಕ್ಷವೇ ಇರಬಹುದು ಅದು ಮುಖ್ಯವಲ್ಲ. ನಮ್ಮ ಅತ್ಮಶೋಧನೆ ಮಾಡುವ ಕಾಲ ಬಂದಿದೆ. ಉತ್ತರದಲ್ಲಿ ಕಾಂಗ್ರೆಸ್, ದಕ್ಷಿಣದಲ್ಲಿ ಜನತಾ ಪಕ್ಷಕ್ಕೆ ಸೋಲು ಬಂತು. ಇಲ್ಲಿ ಸಾಮಾನ್ಯ ಜನ ಏನೂ ಮಾಡಿದರೂ ಅದೆ ನಿರ್ಣಯವಾಯಿತು. ಈ ಮಾತಿನಿಂದ ದೇಶದಲ್ಲಿ ನಡೆದಂತಹ ಲೋಕಸಭೆಯ ಚುನಾವಣೆಯಲ್ಲಿ ಇವತ್ತು ಜನತೆ ಬಹಳ ಬುದ್ಧಿವಂತಿಕೆಯಿಂದ ಬಹುಶ: ಜಗತ್ತಿನಲ್ಲಿ ಈ ದೇಶ ಯಾವರೀತಿ ಮುಂದೆ ಹೋಗಬೇಕು ಎನ್ನುವುದನ್ನು ಸಾರಿ ಹೇಳಿದ್ದಾರೆ. ಇದು ಪಕ್ಷದ ವಿಷಯವಲ್ಲ. ಶ್ರೀಮಾನ್ ದೇವರಾಜ್ ಅರಸ್ ಇರಲಿ ಅಥವಾ ಶ್ರೀಮಾನ್ ವೀರೇಂದ್ರಪಾಟೀಲ್ ಇರಲಿ ಅದು ಮುಖ್ಯವಲ್ಲ. ಶ್ರೀಮತಿ ಇಂದಿರಾಗಾಂಧಿಯವರು ದೇಶದಲ್ಲಿ ಪ್ರಧಾನಿಗಳಾಗಿದ್ದವರು ಇವರಿಗೆ ಮೊದಲು ಏನು ನಮ್ಮ ದೇಶದ ಪ್ರಧಾನಿಗಳು ಇದ್ದರು ಅಂತಹ ಅವರೆಲ್ಲಾ ದೇಶದ ಒಬ್ಬ ಸಾಮಾನ್ಯ ಪ್ರಜೆಗಳಾಗಿದ್ದವರು. ಒಬ್ಬ ಪ್ರಮುಖ ವ್ಯಕ್ತಿ ಇತ್ತೀಚೆಗೆ ಸಮಾನ್ಯ (ಪ್ರೈಮರಿ) ಚುನಾವಣೆಯಲ್ಲಿ ಸೋತಿರುವುದು ನೋಡಿದರೆ ಇದು ಬ್ಲೆಸಿಂಗ್ ಇನ್ ಡಿಸ್‌ಗೈಸ್ ಎಂದು ಕೇಳದೆ ವಿಧಿಯಿಲ್ಲ ಆಡಳಿತ ಸೂತ್ರವನ್ನು ಹಿಡಿದಿರತಕ್ಕ ಜನ ಜನತೆಯನ್ನು ಸರಿಯಾಗಿ ನೋಡಿಕೊಳ್ಳದೆ ಇದ್ದರೆ ಅವರನ್ನು ಅಧಿಕಾರದಿಂದ ತೆಗೆದು ಹಾಗು ವಂತಹ ಹಕ್ಕು ಜನರಿಗೆ ಇದೆಯೆಂದು ಈ ದೇಶದ ಜನರು ಚುನಾವಣೆ ಮೂಲಕ ವ್ಯಕ್ತಪಡಿಸಿದ್ದಾರೆ ದಕ್ಷಿಣದಲ್ಲಿ ಕಾಂಗ್ರೆಸ್ ಗೆಲ್ಲಬೇಕಾಗಿದ್ದರೆ ಇಲ್ಲಿ ಅಪಪ್ರಚಾರ ಇರಲಿ ಇಲ್ಲದೆ ಇರಲಿ ಸಾಮಾನ್ಯ ಜನತೆಗೆ ದೇಶದಲ್ಲಿ ಏನು ನಡೆಯುತ್ತಿದೆ ಎನ್ನುವುದು ಸರಿಯಾಗಿ ಗೊತ್ತಾಗಿಲ್ಲ, ಇವತ್ತು ಕಾಂಗ್ರೆಸ್‌ಗೆ ವಿರುದ್ಧವಾಗಿ ಪ್ರಚಾರ ಮಾಡಿದರೆ ಒಳಗೆ ಹೋಗುತ್ತಾರೆ ಎನ್ನುವ ಭೀತಿ ಬರುತ್ತಾ ಇತ್ತು ಎರಡನೆಯದು ಜನಸಾಮಾನ್ಯರಲ್ಲಿ ಏನು ಭೀತಿ ಇದೆ ಆದು ಪ್ರಚಾರ ಇರಲಿ ಅಪಪ್ರಚಾರ ಇರಲಿ ಸಾಮಾನ್ಯ ಜನತೆಯ ಕಾರ್ಯಕ್ರಮಗಳನ್ನು ಜನತಾ ಪಕ್ಷ ರದ್ದುಪಡಿಸುತ್ತಿದೆ ಎಂಬ ಭೀತಿ. ಆ ಆಧಾರಗಳ ಮೇಲೆ ಜನತೆ ನಿರ್ಣಯ ಕೊಟ್ಟಿದ್ದಾರೆ.

[MADAM SPEAKER in the Chair]

ನಾವು ಎಷ್ಟೇ ಸ್ವಚ್ಛವಿದ್ದರೂ ಕೂಡ ಒಮ್ಮೆ ಕೆಟ್ಟರು ಎಂದರೆ ಹಿಂದಿನ ಸ್ವಚ್ಛತೆಯನ್ನು ಆಧಾರವಾಗಿಟ್ಟುಕೊಂಡು ಮಾತನಾಡುವುದಕ್ಕೆ ಆಗುವುದಿಲ್ಲ. ಆದುದರಿಂದ ನಾನು ಹೇಳುತ್ತಿದ್ದುದು ಏನೆಂದರೆ ಇವತ್ತು ನಿರಂಕುಶ ಆಡಳಿತವನ್ನು ಒಬ್ಬ ವ್ಯಕ್ತಿ ಒಂದು ಮನೆತನದವರೇ ಹೊಂದಬೇಕು ಎನ್ನುವ ರೀತಿಯಲ್ಲಿ ವ್ಯವಸ್ಥೆ ಮಾಡುವ ದುರುದ್ದೇಶವನ್ನಿಟ್ಟುಕೊಂಡು ರಾಜ್ಯದ ಕಾರ್ಯಭಾರವನ್ನು ನಡೆಸುವುದಕ್ಕೆ ಹೊರಟರು. ಅದಕ್ಕೆ ಇದು ಉತ್ತರ ಎನ್ನುವುದನ್ನು ಅವರು ಕೆಳಮಟ್ಟಿಗಾದರೂ ಒಪ್ಪಬೇಕಾದದ್ದು. ಆದುದರಿಂದ ನಾನು ಹೇಳುವುದಿಷ್ಟೇ, ಇವತ್ತು ಸರ್ವಾಧಿಕಾರದ ವಿರುದ್ಧ ಏನು ಒಂದು ನಿರ್ಣಯ ಬಂದಿದೆ ಅದನ್ನು ಪ್ರತಿಯೊಬ್ಬರೂ ಅರಿತುಕೊಳ್ಳಬೇಕು.

ಮಾನ್ಯ ಶ್ರೀ ಮುರಾರ್ಜಿ ದೇಸಾಯಿಯವರಿಗೂ ಅನ್ವಯಿಸುತ್ತಿದೆ ಕಾಂಗ್ರೆಸ್ಸಿನವರಿಗೂ ಅನ್ವಯಿಸುತ್ತದೆ. ಆದುದರಿಂದ ತಾವು ಕೂಡ ಇದರ ಬಗ್ಗೆ ಮನಸ್ಸು ಬಿಚ್ಚಿ ನೋಡಿಕೊಳ್ಳಬೇಕು. ಇನ್ನು ಕೆಲವು ನಮ್ಮ ಮಾನ್ಯ ಸ್ನೇಹಿತರು ಹೇಳುತ್ತಿದ್ದುದೇನೆಂದರೆ ಈ ಒಂದು ಸಂವಿಧಾನದ 42 ನೇ ತಿದ್ದುಪಡಿಯನ್ನು ಸಂಪೂರ್ಣವಾಗಿ ರದ್ದು ಮಾಡುತ್ತಾರೆ ಎನ್ನುವ ಮಾತು ಕೇಳಿ ಬರುತ್ತಿದೆ. ಅದು ಸುಳ್ಳು. ಜನತಾ ಪಕ್ಷದವರು ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಈ 42 ನೇ ಸಂವಿಧಾನದ ಬಗ್ಗೆ ಹೇಳಿದ್ದಾರೆ. ಅದು ಈ ರೀತಿ ಇದೆ "Right to property is going to be substituted by the right to work ಸಮಾವೇಶವಾಗಲ್ಪಟ್ಟಿದೆ. ಮಾನ್ಯ ಜಯಪ್ರಕಾಶ್ ನಾರಾಯಣ್ ರವರ ಮುಖಂಡತ್ವದಲ್ಲಿ ಈ ಒಂದು ಜನತಾ ಪಕ್ಷ ಸೃಷ್ಟಿಯಾಗಿದೆ. ಅವರ ಮುಖಂಡತ್ವದಲ್ಲಿ ಅವರು ಇರುವಾಗಲೇ ಜನತಾ ಪಕ್ಷದ ವ್ಯಾನುಫೆಸ್ಟೋದ ಪ್ರಕಾರ ಕಾರ್ಯಗತ ಮಾಡಿ ಹೆಚ್ಚಿನ ಒಂದು ಹೊಗಳಿಕೆಗೆ ಪಾತ್ರರಾಗಬೇಕೆಂದು ಈ ಸಭೆಯ ಮುಖೇನ ನಮ್ಮ ಪ್ರಧಾನ ಮಂತ್ರಿಯವರನ್ನು ಕೇಳಿಕೊಳ್ಳುತ್ತೇನೆ.

SRI D. B. KALMANKAR.—What is the stand of the Hon'ble Member regarding 42nd Amendment.

ಅಧ್ಯಕ್ಷರು.—ಈಗ ಸಂವಿಧಾನದ ಮೇಲೆ ಚರ್ಚೆ ನಡೆಯುತ್ತಿದೆಯೇ? ಮಾನ್ಯ ಸದಸ್ಯರು ದಯಮಾಡಿ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಬೇಕು.

ಶ್ರೀ ಪಿ. ಸಿ. ಶೆಟ್ಟರ್.—ಮಾನ್ಯ ಅಧ್ಯಕ್ಷಣೀಯವರೇ ಇನ್ನು 10 ನಿಮಿಷದಲ್ಲಿ ನನ್ನ ಮಾತನ್ನು ಮುಗಿಸುತ್ತೇನೆ. ಮಾನ್ಯ ಕಲ್ಮನಕರ್ ರವರು ಈ ವಿಷಯದಲ್ಲಿ "ಆತಂಕ" ವ್ಯಕ್ತಪಡಿಸುವ ಅವಶ್ಯಕತೆಯಿಲ್ಲ. ನನ್ನ ಉದ್ದೇಶವೇನೆಂದರೆ, ಡೈರೆಕ್ಟಿವ್ ಪ್ರಿನ್ಸಿಪಲ್ಸ ಪ್ರಕಾರ ಕಾರ್ಯಾಚರಣೆ ಮಾಡತಕ್ಕಂಥ ಕಾಲದಲ್ಲಿ ಏನೇನು ಅಡಚಣೆ ಇದೆ ಅದನ್ನು ತೆಗೆದು ಹಾಕಿ 42 ನೇ ತಿದ್ದುಪಡಿಯಲ್ಲಿರತಕ್ಕಂಥ ಒಳ್ಳೆಯ ಅಂಶಗಳನ್ನು ಇಟ್ಟು ನಿರಂಕುಶ ಅಧಿಕಾರಕ್ಕೆ ಅನುಕೂಲವಾಗತಕ್ಕಂಥ ಯಾವುದಾದರೂ ಪದಗಳಿದ್ದರೆ ಅದನ್ನು ತೆಗೆಯಬೇಕೆಂದು ನಾನು ಕೇಳಿಕೊಳ್ಳುತ್ತೇನೆಯೇ ಹೊರತು ಮತ್ತೆ ಯಾವುದನ್ನೂ ಅಲ್ಲ. ನಾನು ಕಾಂಗ್ರೆಸ್ ಪಕ್ಷದಲ್ಲಿದ್ದಾಗಲೂ ಕೂಡ ಸಮಾಜವಾದೀ ಮನುಷ್ಯನಾಗಿದ್ದವನು, ಈಗಲೂ ಕೂಡ ಸಮಾಜವಾದವೇ ನನ್ನ ಗುರಿ. ಆದುದರಿಂದ ನಾನು ಇವತ್ತು ಈ ಸಭೆಯ ಮುಖೇನ ನಮ್ಮ ಜನತಾ ಪಕ್ಷದ ಸ್ನೇಹಿತರನ್ನು ಬೇಡಿಕೊಳ್ಳುತ್ತಿರುವುದೆನೆಂದರೆ, ಚುನಾವಣೆ ನಡೆಯುವವರೆಗೆ ನಡೆದಂಥದನ್ನೆಲ್ಲಾ ಜನ ನೋಡಿ ಒಂದು ನಿರ್ಣಯ ಕೊಟ್ಟಿದ್ದಾರೆ ಅದರ ಪ್ರಕಾರ ನೀವು ನಡೆದುಕೊಳ್ಳಿ, ಚುನಾವಣೆಗಿಂತ ಹಿಂದೆ ಇದ್ದಂಥ ಪರಿಸ್ಥಿತಿಯ ರೀತಿಯಲ್ಲಿ ನೀವೂ ವರ್ತಿಸಬೇಡಿ ಎಂದು ನಾನು ನಮ್ಮ ಸ್ನೇಹಿತರಿಗೆ ಎಚ್ಚರಿಕೆಯನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಜನಾತಾ ಪಕ್ಷವು ತನ್ನ ಪ್ರಮಾಣಿಕ ನಿಲುವುಗಳನ್ನು ವ್ಯಕ್ತ ಪಡಿಸುವದಾದರೆ ಕಾರ್ಯ ಮಾಡಬೇಕಾದರೆ 42 ನೇ ತಿದ್ದುಪಡಿಯನ್ನು ಕೆಲವೊಂದು ಕಲಂಗಳನ್ನು ತೆಗೆದು ಹಾಕುವ ತಿದ್ದುಪಡಿಯೊಂದಿಗೆ ಆರ್ಟಿಕಲ್ 19 ಹಾಗು 31 ಕ್ಕೆ ತಿದ್ದುಪಡಿತಂದು "Right to work" ಇದನ್ನು ಹಾಕಿ, Right to property" ಇದನ್ನು ತೆಗೆದು ಹಾಕುವ ಕ್ರಮ ತೆಗೆದುಕೊಳ್ಳಬೇಕು. ಅವೆರಡೂ ಏಕಕಾಲಕ್ಕೆ ನಡೆಯಬೇಕು.

ಮಾನ್ಯ ಅಧ್ಯಕ್ಷಣೀಯವರೇ, ರಾಜ್ಯಪಾಲರ ಭಾಷಣವನ್ನು ಓದಿದಾಗ ಕೇವಲ ಸರ್ಕಾರದ ಪರವಾಗಿ ಅಂಕಿಅಂಶಗಳನ್ನು ಮಾತ್ರ ವ್ಯಕ್ತಪಡಿಸಿದ್ದಾರೆಯೇ ಹೊರತು ಇಲ್ಲಿಯವರೆಗೆ ಸರ್ಕಾರ ಎಷ್ಟು ಕೆಲಸ ಕಾರ್ಯಗಳನ್ನು ಮಾಡಿದೆ, ಅದರಲ್ಲಿ ಎಷ್ಟು ಲೋಪ ದೋಷಗಳಾಗಿವೆ ಎನ್ನುವ ಬಗ್ಗೆ ಕೊಟ್ಟಿರತಕ್ಕಂಥ ರಿಪೋರ್ಟ್‌ಗಳ ಬಗ್ಗೆ ಯಾವುದೇ ಒಂದು ವಿಧವಾದಂಥ ವಿಚಾರವನ್ನು ಪ್ರಮಾಣಿಕವಾಗಿ ಕೊಟ್ಟಿಲ್ಲ. ಇದರ ಬಗ್ಗೆ ಸರ್ಕಾರ ಯಾವ ರೀತಿಯಲ್ಲಿ ಪ್ರಯತ್ನ ಮಾಡುತ್ತದೆ ಎನ್ನುವ ವಿಷಯವನ್ನು ಅವರು ಪ್ರಸ್ತಾಪ ಮಾಡಿಯೇ ಇಲ್ಲವೆಂದು ಬಹಳ ವಿಷಾದದಿಂದ ಹೇಳುತ್ತೇನೆ. ಈ ದೇಶದಲ್ಲಿ ಈಗಾಗಲೆಹೇಳಿದ ಜನತಾ ಪಕ್ಷದ ಮುಖಂಡರಾದ ಶ್ರೀ ಚಂದ್ರಶೇಖರ್ ಹಾಗು ಮೋಹನ್ ಧಾರಿಯಾರವರು ಹೇಳಿದಹಾಗೆ There is no alternative except Socialism, ಯಾರು ಮಾಜಿ ಬಂದರೂ ಕೂಡ ವಾದದ ತಳಹದಿಯ ಮೇಲೆ ಕಾರ್ಯಕ್ರಮಗಳನ್ನು ಮುಂದುವರಿಸದೇ ಹೋದರೆ ಬಹುಶಃ ನತೆಯ ಒಂದು ವಿರೋಧವನ್ನು ಕಟ್ಟಿಕೊಳ್ಳುವುದಕ್ಕೆ ಪ್ರಯತ್ನ ಮಾಡಿದಂತೆ

ಎಂದು ಹೇಳಬೇಕಾಗಿದೆ. ಆದುದರಿಂದ ಇವತ್ತು ರಾಜ್ಯಪಾಲರ ಭಾಷಣದಲ್ಲಿ. ಸ್ವಚ್ಛ ಸರ್ಕಾರವಾಗಿ ಪ್ರಾಮಾಣಿಕವಾದ ಸರ್ಕಾರದ ರೀತಿಯಲ್ಲಿ, ಈಗಾಗಲೇ ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ಪಬ್ಲಿಕ್ ಅಂಡರ್ ಟೇಕಿಂಗ್ ಕಮಿಟಿಯವರು ಏನು ವರದಿಯನ್ನು ಕೊಟ್ಟಿದ್ದಾರೆ, ಅವರ ಪ್ರಕಾರ ಏನು ಕ್ರಮ ತೆಗೆದುಕೊಳ್ಳುತ್ತಾರೆ ಎನ್ನುವ ಬಗ್ಗೆ ಯಾವ ಒಂದು ಆದೇಶವನ್ನೂ ಕೂಡ ಕೊಟ್ಟಿಲ್ಲ. ಬಹುಶಃ ಇದರಿಂದ ಅವರು ತಮ್ಮ ಕರ್ತವ್ಯವನ್ನು ಚ್ಯುತಿ ಮಾಡಿದಂತಾಗಿಯಿದೆಂದು ಹೇಳುತ್ತೇನೆ. ಇವತ್ತು ಇದರಲ್ಲಿ ಎಷ್ಟೊಂದ ಲೋಪ ದೋಷಗಳಿವೆ ಎಂದರೆ ಮೊನ್ನೆ ಕೆ. ಎಚ್. ಶ್ರೀ ರಂಗನಾಥ್‌ರವರು ಒಂದು ವಿಷಯದ ಬಗ್ಗೆ ಮಾತನಾಡುತ್ತಾ ಹೇಳಿದರು. ಮಾರ್ಕೆಟಿಂಗ್ ಫೆಡರೇಷನ್ನಿನವರು ಎಷ್ಟೇ ಅವ್ಯವಹಾರಗಳನ್ನು ಮಾಡಿದ್ದರೂ ಕೂಡ ಅಲ್ಲಿಯ ಕೆಲಸಕಾರ್ಯಗಳು ನಡೆಯಲು ಹಣ ಕೊಡಬೇಕಾದಂಥ ಜವಾಬ್ದಾರಿ ಇದೆ ಎಂದು ಹೇಳಿದರು. ಕೆಲವೊಂದು ಸಂಘಸಂಸ್ಥೆಗಳಲ್ಲಿ ಇಷ್ಟೊಂದು ಅವ್ಯವಹಾರವಾಗಿದೆ, ದುರ್ವ್ಯವಹಾರವಾಗಿದೆ ಎಂದು ಹೇಳಿದಾಗ್ಯೂ ಕೂಡ ಒಂದು ಸಬ್ ಕಮಿಟಿ ರಿಪೋರ್ಟ್‌ನಲ್ಲಿ ಇದರ ಬಗ್ಗೆ ಅವರು ವರದಿಯನ್ನು ಕೊಟ್ಟಿದ್ದರೂ ಕೂಡ ಅದರ ಮೇಲೆ ತಾವು ಯಾವ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೀರಿ ಎನ್ನುವುದನ್ನು ಹೇಳದೆ ಅವರಿಗೆ ಪುನಃ ನೀವು ಆರ್ಥಿಕ ಸಹಾಯ ಮಾಡುತ್ತೇವೆಂದು ಹೇಳಿದರೆ, ಇದು ಯಾವ ಪ್ರಾಮಾಣಿಕತೆ? ನಿಮ್ಮಲ್ಲಿ ಇಂಥ ಸೊಸೈಟಿಗಳ ಮೇಲೆ ಸೂಕ್ತ ಕಾರ್ಯಕ್ರಮ ಕೈಗೊಳ್ಳುವ ಬಗ್ಗೆ ಉತ್ಸುಕತೆ ಇದೆಯೋ ಇಲ್ಲವೇ ಎಂದು ಪ್ರಶ್ನೆ ಕೇಳಬೇಕಾಗಿದೆ.

ಇನ್ನು ಶ್ರೀ ಹಾವನೂರ್ ರವರು ವರದಿಯನ್ನು ಕೊಟ್ಟಿದ್ದಾರೆ ಬಹಳ ಸಂತೋಷ. ಅದರಲ್ಲಿ ಶೇಕಡ 40 ರಷ್ಟು ರಿಜರ್ವೇಷನ್‌ನ್ನು ಮೈನಾರಿಟೀಸ್‌ಗೆ ಮತ್ತು ಬ್ಯಾಕ್‌ವರ್ಡ್‌ನವರಿಗೆ ಇಡಬೇಕೆಂದು ಹೇಳಿದ್ದಾರೆ. ಇವತ್ತು ಅಧಿಕಾರಿಗಳು ಇದನ್ನು ತಲೆಯಲ್ಲಿಟ್ಟುಕೊಂಡು ಕೆಲಸ ಮಾಡಬೇಕಾದರೆ ಬಹಳ ಕಷ್ಟವಾಗುತ್ತದೆ. ಇವತ್ತು ಯಾರಿಗೆ ರಿಜರ್ವೇಷನ್ ಕೊಡಬೇಕು ಎನ್ನುವ ವಿಚಾರದಲ್ಲಿ ಒಂದು ಮಾತನ್ನು ನಾನು ಹೇಳುವುದಾದರೆ, ಯಾವ ಒಬ್ಬ ಮನುಷ್ಯನ ನಿರ್ದಿಷ್ಟ ಉತ್ಪನ್ನಕ್ಕಿಂತ ಕಡಿಮೆ ಇರುತ್ತದೆ. ಅವನ ತಂದೆ ತಾಯಿಗಳ ಉತ್ಪನ್ನ ಎರಡೂ ಸೇರಿ 5 ಸಾವಿರಕ್ಕಿಂತ ಕಡಿಮೆ ಇರುತ್ತದೆ ಅಂಥ ಮನುಷ್ಯನಿಗೇ ಇವತ್ತು ತಾವು ಅವಕಾಶವನ್ನು ಮಾಡಿಕೊಡಬೇಕೇಹೊರತು ಬರೀ ಜಾತಿಯ ಆಧಾರದ ಮೇಲೆ ರಿಜರ್ವೇಷನ್ ಮಾಡುವುದು ಸರಿಯಲ್ಲ. ಇವತ್ತು ಜಾತಿಯ ಹೆಸರಿನಲ್ಲಿ ಶ್ರೀಮಂತರಿಗೇ ಅನುಕೂಲವಾಗುತ್ತಿದೆಯೇ ಹೊರತು ಬಡವರಿಗೆ ಆ ಸೌಲಭ್ಯ ಲಭ್ಯವಾಗುತ್ತಿಲ್ಲ 2ನೇ ಕ್ಲಾಸ್ ಯಾರಿಗೆ ಎಂದರೆ ಉತ್ಪನ್ನವೂ ಇಲ್ಲದೇ ಅವನ ಪಾಲಕರು ಒಬ್ಬರಾದರೂ ಪದವೀಧರರು ಇಲ್ಲದೇ ಇದ್ದವರಿಗೆ ಮಾಡಬಹುದಾಗಿದೆ. ಹೈಯರ್ ಕ್ಲಾಸ್ ಹೆಚ್ಚಿಗೆ ಉತ್ಪನ್ನ ಇದ್ದು ಅವನ ಪಾಲಕರ ಪೈಕಿ ಒಬ್ಬರಾದರೂ ಪದವೀಧರರು ಇದ್ದವರಿಗೆ ಮಾಡಬಹುದಾಗಿದೆ. ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಇವತ್ತು ಇಲ್ಲಿಯ ತನಕ ರಿಸರ್ವೇಷನ್ ವ್ಯವಸ್ಥೆಯನ್ನು ನೋಡಿದ್ದೇವೆ. ಈ ಸಭೆಯ ಮುಖಾಂತರ ಒಂದು ಮಾತನ್ನು ಹೇಳುತ್ತೇನೆ, ಸಮಾಜವಾದಿ ಮಂತ್ರಿಗಳು ಇಬ್ಬರು ಕೂತಿದ್ದಾರೆ. ಹರಿಜನ ಪಂಗಡದ ಒಬ್ಬ ಅಸಿಸ್ಟೆಂಟ್ ಕಮೀಷನರ್‌ರವರು ಭೂಸ ಧಾರಣೆ ಪಾಲನೆ ಬಗ್ಗೆ ಹರಿಜನರಿಗೆ ಅನುಕೂಲ ಮಾಡದೇ ಭೂ ಮಾಲೀಕನಿಂದ ಹಣ ಪಡೆದು ಅದಲುಬದಲು ಮಾಡಬೇಕಾದರೆ, ಇನ್ನು ಅವರಿಗೆ ಹೆಚ್ಚಿನ ರಕ್ಷಣೆ ಎಲ್ಲಿ ಇದೆ? ಇದು ಸಮಾಜವಾದದ ಕಾರ್ಯಾಚರಣೆಯೇ ಎಂದು ಕೇಳುತ್ತೇನೆ.

4-30 P. M.

SRI K. H. RANGANATH.—How is that relevant. Whether he is a Harijan, Lingayet or Brahmin, he is a Government servant. If the Hon'ble Member were to write and if no action is taken, he can still insist. But he had not written about it Let him not make insinuations. I want to know how many of your community people are honest

ಶ್ರೀ ಕೋಣಂದೂರು ಲಿಂಗಪ್ಪ.—ಆರ್ಥಿಕ ಬುನಾದಿಯ ಮೇಲೆ ನಿರ್ಧರಿಸಬೇಕು ಎಂದು ಹೇಳುತ್ತೇನೆ.

ಶ್ರೀ ಕೆ. ಹೆಚ್ ರಂಗನಾಥ್.—ಸಮಾಜವಾದಿ ಸಿದ್ಧಾಂತವೂ ಆರ್ಥಿಕ ನೀತಿಯ ಮೇಲೆ ತೀರ್ಮಾನ ಮಾಡಬೇಕೆಂದು ಹೇಳುತ್ತದೆ. ಅಗಸ ಇರಬಹುದು, ಕ್ಷೌರಿಕ ಇರಬಹುದು, ಕುಂಬಾರ ಇರಬಹುದು, ಇವರು ಸಾಮಾಜಿಕವಾಗಿ ಅನುಕೂಲತೆ ಹೊಂದಿರಬಹುದು ಸಾಮಾಜಿಕವಾಗಿ ಹಿಂದುಳಿದಿರಬಹುದು.

ಶ್ರೀ ಪಿ. ಸಿ. ಸೆಟ್ಟರ್.—40 ಪರ್ಸೆಂಟ್ ಏನು 75 ಪರ್ಸೆಂಟ್ ಕೊಡಿ.

ಶ್ರೀ ಕೆ. ಹೆಚ್. ರಂಗನಾಥ್.- 40 ಕ್ಕೆ ಇಷ್ಟು ವಿರೋಧ ಇನ್ನೂ 75 ಕ್ಕೆ ಎಷ್ಟು ವಿರೋಧ ಮಾಡುತ್ತಿರೋ? To-day for the first time he is in Opposition.

SRI P. C. SHETTAR.—I know my limitations. If he is a non-graduate and if he is within the prescribed income, he is to be treated as backward. ಈ ಎರಡನ್ನೂ ಕೂಡಿಸಬೇಕು. ಹಾಗೆ ಮಾಡಿದಾಗ ಅದರಲ್ಲಿ ಹೆಚ್ಚಿಗೆ ವಿದ್ಯಾವಂತರಾಗಿಲ್ಲ ಅವರಿಗೂ ಅನುಕೂಲವಾಗುತ್ತದೆ ಜಾತೀಯ ಆಧಾರದ ಮೇಲೆ ಇಟ್ಟಾಗ, ಅವರಲ್ಲಿಯೇ ಇರತಕ್ಕ ಶ್ರೀಮಂತರಿಗೆ ಅನುಕೂಲವಾಗುತ್ತದೆ, ಸಾಮಾನ್ಯ ಜನಕ್ಕೆ ಇದು ಮುಟ್ಟುವುದಿಲ್ಲವೆಂಬ ಭೀತಿಯನ್ನು ವ್ಯಕ್ತಪಡಿಸಿದ್ದೇನೆ. ರಿಸರ್ವೇಷನ್ ಇಟ್ಟಿರುವುದು ತಪ್ಪು ಎಂದು ನಾನು ಹೇಳುವುದಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ಸಾಮಾಜಿಕವಾಗಿ ಹಿಂದುಳಿದಿರುವಾಗ; ಸಾಮಾಜಿಕವಾಗಿ ಎಲ್ಲಾ ವಿಶೇಷ ಅವಕಾಶ ಕೊಡುವುದಕ್ಕೆ ಒಪ್ಪುತ್ತೀರಾ ?

ಶ್ರೀ ಪಿ. ಸಿ. ಸೆಟ್ಟರ್.—ರಿಸರ್ವೇಷನ್ ಅಳತೆಗೋಲು ಎಂದರೆ ಏನು? ಅವನು ಹುಟ್ಟುವುದರ ಜೊತೆಗೆ ಅವನ ಆರ್ಥಿಕ ಪರಿಸ್ಥಿತಿಯನ್ನು ವಿಚಾರ ಮಾಡಿದಾಗ ಹೆಚ್ಚಿನ ಪ್ರಾಶಸ್ತ್ಯ ಸಿಗುತ್ತದೆ ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ಎಷ್ಟು ಕಾರ್ಪೊರೇಷನ್‌ಗಳು ಇವೆಯೋ ನನಗಂತೂ ತಿಳಿಯದು ಕಾರ್ಪೊರೇಷನ್‌ಗಳನ್ನು ಮಾಡಿದಂತ ರೀತಿನೀತಿ ನೋಡಿದರೆ ಬಹಳ ಸ್ಪಷ್ಟವಾಗಿ ಗೊತ್ತಾಗುತ್ತದೆ ಕೆಲವೇ ಒಂದು ರಾಜಕೀಯ ಜನರಿಗೆ ಅನುಕೂಲ ಮಾಡುವುದಕ್ಕೋಸ್ಕರ ಮಾಡಿದ್ದಾರೆ. ಜನಸಾಮಾನ್ಯರಿಗೆ ಉಪಯೋಗ ಮಾಡಲಿಕ್ಕೆ ಮಾಡಿಲ್ಲವೆಂದು ಹೇಳಿ, ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎ. ಜಿ. ಕೊಡಗಿ (ಬೈಂದೂರು).—ಮಾನ್ಯ ಅಧ್ಯಕ್ಷರೇ, ಈ ಸದನದಲ್ಲಿ ರಾಜ್ಯಪಾಲರು ಮಾಡಿದಂತ ಭಾಷಣಕ್ಕೆ ಶ್ರೀಮಾನ್ ಬಸವಲಿಂಗಪ್ಪನವರು ತಂದಿರುವ ವಂದನಾನಿರ್ಣಯಕ್ಕೆ ನಾನು ಬೆಂಬಲವನ್ನು ವ್ಯಕ್ತಪಡಿಸುತ್ತಾ, ಒಂದೆರಡು ಮಾತುಗಳನ್ನು ಆಡಲಿಕ್ಕೆ ತಮ್ಮ ಒಪ್ಪಿಗೆಯನ್ನು ಕೇಳುತ್ತಿದ್ದೇನೆ. ಇವತ್ತು ಸರ್ಕಾರ ಕೈಗೊಂಡಂತ ಅನೇಕ ಕಾರ್ಯಕ್ರಮಗಳಿಗೆ ಕರ್ನಾಟಕದಲ್ಲಿ ಜನಸಾಮಾನ್ಯರ ಬೆಂಬಲ ಇದೆ ಎನ್ನುವುದು ಕಳೆದ ಲೋಕಸಭಾ ಚುನಾವಣೆಗಳಲ್ಲಿ ವ್ಯಕ್ತವಾಗಿದೆ. ಶ್ರೀಮತಿ ಇಂದಿರಾಗಾಂಧಿಯವರ 25 ಅಂಶಗಳ ಕಾರ್ಯಕ್ರಮಕ್ಕೆ ಕರ್ನಾಟಕದ ಜನಕೋಟಿ ತಮ್ಮ ಸಂಪೂರ್ಣ ಬೆಂಬಲವನ್ನು ಚುನಾವಣೆ ಮೂಲಕ ವ್ಯಕ್ತಪಡಿಸಿದ್ದಾರೆ. ಉತ್ತರದಲ್ಲಿ ಈ ಕಾರ್ಯಕ್ರಮದ ಅನುಷ್ಠಾನದ ಬಗ್ಗೆ ತೊಂದರೆಗಳಾಗಿರಬಹುದೆಂದು ನಾನು ಭಾವಿಸಿದ್ದೇನೆ ಕರ್ನಾಟಕದಲ್ಲಿ ಮಾತ್ರ ಪ್ರಚಂಡ ವಿಜಯವನ್ನು ಸಾಧಿಸಿದ್ದೇವೆ. ನಮ್ಮ ಕಾರ್ಯಕ್ರಮಕ್ಕೆ ಜನತೆ ಬೆಂಬಲ ಕೊಟ್ಟಿದ್ದಾರೆ ಎನ್ನುವುದನ್ನು ಬಹುಶಃ ಪ್ರತಿಪಕ್ಷದ ಮಿತ್ರರೂ ಒಪ್ಪಿಕೊಳ್ಳುತ್ತಾರೆಂದು ನಾನು ಭಾವಿಸಿದ್ದೇನೆ. ಅಂದಮಾತ್ರಕ್ಕೆ ನಮ್ಮ ಎಲ್ಲಾ ಕಾರ್ಯಕ್ರಮಗಳು ಯಶಸ್ವಿಯಾಗಿವೆ ಎಲ್ಲವನ್ನೂ ಸಾಧಿಸಿದ್ದೇವೆ ಎನ್ನುವಂತ ಒಂದು ಅಹಂಭಾವ ನಮ್ಮ ಪಕ್ಷದಲ್ಲಿ ಮೂಡಲು ಸಾಧ್ಯವಿಲ್ಲ. ಅದು ಮೂಡಲೂ ಬಾರದೆಂದು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ಅನೇಕ ಕಾರ್ಯಕ್ರಮಗಳು ಅನುಷ್ಠಾನದಲ್ಲಿ ಬರುವಾಗ ಅನೇಕ ವಿಧವಾದ ತೊಂದರೆಗಳನ್ನು ಜನಸಾಮಾನ್ಯರು ಕರ್ನಾಟಕದಲ್ಲಿಯೂ ಅನುಭವಿಸಿದ್ದಾರೆ. ಇದನ್ನೆಲ್ಲಾ ನಾವು ಸರಿಯಾದ ರೀತಿಯಲ್ಲಿ ಸುಧಾರಿಸಿ ಜನಸಾಮಾನ್ಯರಿಗೆ ಇನ್ನಷ್ಟು ಹೆಚ್ಚು ಪ್ರಯೋಜನ ದೊರಕುವಂತೆ ಮಾಡಬೇಕಾದುದು ತೀರ ಅವಶ್ಯಕತೆ ಇದೆ.

ಮೊದಲನೆಯದಾಗಿ ನಮ್ಮ ಆಡಳಿತದಲ್ಲಿ ಸುಧಾರಣೆ ಆಗಬೇಕಾಗಿದೆ, ಇವತ್ತು ಶಾಸಕರು ಮಂತ್ರಿಗಳಿಗೆ ಮತ್ತು ಅಧಿಕಾರಿಗಳಿಗೆ ಯಾವುದಾದರೂ ಒಂದು ಕಾರ್ಯಕ್ರಮದ ಬಗ್ಗೆ ಕಾಗದ ಬರೆದರೆ ಅದಕ್ಕೆ ಸರಿಯಾದ ರೀತಿಯಲ್ಲಿ ಉತ್ತರ ಕೂಡ ದೊರೆಯುತ್ತಿಲ್ಲ. ಕಾರ್ಯಕ್ರಮ ಏನಾಗಿದೆ ಯಾವ ಮಟ್ಟದಲ್ಲಿದೆ ಎನ್ನುವ ವಿವರ ಕೂಡ ದೊರೆಯುತ್ತಿಲ್ಲ. ಶಾಸಕರಾದ ನಾವುಗಳು ಕಾಮಗಾರಿ ವಿಚಾರವಲ್ಲಾಗಲೀ ಮತ್ತೊಂದು ವಿಚಾರದಲ್ಲಾಗಲೀ ತಿಳಿಸಿದಾದ ಶೀಘ್ರವೇ ಉತ್ತರ ಕೊಡುವ ವ್ಯವಸ್ಥೆ ಮಾಡಬೇಕು. ಇವತ್ತು ಆಡಳಿತದಲ್ಲಿರುವ ಲೋಪದೋಷಗಳನ್ನು ಎತ್ತಿ ತೋರಿಸುವುದಕ್ಕೆ ಹೊರಟರೆ, ಫೈಲುಗಳು ನಾಪತ್ತೆಯಾಗುವುದನ್ನು ಹೇಳುವುದಕ್ಕೆ ಹೊರಟರೆ ಬಹಳ ಕಾಲ ಬೇಕಾಗುತ್ತದೆ. ಒಟ್ಟಿನಲ್ಲಿ ನಮ್ಮ ಆಡಳಿತ ಯಂತ್ರದಲ್ಲ ಸುಧಾರಣೆ ತೀರಾ ಅವಶ್ಯಕ ಎನ್ನುವುದನ್ನು ತಮ್ಮ ಮುಖಾಂತರ ಮಂತ್ರಿಗಳ ಗಮನಕ್ಕೆ ತರಲಿಕ್ಕೆ ಇಚ್ಛೆಪಡುತ್ತೇನೆ.

ಗೃಹ ನಿವೇಶನಗಳನ್ನು ರಾಜ್ಯದಲ್ಲಿ ಹಂಚಿದ್ದಾರೆ. ತತ್ಪರಿಣಾಮವಾಗಿ ಯಾರಿಗೆ ಇಲ್ಲಿಯ ವರೆವಿಗೂ ಒಂದು ಇಂಚೂ ನಿವೇಶನ ಇಲ್ಲದಂತ ಜನರಿಗೆ ಇಂದು ನಿವೇಶನಗಳನ್ನು ಕೊಡುವುದಕ್ಕೆ ಶಕ್ತರಾಗಿದ್ದೇವೆ. ಆದರೆ ಇಲ್ಲ ಒಂದು ಸೂಕ್ತ ತಿದ್ದುಪಡಿಯ ಅವಶ್ಯಕತೆ ಇದೆ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಅನೇಕ ಕಡೆ ಗ್ರಾಮಾಂತರ ಪ್ರದೇಶಗಳಲ್ಲಿ ಗೃಹ ನಿವೇಶಗಳನ್ನು ಹಂಚುವಾಗ ಒಂದು ಅವಧಿಯನ್ನು ಇಟ್ಟುಕೊಂಡಿದ್ದಾರೆ, ಉದಾಹರಣೆಗೆ ಹೇಳುವುದಾದರೆ 3—4 ಫರ್ಲಾಂಗ್ ವಿಸ್ತೀರ್ಣವುಳ್ಳ ಗೃಹ ನಿವೇಶನಗಳಲ್ಲ ಮಧ್ಯ ಭಾಗದಲ್ಲಿಯೇ ನಿವೇಶಗಳನ್ನು ಒದಗಿಸುವ ಯೋಜನೆಯನ್ನು ರೂಪಿಸಿಕೊಂಡಿದ್ದಾರೆ ಇದರಿಂದ ಸಣ್ಣಪುಟ್ಟ ಕಾರ್ಮಿಕರಿಗೆ, ಜನರಿಗೆ ಅನಾವಶ್ಯಕವಾದ ತೊಂದರೆಗಳನ್ನು ಕೊಟ್ಟ ಹಾಗೆ ಆಗುತ್ತದೆ. ಇದರ ಬದಲಾಗಿ ಬೇರೆ ಬೇರೆ ಪ್ರದೇಶಗಳಲ್ಲಿ ಸ್ಥಳ ಒದಗಿಸುವ ವ್ಯವಸ್ಥೆಯನ್ನು ಮಾಡಿದರೆ ಹೆಚ್ಚಿನ ಅನುಕೂಲವಾಗುತ್ತದೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ ಅದೇ ರೀತಿ ಜನತಾ ಗೃಹನಿರ್ಮಾಣ ಯೋಜನೆಯಲ್ಲಿಯೂ ಅನೇಕ ಜನರಿಗೆ ಮನೆಗಳು ದೊರೆಯುತ್ತಿಲ್ಲ. ಉದಾಹರಣೆಗೆ ಮುಸ್ಲೀಮರಲ್ಲಿ ಅನೇಕ ಕೇರಿಗಳಲ್ಲಿ ಸ್ಥಳ ಇದೆ ಹಾಗೆಯೇ ಮೀನುಗಾರರ ಕೇರಿಗಳಲ್ಲಿ ಸ್ಥಳ ಇದೆ, ಇಂಥವರಿಗೆ ಗೃಹನಿರ್ಮಾಣ ಯೋಜನೆಯಲ್ಲಿ ಜನತಾ ವಸತಿ ಸೌಕರ್ಯವನ್ನು ಒದಗಿಸಿ ಕೊಟ್ಟರೆ ಪ್ರಯೋಜನವಾಗುತ್ತದೆ, ಇದರ ಬಗ್ಗೆಯೂ ಸೂಕ್ತ ತಿದ್ದುಪಡಿ ತರುವುದು ಅವಶ್ಯಕತೆ ಇದೆ.

ಅಧ್ಯಕ್ಷರೇ, ನಮ್ಮ ಚುನಾವಣೆಯ ಸಂದರ್ಭದಲ್ಲಿ ನಾವು ಎದುರಿಸಿದಂತ ಕೆಲವು ಸಮಸ್ಯೆಗಳನ್ನು ಸರ್ಕಾರದ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ವೃಕ್ಷ ಸಂರಕ್ಷಣೆ ಶಾಸನದಿಂದ ಹಳ್ಳಿಗಾಡಿನ ಜನರಿಗೆ ಅನೇಕ ತೊಂದರೆಯಾಗಿದೆ, ಆದ್ದರಿಂದ ಈ ವೃಕ್ಷ ಸಂರಕ್ಷಣೆ ಬಗ್ಗೆ ತಂದಿರತಕ್ಕಂತಹ ಶಾಸನವನ್ನು ಮತ್ತೊಮ್ಮೆ ಪರಿಶೀಲಿಸಬೇಕು ಎಂದು ಈ ಸಂದರ್ಭದಲ್ಲ ಸರ್ಕಾರದ ಗಮನವನ್ನು ಸೆಳೆಯಲಿಕ್ಕೆ ಇಷ್ಟಪಡುತ್ತೇನೆ. ಇವೊತ್ತು ಹಳ್ಳಿಗಾಡಿನ ಜನರು ಅವರ ಸ್ವಂತ ಭೂಮಿಯಲ್ಲಿ ಕಟ್ಟಿಗೆ ಕಡಿಯಲಿಕ್ಕೆ ಈ ನಿಷೇಧ ವಿಧಿದ್ದರ ಪರಿಣಾಮದಿಂದ ತನ್ನ ದೈನಂದಿಕವಾದಂತ ಕೆಲಸ ಮಾಡಿಕೊಂಡ ಹೋಗಲಿಕ್ಕೆ ಅನಾನುಕೂಲವಾಗಿದೆ. ಆದುದರಿಂದ ಇದರ ಬಗ್ಗೆ ತಿದ್ದುಪಡಿ ಮಾಡತಕ್ಕದ್ದು ಅವಶ್ಯಕತೆ ಇದೆ ಎಂದು ಹೇಳುತ್ತೇನೆ. ಇನ್ನು ನಮ್ಮ ಜಿಲ್ಲೆಯ ಅನೇಕ ಭಾಗಗಳಲ್ಲ ಜನರು ಅಲ್ಪ ಸ್ವಲ್ಪ ಭೂಮಿಯನ್ನು ಆಕ್ರಮಿಸಿಕೊಂಡಿದ್ದು, ಅದರಲ್ಲ ಅನೇಕ ವರ್ಷದಿಂದ ಕೆಲಸಮಾಡಿಕೊಂಡು ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಇಂತಹವರುಗಳಿಗೆ 1968ನೇ ಇಸವಿಯ ಒಳಗೆ ಭೂಮಿಯನ್ನು ಆಕ್ರಮಿಸಿಕೊಂಡಿದಂತಹ ಜನರಿಗೆ ಅವರು ಅರ್ಜಿ ಹಾಕಿಕೊಳ್ಳುವ ಅವಕಾಶ ಕೊಟ್ಟಿದ್ದರು, ಅವರು ಅದೇ ರೀತಿ ಅರ್ಜಿ ಹಾಕಿಕೊಂಡಿದ್ದರು ಅವರಿಗೆ ಈವರೆಗೂ ಅವರು ಆಕ್ರಮಿಸಿಕೊಂಡಿದ್ದಂತ ಜಮೀನನ್ನು ಕೊಟ್ಟಿಲ್ಲ. ಅವರು ಸರ್ಕಾರಿ ಜಮೀನಿನಲ್ಲೇ ಮನೆಗಳನ್ನು ಕಟ್ಟಿಕೊಂಡಿದ್ದಾರೆ, ಆದರೆ ಅವರಿಗೆ ಈವರೆಗೂ ಭೂಮಿಯ ಹಕ್ಕನ್ನು ಕೊಟ್ಟಿಲ್ಲ, ಕಳೆದ ಒಂದು ವರ್ಷದಿಂದ ಅನೇಕ ಜನರಿಗೆ ಆ ಸ್ಥಳವನ್ನು ಬಿಡಬೇಕು ಎಂದು ಸರ್ಕಾರದಿಂದ ಹೇಳತಕ್ಕದ್ದು ತಿಳಿದುಬಂದಿದೆ. ಅಂತಹ ಸಣ್ಣ ಜನರು ಇವೊತ್ತು ಎಲ್ಲಿಗೆ ಹೋಗುವುದಕ್ಕಾಗುತ್ತದೆ, ಇವೊತ್ತು ನಾವು ಅವರಿಗೆ ಅವಕಾಶ ಮಾಡಿಕೊಡದೇ ಹೋದರೆ ನಮ್ಮ ಯೋಜನೆ ನಿಷ್ಫಲವಾಗುತ್ತದೆ. ಯಾರು ಭೂಮಿಯನ್ನು ಆಕ್ರಮಿಸಿಕೊಂಡಿದ್ದಾರೆ ಅದಕ್ಕೆ ಯಾವುದಾದರೂ ಒಂದು ಮಿತಿ ಏರಿ, ಅವರು ಆಕ್ರಮಿಸಿಕೊಂಡಿರತಕ್ಕಂತಹ ಭೂಮಿಯಲ್ಲಿ ಬೇಸಾಯ ಮಾಡಲಿಕ್ಕೆ ಅವಕಾಶ ಮಾಡಿಕೊಡಬೇಕು ಎಂದು ಸರ್ಕಾರವನ್ನು

ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಇನ್ನು ಭೂ ಮಸೂದೆ ಬಗ್ಗೆ ಕ್ರಾಂತಿಕಾರಕವಾದ ಹೆಜ್ಜೆಯನ್ನು ಮುಂದೆ ಇಟ್ಟು ಅದನ್ನು ಕೈಗೊಂಡ ತತ್ಪರಿಣಾಮವಾಗಿ ಬಹುಶಃ ನಮ್ಮ ಸರ್ಕಾರಕ್ಕೆ ಜನ ಸಾಮಾನ್ಯರಿಂದ ಪ್ರಚಂಡ ಬೆಂಬಲ ಸಿಕ್ಕಿದೆ. ಇದರ ಬಗ್ಗೆ ಇನ್ನಷ್ಟು ಕಾರ್ಯಕ್ರಮಗಳನ್ನು ಶೀಘ್ರ ವಾಗಿ ಮುಂದುವರಿಸಿಕೊಂಡು ಹೋಗಬೇಕಾಗಿದೆ ಅದಕ್ಕಾಗಿ ಅನೇಕ ಅಡಚಣೆಗಳು ಇದೆ, ಉದಾ ಹರಣೆಗೆ ಹೇಳುವುದಾದರೆ ಟ್ರಿಬ್ಯುನಲ್ಸ್‌ಗಳಲ್ಲಿ ಸಾಕಷ್ಟು ಸಿಬ್ಬಂದಿವರ್ಗ ಇನ್ನು ನೇಮಕಾತಿಯಾಗಿಲ್ಲ. ತತ್ಪರಿಣಾಮವಾಗಿ ಈ ಕಾರ್ಯಕ್ರಮ ವಿಳಂಬವಾಗಿ ನಡೆಯುತ್ತಿದೆ. ಈ ಟ್ರಿಬ್ಯುನಲ್ಸ್‌ಗಳಿಗೆ ವಾಹನ ಸೌಕರ್ಯಗಳನ್ನು ಒದಗಿಸಿಕೊಟ್ಟಿಲ್ಲ, ನಮಗೆ ಗೊತ್ತಿರುವಂತೆ ಟ್ರಿಬ್ಯುನಲ್‌ಗಳು ಹಳ್ಳಿ ಹಳ್ಳಿಗಳಿಗೆ ಸಂಚಾರ ಮಾಡಿ ವಿಚಾರಣೆ ನಡೆಸಿ ತೀರ್ಮಾನ ಕೈಗೊಳ್ಳಬೇಕಾಗಿರುವುದರಿಂದ ಪ್ರತಿ ಯೊಂದು ಟ್ರಿಬ್ಯುನಲ್ಸ್‌ಗಳಿಗೂ ವಾಹನ ಸೌಕರ್ಯ ಕೊಡಬೇಕಾದ್ದು ಅವಶ್ಯಕತೆ ಇದೆ ಆದುದರಿಂದ ಈ ಟ್ರಿಬ್ಯುನಲ್ಸ್‌ಗಳಿಗೆ ಸಾಕಷ್ಟು ಸಿಬ್ಬಂದಿವರ್ಗದ ನೇಮಕಾಗಿ ಮಾಡುವ ಬಗ್ಗೆ ಮತ್ತು ವಾಹನ ಗಳನ್ನು ಒದಗಿಸುವ ಬಗ್ಗೆ ತೀವ್ರ ಗಮನ ಕೊಡಬೇಕೆಂದು ಸರ್ಕಾರದವರನ್ನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಇನ್ನು ಭೂ ಮಸೂದೆಯಿಂದ ತೊಂದರೆಯಾದಂತ ಸಣ್ಣ ಭೂ ಮಾಲೀಕ ವರ್ಗ, ಅಂಗವಿಕಲರು ಸಣ್ಣ ಹಿಡುವಳಿದಾರರು, ಅನೇಕರು ಇದ್ದಾರೆ; ಇಂತಹವರು ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಹಳಷ್ಟು ಜನರು ಇದ್ದಾರೆ, ಇದರ ಬಗ್ಗೆ ಸಂಬಂಧಪಟ್ಟ ಮಂತ್ರಿಗಳವರ, ಹಾಗೂ ಮುಖ್ಯಮಂತ್ರಿಗಳವರ ಗಮನಕ್ಕೆ ತಂದಾಗ, ಅವರಿಗೆ ಏಕ ಗಂಟಿನಿಂದ ಹಣ ಕೊಡಬೇಕು ಎಂದು ಒಪ್ಪಿಕೊಂಡಿದ್ದರು, ಆದರೆ ನಾವು ಇಲ್ಲಿಯವರೆಗೂ ಅವರಿಗೆ ಪರಿಹಾರ ಕೊಟ್ಟಿಲ್ಲ. ಇದರಿಂದ ಸಣ್ಣ ಹಿಡುವಳಿದಾರರಿಗೆ ಅನ್ಯಾಯ ಮಾಡಿದಂತಾಗುತ್ತದೆ ಇಂತಹ ಜನರಿಗೆ ಆಗಿರತಕ್ಕ ತೊಂದರೆಯನ್ನು ಗಮನಿಸಿ ಅದಷ್ಟು ಬೇಗ ಇವರಿಗೆ ಏಕ ಗಂಟಿನಿಂದ ಪರಿಹಾರ ಒದಗಿಸಿಕೊಡುವುದಕ್ಕೆ ಏರ್ಪಾಡು ಮಾಡಬೇಕು ಎಂದು ನಾನು ಈ ಸಂದರ್ಭದಲ್ಲಿ ಸರ್ಕಾರದವರನ್ನು ಕಳಕಳಿಯಿಂದ ಕೇಳಿಕೊಳ್ಳುತೇನೆ.

ಇನ್ನು ರಾಜ್ಯಪಾಲರ ಭಾಷಣದಲ್ಲಿ ಹಳ್ಳಿಗಳಲ್ಲಿ ರಸ್ತೆಗಳ ಕೆಲಸವನ್ನು ಮಾಡಿದ್ದೇವೆ ಎಂದು ಹೇಳಿದ್ದಾರೆ, ನಮ್ಮ ಮಾನ್ಯ ಮಂತ್ರಿಗಳು ಇಲ್ಲೇ ಕುಳಿತಿದ್ದಾರೆ, ಅವರು ಒಮ್ಮೆ ಗ್ರಾಮಾಂತರ ಪ್ರದೇಶಗಳಿಗೆ ಭೇಟಿ ಕೊಟ್ಟು ಅಲ್ಲಿ ನಡೆಸಿರತಕ್ಕಂತಹ ರಸ್ತೆ ಕೆಲಸವನ್ನು ಪರಿಶೀಲಿಸಬೇಕು. ನಮ್ಮ ಯೋಜನೆ ಮುಖಾಂತರ ರಸ್ತೆಗಳ ಕೆಲಸವನ್ನು ಮಾಡಿದ್ದರು, ಅದು ಯಾವ ಜನ ಸಂಚಾರಕ್ಕೂ ಕೂಡ ಯೋಗ್ಯವಾಗಿಲ್ಲ ಎಂದು ಅವನ್ನು ನೋಡಿದರೆ ಅರ್ಥವಾಗುತ್ತದೆ ಇವೊತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲ, ಹಾಗೂ ಹೆಚ್ಚು ಮಳೆ ಬೀಳತಕ್ಕ ಪ್ರದೇಶಗಳಲ್ಲ ಮಣ್ಣಿನ ರಸ್ತೆಗಳನ್ನು ಮಾಡಿದರೆ ಅದರ ಪ್ರಯೋಜನ ದೊರೆಯುವುದಿಲ್ಲ. ಅಂತಹ ರಸ್ತೆಗಳಿಗೆ ಜಲ್ಲಿ ಮತ್ತು ಟಾರ್ ಹಾಕಿಸತಕ್ಕ ಪ್ರಯತ್ನ ಮಾಡಬೇಕು ಇಲ್ಲದೇ ಹೋದರೆ ರಸ್ತೆಗಳು ಉಳಿಯುವುದಿಲ್ಲ, ಈಗ ಮಾಡಿರತಕ್ಕಂತಹ ವೆಚ್ಚ ಏನೂ ಪ್ರಯೋಜನಕ್ಕೆ ಬಾರದೇ ಹೋಗುತ್ತದೆ, ಆದುದರಿಂದ ಇದನ್ನು ಮಾನ್ಯ ಮಂತ್ರಿ ಗಳವರ ಗಮನಕ್ಕೆ ತಂದಿದ್ದೇನೆ, ಇದರ ಬಗ್ಗೆ ಹೆಚ್ಚು ಗಮನವನ್ನು ಸರ್ಕಾರದವರು ಕೊಡಬೇಕು ಎಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಇನ್ನು ವಿದ್ಯುಚ್ಛಕ್ತಿ ಬಗ್ಗೆ ಹೇಳಬೇಕು ಎಂದರೆ, ನಮ್ಮ ವಿದ್ಯುಚ್ಛಕ್ತಿ ಮಂತ್ರಿಗಳು ಇಲ್ಲೇ ಇದ್ದಾರೆ. ನಮ್ಮ ಬೇಸಾಯಗಾರರಿಗೆ ಒದಗಿಸಿದಂತ ಇರಿಗೇಷನ್ ಪಂಪ್‌ಸೆಟ್ಟು ಏನಿದೆ ಇವರ ಬಗ್ಗೆ ಒಂದು ಕೆಪ್ಯಾಸಿಟರ್ ತರಿಸಿಕೊಂಡು ಒಂದು ಆದೇಶ ಕೊಡಬೇಕು. ಈಗಾಗಲೇ ಇರಿಗೇಷನ್ ಪಂಪ್‌ಸೆಟ್ಟುಗಳನ್ನು ಇಟ್ಟುಕೊಂಡಿರತಕ್ಕವರಿಗೆ ಆಗಿರತಕ್ಕ ತೊಂದರೆ ತಮ್ಮ ಗಮನಕ್ಕೆ ಬಂದಿದೆ. ಆದುದರಿಂದ ಇದರ ಬಗ್ಗೆ ಸೂಕ್ತ ಆದೇಶ ಹೊರಡಿಸಿದ್ದೀರಿ ಎಂದು ತಿಳಿದುಕೊಂಡಿದ್ದೇನೆ. ಅದರಲ್ಲಿ ಡಿಮ್ಯಾಂಡ್ ಚಾರ್ಜಸ್ ಎಂದು ಏನು ವಸೂಲು ಮಾಡುತ್ತಿದ್ದಾರೆ ಅದು ಬಹಳ ಅನ್ಯಾಯ ಎಂದು ಹೇಳುತ್ತೇನೆ. ಇವೊತ್ತು ನಮ್ಮ ಕಡೆ 3—4 ಹಾರ್ಸ್ ಪವರ್, ಐ.ಪಿ. ಸೆಟ್ ಇಟ್ಟುಕೊಂಡಿರು ವವರು ಕೇವಲ ಮೂರು ತಿಂಗಳು ಮಾತ್ರ ಅದರ ಉಪಯೋಗ ಪಡೆದಿದ್ದಾರೆ ಎಂದು ನಿವೇದಿಸಿಕೊಳ್ಳ ಬಯಸುತ್ತೇನೆ. ಇದಕ್ಕೆ ಇಡೀ ವರ್ಷಕ್ಕೆ ಮಿನಿಮಮ್ ಚಾರ್ಜಸ್ ಕಟ್ಟಿ, ಎಲ್ಲಾ ರೀತಿಯ ಬಿಲ್ ಕೊಡುವುದರ ಜೊತೆಗೆ ಪ್ರತಿ ತಿಂಗಳು 10 ರೂಪಾಯಿ ಡಿಮ್ಯಾಂಡ್ ಚಾರ್ಜಸ್ ಕೊಡುವುದು ಹೆಚ್ಚಾ ಗುತ್ತದೆ, ಈ ಒಂದು ಅನ್ಯಾಯವನ್ನು ಸರಿಪಡಿಸದೇ ಹೋದರೆ ನಮ್ಮ ಬೇಸಾಯಗಾರರಿಗೆ ಬಹಳ ಅನ್ಯಾಯವಾಗುತ್ತದೆ ಎನ್ನುವುದನ್ನು ಗಮನಿಸಿ 5—6 ಹಾರ್ಸ್ ಪವರ್ ಐ. ಪಿ. ಸೆಟ್ ಯಾರು ಇಟ್ಟುಕೊಂಡಿರುತ್ತಾರೆ, ಅಂತಹವರಿಗೆ ಈ ಡಿಮ್ಯಾಂಡ್ ಚಾರ್ಜಸ್ ತೆಗೆಯಬೇಕು ಎಂದ ಹೇಳುತ್ತೇನೆ.

ಇನ್ನು ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೀನುಗಾರರ ಸ್ಥಿತಿ ಚಿಂತಾಜನಕವಾಗಿದೆ. ಇದನ್ನು ಮನಗಂಡಂತ ಸರ್ಕಾರ 25 ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿ ಧನ ಸಹಾಯದ ನೆರವು ಕೊಡುತ್ತೇವೆ ಎಂದು ಹೇಳಿ ಪ್ರತಿಯೊಂದು ಕುಟುಂಬಕ್ಕೂ 250 ರೂಪಾಯಿಗಳ ಸಾಲ ಒದಗಿಸಿ ಕೊಟ್ಟಿದೆ. ಕೇವಲ 250 ರೂಪಾಯಿಗಳಿಂದ ಒಂದು ಕುಟುಂಬದ ಜೀವನವನ್ನು ಮೂರು ನಾಲ್ಕು ತಿಂಗಳ ಕಾಲ ನಡೆಸಲಿಕ್ಕೆ ಸಾಧ್ಯವಾಗುವುದಿಲ್ಲ ಇನ್ನು ಮುಂದೆ ಬರತಕ್ಕ ಮಳೆಗಾಲದಲ್ಲಿ ಮೀನುಗಾರರಿಗೆ ಮೀನು ಹಿಡಿಯುವುದಕ್ಕೆ ಸಾಧ್ಯವಾಗುವುದಿಲ್ಲ ಅವರು ಜೀವನ ಮಾಡಲಿಕ್ಕೆ ತೊಂದರೆಯಾಗುತ್ತದೆ. ಆದುದರಿಂದ ಮತ್ತೆ ಸರ್ಕಾರದವರು ಪ್ರತಿಯೊಂದು ಕುಟುಂಬಕ್ಕೂ 2?0 ರೂಪಾಯಿಗಳವರೆಗೆ ಅವರಿಗೆ ಸಾಲದ ರೂಪದಲ್ಲಿ ಸಹಾಯ ಮಾಡದೇ ಹೋದರೆ ನಮ್ಮ ಜಿಲ್ಲೆಯ ಮೀನುಗಾರ ಕುಟುಂಬದವರು ಬಹಳ ತೊಂದರೆಗೀಡಾಗಿ ಹಸಿವಿನ ಕಂಗಾಲಿಗೆ ಜನರು ತುತ್ತಾಗುತ್ತಾರೆ ಎಂದು ಹೇಳುತ್ತೇವೆ.

ಇನ್ನು ದೊಡ್ಡ ದೊಡ್ಡ ಯೋಜನೆಗಳನ್ನು ಕಾರ್ಯಗತ ಮಾಡಲಿಕ್ಕೆ ಈಗ ಪ್ರಯತ್ನ ಮಾಡಿದ್ದೇವೆ ಆದರೆ ಈಗ ವರಾಹಿ ಯೋಜನೆಗೆ ಮೂರೂವರೆ ಕೋಟಿ ರೂಪಾಯಿ ಖರ್ಚು ಮಾಡುವುದಾಗಿ ಈ ಸಭೆಯಲ್ಲಿ ಘೋಷಣೆ ಮಾಡಿದ್ದು ಕೇಳಿದ್ದೇವೆ. ಈ ಒಂದು ಹೈಡ್ರೋ ಎಲೆಕ್ಟ್ರಿಕ್ ಪ್ರಾಜೆಕ್ಟ್ 100 ಕೋಟಿ ರೂಪಾಯಿಯ ಪ್ರಾಜೆಕ್ಟ್. ನಾವು ಒಂದು ವರ್ಷಕ್ಕೆ ಮೂರು ಕೋಟಿ ರೂಪಾಯಿಯಂತೆ ಖರ್ಚು ಮಾಡುತ್ತಾ ಹೋದರೆ ಇನ್ನು 25-30 ವರ್ಷಗಳು ಬೇಕಾಗುತ್ತದೆ ನಮ್ಮ ದೇಶದಲ್ಲಿ ಮುಖ್ಯವಾಗಿ ಇಪ್ಪೊತ್ತು ಕರ್ನಾಟಕದಲ್ಲಿ ವಿದ್ಯುತ್ತಿನ ಅಭಾವ ಇದೆ. ಇನ್ನು ಕೇವಲ ವರ್ಷದಲ್ಲಿ ವಿದ್ಯುತ್ತಿನ ಕ್ಷಾಮವನ್ನು ಎದುರಿಸುವ ಸನ್ನಿವೇಶ ಪ್ರಾಪ್ತವಾಗುತ್ತದೆ ಆದುದರಿಂದ ವಿದ್ಯುತ್ ಯೋಜನೆಯನ್ನು ಕಾರ್ಯಾಚರಣೆಗೆ ತರಲು ವರಾಹಿ ವಿದ್ಯುತ್ ಯೋಜನೆಗೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕೆಂದು ಸರ್ಕಾರದವರಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಇನ್ನು ಚಕ್ರ ನದಿ ನೀರಿನ ಬಗ್ಗೆ ಬಹುಶ ನಾವೆಲ್ಲರೂ ಒಪ್ಪಿಗೆ ಕೊಡಬೇಕಾದಂತ ವಿಷಯ. ಈ ಚಕ್ರ ನದಿ ನೀರಿನಿಂದ ನಮ್ಮ ಜಿಲ್ಲೆಯ ಕೆಲವು ಹಳ್ಳಿಗಳಿಗೆ ಉಪಯೋಗ ಬರುವುದರಿಂದ ಆ ನದಿ ಬತ್ತಿ ಹೋಗದಂತೆ ನೋಡಿಕೊಳ್ಳಬೇಕಾದ್ದು ನಮ್ಮ ಕರ್ತವ್ಯ. ಇದರ ಬಗ್ಗೆ ಸರ್ಕಾರದವರು ಹೆಚ್ಚಿನ ಗಮನವನ್ನು ಕೊಡಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ

ಶ್ರೀ ಕೋಣಂದೂರು ಲಿಂಗಪ್ಪ – ಸ್ವಾಮಿ ತಮ್ಮ ಜಿಲ್ಲೆಗೆ ವರಾಹಿ ನೀರು ಬರಲಿ ಬೇಡ ಎಂದು ಹೇಳುವುದಿಲ್ಲ ಆದರೆ ಆ ನದಿ ನೀರನ್ನು ತೀರ್ಥಹಳ್ಳಿ ತಾಲ್ಲೋಕಿಗೂ ಕೊಡಲಿಕ್ಕೆ ತಮ್ಮ ಅಭ್ಯಂತರ ಏನೂ ಇಲ್ಲವಲ್ಲ.

ಶ್ರೀ ಎ. ಜಿ. ಕೊಡಗಿ.—ಈ ಚಕ್ರ ನೀರನ್ನು ವಿದ್ಯುಚ್ಛಕ್ತಿ ಅಭಿವೃದ್ಧಿಗಾಗಿ ಡೈವರ್ಟ್ ಮಾಡುವುದರಲ್ಲಿ ಯಾರದ್ದೂ ಅಭ್ಯಂತರವಿಲ್ಲ. ಆದರೆ ಆ ನದಿ ಮಾತ್ರ ಬತ್ತಿ ಹೋಗದಂತೆ ಸರಿಯಾಗಿ ನೋಡಿಕೊಳ್ಳಬೇಕು ಹಾಗೇನಾದರೂ ಈ ನದಿಯಲ್ಲಿ ನೀರು ಬತ್ತಿ ಹೋದರೆ ಆದರೆ ಅದನ್ನೇ ಆಶ್ರಯಿಸಿಕೊಂಡಿರುವ ಅನೇಕ ಹಳ್ಳಿಗಳು ನಾಮಾವಶೇಷ ಇಲ್ಲದಂತಾಗಿ ಹೋಗುತ್ತವೆಂದು ಹೇಳ ಬಯಸುತ್ತೇನೆ. ಆದುದರಿಂದಲೇ ಈ ಚಕ್ರಾ ನದಿಗೆ ಕಟ್ಟೆ ಕಟ್ಟುವಾಗ ಅದಕ್ಕೆ ತೂಬುಗಳನ್ನು ಇಡಬೇಕೆಂದು ಸೂಚಿಸಬಯಸುತ್ತೇನೆ. ಈ ರೀತಿ ತೂಬುಗಳನ್ನು ಇಟ್ಟರೆ ಹೊಳೆಯಲ್ಲಿ ನೀರು ಬರುವುದು ಕಡಿಮೆಯಾದಾಗ, ನೀರಿನ ಅಭಾವ ಬರಬಹುದಾದ ಸಂದರ್ಭದಲ್ಲಿ ಈ ತೂಬಿನ ಮೂಲಕ ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆಂದು ತಮ್ಮಲ್ಲಿ ಕಳಕಳಿಯಿಂದ ವಿಜ್ಞಾಪಿಸಿಕೊಳ್ಳುತ್ತೇನೆ. ಇವತ್ತಿನ ದಿವಸ ನಮ್ಮ ವಿರೋಧ ಪಕ್ಷದವರೇ ಇಂತಹ ಜನತಾ ಪಕ್ಷ ಕೇಂದ್ರ ಸರ್ಕಾರದಲ್ಲಿ ರಾಜ್ಯವನ್ನು ನಡೆಸುತ್ತಿದ್ದಾರೆ. ನಾವು ಪ್ರಜಾಪ್ರಭುತ್ವವನ್ನು ಒಪ್ಪಿಕೊಂಡಿರುವಂತಹ ಜನ.

ಶ್ರೀ ಕೋಣಂದೂರು ಲಿಂಗಪ್ಪ —ತಾವು ಕೇಂದ್ರದಲ್ಲಿ ಆಡಳಿತ ನಡೆಸುತ್ತಿದ್ದಾಗ ವಿರೋಧ ಪಕ್ಷದ ನಾಯಕರು ಆಕಾಶವಾಣಿಯಲ್ಲಿ ಮಾತನಾಡುವುದಕ್ಕೆ ಎಂದೂ ಅವಕಾಶವನ್ನೇ ಕೊಟ್ಟಿರಲಿಲ್ಲ. ಆದರೆ ಇವತ್ತು ನಾವು ಅಧಿಕಾರಕ್ಕೆ ಬಂದಮೇಲೆ ವಿರೋಧ ಪಕ್ಷದ ನಾಯಕರಿಗೆ ಅಂಥ ಒಂದು ಅವಕಾಶವನ್ನು ಕಲ್ಪಿಸಿಕೊಟ್ಟಿದ್ದೇವೆ.

ಶ್ರೀ ಎ. ಜಿ. ಕೊಡಗಿ.—ದಕ್ಷಿಣ ಭಾರತದಲ್ಲಿ ನಮ್ಮ ಪಕ್ಷ ಜಯಭೇರಿ ಹೊಡೆದಿದೆ. ಅದೇ ರೀತಿ ಉತ್ತರ ಭಾರತದಲ್ಲೂ ನಮ್ಮ ಪಕ್ಷವೇ ಜಯಭೇರಿ ಹೊಡೆಯಬೇಕಾಗಿತ್ತು, ಆದರೆ ಯಾವುದೋ ಭಯದಿಂದ ಅದು ಸಾಧ್ಯವಾಗಲಿಲ್ಲ. ಇದರಿಂದಾಗಿ ಅಲ್ಲಿ ನಾವು ಸಂಪೂರ್ಣವಾಗಿ ಸೋಲನ್ನು ಒಪ್ಪಿಕೊಳ್ಳಬೇಕಾಯಿತು.

ಶ್ರೀ ಕೋಣಂದೂರುಲಿಂಗಪ್ಪ.—ನೀವು ಓಟುಹಾಕದಿದ್ದರೆ ನಿಮ್ಮನ್ನು ಮಿಸಾ ಕೆಳಗೆ ಜೈಲಿಗೆ ಹಾಕುತ್ತೇವೆ ಡಿ.ಐ.ಆರ್. ಕೆಳಗೆ ಜೈಲಿಗೆ ಹಾಕುತ್ತೇವೆ ಎಂದು ಜನಗಳನ್ನು ಹೆದರಿಸಿ ಅವರಿಂದ ಓಟು ಹಾಕಿಸಿಕೊಂಡಿದ್ದೀರಿ,

ಶ್ರೀ ಎ. ಜಿ. ಕೊಡಗಿ.—ತಾವು ಅಧಿಕಾರದಲ್ಲಿದ್ದೀರಿ, ಏನು ಬೇಕಾದರೂ ಹೇಳಬಹುದು. ನಾವು ಪ್ರಜಾಪ್ರಭುತ್ವಕ್ಕೆ ಅನುಗುಣವಾಗಿ ನಡೆಯಕೊಳ್ಳುತ್ತೇವೆಂದು ಒಪ್ಪಿಕೊಂಡಿದ್ದೇವೆ. ಆದರೆ ತಾವು ಒಂದು ಕೆಲಸ ಮಾಡಬೇಕು. ಏನೆಂದರೆ ಇವತ್ತು ನಮ್ಮ ರಾಜ್ಯದಲ್ಲಿ ವರಾಹಿ ವಿಜಯನಗರ ಸ್ಟೀಲ್ ಪ್ಲಾಂಟ್ ಇಂಥ ದೊಡ್ಡ ಯೋಜನೆಗಳೇನಿವೆ ಇವುಗಳಿಗೆ ತಾವು ಕೇಂದ್ರದಿಂದ ಹಣವನ್ನು ಒದಗಿಸಿ ಇವು ಅದಷ್ಟು ಬೇಗನೇ ಪೂರ್ತಿಯಾಗುವುದಕ್ಕೆ ಸಹಾಯ ನೀಡಿ ಸಹಕರಿಸಬೇಕೆಂದು ಕೇಳಿ ಕೊಳ್ಳುತ್ತೇನೆ.

ಮಾನ್ಯ ಅಧ್ಯಕ್ಷಣಿಯವರೆ ನಾನು ಮಾತನಾಡಬೇಕಾದ ಅಂಶಗಳು ಇನ್ನೂ ಇದ್ದುವು ಆದರೆ ಕಾಲಾವಕಾಶ ಕಡಿಮೆ ಇರುವುದರಿಂದ ನನ್ನ ಮಾತುಗಳನ್ನು ಇಲ್ಲಿಗೇ ನಿಲ್ಲಿಸಿ ಇದುವರೆಗೆ ಮಾತ ನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಸ್. ಎಸ್. ಗುರುಸಿದ್ದಪ್ಪ (ಬಿಳಿಗೆರೆ).—ಸನಾನ್ಯ ಅಧ್ಯಕ್ಷರೆ, ಮಾನ್ಯ ರಾಜ್ಯ ಪಾಲರ ಭಾಷಣಕ್ಕೆ ವಂದನಾರ್ಪಣೆಯನ್ನರ್ಪಿಸುವ ಈ ಸಂದರ್ಭದಲ್ಲಿ ನಾನು ಕೆಲವು ಮಾತು ಗಳನ್ನು ಹೇಳಬಯಸುತ್ತೇನೆ.

ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ ''ನೀವು ಇದೀಗ ಚುನಾವಣೆಯ ರಂಗದಿಂದ ಮರಳಿ ಬಂದಿದ್ದೀರಿ. ಜನ ಸಂಪರ್ಕವನ್ನು ನೀವು ನಿಜವಾಗಿಯೂ ನವೀಕರಿಸಿ ಕೊಂಡಿದ್ದೀರಿ ಎಂದು ಹೇಳಿದ್ದಾರೆ. ನಿಜವಾಗಿಯೂ ನಾವು ಲೋಕಸಭಾ ಚುನಾವಣೆಯನ್ನು ಮುಗಿಸಿಕೊಂಡು ಇಲ್ಲಿಗೆ ಬಂದಿದ್ದೇವೆ. ನಮ್ಮ ಕರ್ನಾಟಕ ರಾಜ್ಯದಲ್ಲಿ 28 ಲೋಕಸಭಾ ಸೀಟುಗಳ ಪೈಕಿ 26 ಸೀಟುಗಳು ಕಾಂಗ್ರೆಸ್‌ಗೂ, 2 ಸೀಟುಗಳು ವಿರೋಧಪಕ್ಷಕ್ಕೂ ಬಂದಿವೆ. ಆದರೆ ನಮ್ಮ ಲೆಕ್ಕಾ ಚಾರದ ಪ್ರಕಾರ 28 ಸೀಟುಗಳ ಪೈಕಿ ಕಾಂಗ್ರೆಸ್‌ಗೆ 2 ಸೀಟುಗಳೂ, ವಿರೋಧ ಪಕ್ಷಕ್ಕೆ 26 ಸೀಟು ಗಳೂ ಬರಬೇಕಾಗಿತ್ತು. ಆದರೆ ಇದು ಏಕೋ ತಲೆಕೆಳಕಾಗಿದೆ. ಇದನ್ನು ನೋಡಿದರೆ ಚುನಾ ವಣೆಯನ್ನು ನಡೆಸುವಾಗ ದೇಶದಲ್ಲಿ ತುರ್ತು ಪರಿಸ್ಥಿತಿಯನ್ನು ಜನತೆಯ ಮುಂದಿಟ್ಟು ಚುನಾವಣೆ ಗಳನ್ನು ನಡೆಸಿದ್ದೀರಿ ಜನರು ಈ ತುರ್ತು ಪರಿಸ್ಥಿತಿಗೆ ಹೆದರಿದ್ದಾರೆ. ರಾಷ್ಟ್ರದ ದೊಡ್ಡ ದೊಡ್ಡ ರಾಜ ಕೀಯ ಗಣ್ಯ ವ್ಯಕ್ತಿಗಳೇ ಹೆದರಿರುವಾಗ ಇನ್ನು ಸಣ್ಣ ಪುಟ್ಟವರು, ಬಡವರು ಹೆದರದೇ ಇರುತ್ತಾ ರೆಯೇ ? ತಾವು ಡಿ.ಐ.ಆರ್ ಕಾಫಿಪೋಸ, ಮಿಸಾ, ಇತ್ಯಾದಿಗಳನ್ನು ದೇಶದ ಜನತೆಯ ಮುಂದಿಟ್ಟು ಚುನಾವಣೆಗಳನ್ನು ಮಾಡಿದ್ದೀರಿ ಕರ್ನಾಟಕದಲ್ಲಿ ತಾವು ಇದನ್ನು ತೋರಿಸಿದ್ದ ರಿಂದ ಜನರು ತಮಗೆ ಓಟು ಕೊಟ್ಟಿದ್ದಾರೇ ವಿನಃ ನಿಮ್ಮ ಆಡಳಿತದ ಬಗ್ಗೆ ಅಭಿಮಾನ ಹೆಮ್ಮೆ ಪಟ್ಟು ಕೊಂಡು ಅವರು ಓಟು ಕೊಡಲಿಲ್ಲ.

ಶ್ರೀ ಬಿ. ಬೈರಪ್ಪಾಜಿ.- ಜನಗಳನ್ನು ಜನತಾ ಪಕ್ಷದವರು ಹೆದರಿಸಿದ್ದಾರೆಯೇ ಹೊರತು ನಾವು ಯಾವಾಗಲೂ ಹೆದರಿಸಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ನಾವು ಹೆದರಿಸಿದ್ದರೆ ನೀವು ಇಲ್ಲಿಯವರೆಗೂ ಬರುತ್ತಲೇ ಇರಲಿಲ್ಲ.

ಶ್ರೀ ಎಸ್. ಎಸ್. ಗುರುಸಿದ್ದಪ್ಪ.—ಮಾನ್ಯ ಅಧ್ಯಕ್ಷಣಿಯವರೆ, ಇವತ್ತು ಗ್ರಾಮಾಂತರ ಪ್ರದೇಶದಲ್ಲಿ ಅನೇಕ ಜನರು ಭೂ ನ್ಯಾಯ ಮಂಡಲಿ ಕೇಸ್‌ನಲ್ಲಿ ಸಿಕ್ಕಿ ಹಾಕಿಕೊಂಡಿದ್ದಾರೆ. ಇನ್ನೂ ಅನೇಕರು ಸರ್ಕಾರದಿಂದ, ಸಾಲಗಳನ್ನು ತೆಗೆದುಕೊಂಡು ಪುನಃ ಆ ಹಣವನ್ನು ಹಿಂದಕ್ಕೆ ಕೊಡಲು ಶಕ್ತಿ ಇಲ್ಲದಂಥ ಜನಗಳನ್ನು ನೀವು ಹೆದರಿಸಿ ಅವರಿಂದ ಓಟನ್ನು ತೆಗೆದುಕೊಂಡಿದ್ದೀರೀ ಹೊರತು

ಒಳ್ಳೆಯ ರೀತಿಯಿಂದ, ಜನಗಳ ಮನಸ್ಸನ್ನು ಕರಗಿಸಿ ನೀವು ಓಟನ್ನು ತೆಗೆದುಕೊಂಡಿಲ್ಲ. ಇದು ಇಷ್ಟಕ್ಕೇ ಮುಗಿಯಲಿಲ್ಲ. ಇನ್ನು ಕೆಲವೇ ದಿವಸಗಳಲ್ಲಿ ವಿಧಾನ ಸಭಾ ಚುನಾವಣೆಯೂ ಬರುತ್ತದೆ. ಆಗ ಜನತೆ ಯಾರಿಗೆ ಓಟನ್ನು ಕೊಡುತ್ತಾರೆ ಎಂಬುದನ್ನು ನೋಡಿದರೆ ನಿಮಗೆ ಗೊತ್ತಾಗುತ್ತದೆ. ಇವತ್ತಿನ ದಿವಸ ನಾವು ಎಲ್ಲಿಯೇ ನೋಡಲಿ ದೇಶದಲ್ಲಿ ಭ್ರಷ್ಟಾಚಾರ, ಅಧಿಕಾರ ಷಾಹಿ ಮನೋಭಾವ, ಕ್ಷಾಮಡಾಮರಗಳು ಇತ್ಯಾದಿ ದುರ್ಗುಣಗಳೇ ಹೆಚ್ಚಿಗೆ ಕಾಣುತ್ತಿವೆ. ಎಲ್ಲ ಹುಡುಕಿದರೂ ಕೂಡ ಒಳ್ಳೆಯ ಭಾವನೆಗಳು ಕಾಣಿಸುತ್ತಿಲ್ಲ.

ಸ್ವಾಮಿ, ಇನ್ನು ಭ್ರಷ್ಟಾಚಾರದ ವಿಷಯದಲ್ಲಿ ಒಂದೆರಡು ಮಾತನ್ನು ಹೇಳಬಯಸುತ್ತೇನೆ. ದೇಶದಲ್ಲಿ ತುರ್ತುಪರಿಸ್ಥಿತಿ ಬಂದಮೇಲೆ ಯಾವ ತಪ್ಪುಗಳನ್ನೂ ಮಾಡದೇ ಇದ್ದ ಸಹಸ್ರಾರು ಜನ ವಿರೋಧಪಕ್ಷದವರನ್ನು ಜೈಲಿಗೆ ಕಳುಹಿಸಿದ್ದೀರಿ. ಅವರನ್ನು ಯಾವ ಕಾರಣದ ಮೇಲೆ ಜೈಲಿಗೆ ಕಳುಹಿಸಿದ್ದೀರಿ. ಅವರೇನು ಬ್ಲಾಕ್ ಮಾರ್ಕೆಟಿಯರ್ಸ್ಸೇ ? ಅಥವಾ ಯಾರನ್ನಾದರೂ ಕೊಲೆ ಮಾಡಿದ್ದಾರೆಯೇ ? ಯಾವ ತಪ್ಪು ಮಾಡಿದರೆಂದು ಅವರಿಗೆ ಈ ಶಿಕ್ಷೆ ಕೊಟ್ಟಿರಿ ಮಾನ್ಯ ದೇವೇಗೌಡರು ಏನು ತಪ್ಪು ಮಾಡಿದ್ದರು ಎಂದು ಅವರನ್ನು ಸುಮಾರು ಒಂದೂವರೆ ವರ್ಷಗಳ ಕಾಲ ಜೈಲಿನಲ್ಲಿ ಇಟ್ಟಿದ್ದಿರಿ ; ಅದೇ ಅಲ್ಲದೆ ನಮ್ಮ ಪಕ್ಷದ ಹಂಗಾಮಿ ನಾಯಕರನ್ನು ನಿಮ್ಮ ಪಕ್ಷಕ್ಕೆ ಎಳೆದುಕೊಂಡಿರಿ. ಇವತ್ತಿನ ದಿವಸ ನೀವು ವಿರೋಧಪಕ್ಷದ ನೀತಿಯನ್ನು ದಮನ ಮಾಡುತ್ತಿದ್ದೀರಿ. ಈ ವರ್ತನೆಯನ್ನು ಯಾರೂ ಕೂಡ ಸಹಿಸುವುದಿಲ್ಲ, ಮತ್ತು ಒಪ್ಪುವುದೂ ಇಲ್ಲ. ಇವತ್ತು ತಮ್ಮಲ್ಲಿ ಅಧಿಕಾರ ದಾಹ, ಸ್ವಜನ ಪಕ್ಷಪಾತ ಎದ್ದು ಕಾಣುತ್ತಿವೆ. ನಾನು ಇದನ್ನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ, ಇವತ್ತು ಯಾವುದೇ ಒಂದು ಕಾರ್ಪೊರೇಷನ್ ತೆಗೆದುಕೊಂಡರೂ ಅಲ್ಲಿಗೆ ಕಾಂಗ್ರೆಸ್ ನವರನ್ನೇ ಛೇರ್ಮನ್ ಆಗಿ ಹಾಕಿದ್ದೀರಿ. ಯಾವ ಒಂದು ಬೋರ್ಡ್ ತೆಗೆದುಕೊಂಡರೂ ಕಾಂಗ್ರೆಸ್ ಸದಸ್ಯರನ್ನೇ ಮಾಡಿದ್ದೀರಿ, ಲ್ಯಾಂಡ್ ಟ್ರಿಬ್ಯುನಲ್ ತೆಗೆದುಕೊಂಡರೂ ಕಾಂಗ್ರೆಸ್ ಪಕ್ಷದ ಸದಸ್ಯರನ್ನೇ ಹಾಕಿದ್ದೀರಿ. ಇದು ನಿಮ್ಮ ನೀತಿಯಾಗಿದೆ. ಇನ್ನು ಮುಂದೆ ಕಾಂಗ್ರೆಸ್‌ನವರ ಮಕ್ಕಳಿಗೆ ಕೆಲಸ, ಕಾಂಗ್ರೆಸ್‌ನವರ ಮಕ್ಕಳಿಗೇ ವಿದ್ಯಾಭ್ಯಾಸ, ಕಾಂಗ್ರೆಸ್‌ನವರನ್ನು ಬಿಟ್ಟು ಬೇರೆಯವರಿಗೆ ಯಾವ ಸೌಕರ್ಯವೂ ಇಲ್ಲವೆಂದು ಹೇಳುವ ಮಟ್ಟಕ್ಕೆ ಹೋಗಿದ್ದೀರಿ. ಇದು ಅತ್ಯಂತ ಶೋಚನೀಯ ವಿಚಾರ.

ಶ್ರೀ ಕೆ. ಹೆಚ್. ರಂಗನಾಥ್.—ಸ್ವಾಮಿ, ನಿಮ್ಮ ಪ್ರಧಾನಿಯವರು ಒಳ್ಳೆಯ ರಾಗವನ್ನು ಹಾಡುತ್ತಿದ್ದಾರೆ. ಅದನ್ನು ನೋಡಿಕೊಂಡಾದರೂ ನೀವು ಸುಮ್ಮನೆ ಇರಿ ಅವರು ಹಾಡುತ್ತಿರುವ ರಾಗಕ್ಕೆ ವಿರುದ್ಧವಾಗಿ ನೀವು ರಾಗ ಹಾಡಿ ನಿಮ್ಮ ಪ್ರಧಾನಿಯವರಿಗೆ ಕೆಟ್ಟ ಹೆಸರು ತರಬೇಡಿ.

ಶ್ರೀ ಎನ್. ಎಸ್. ಗುರುಸಿದ್ದಪ್ಪ.—ನಿಮ್ಮ ಪಕ್ಷ ಆಡಳಿತಕ್ಕೆ ಬಂದಮೇಲೆ ಗ್ರಾಮಾಂತರ ಪ್ರದೇಶವಲ್ಲಿ ಅಲ್ಪಸಂಖ್ಯಾತರು, ಬಹುಸಂಖ್ಯಾತರು, ಇವರಲ್ಲಿ ಒಬ್ಬರನ್ನು ಕಂಡರೆ ಇನ್ನೊಬ್ಬರಿಗೆ ಆಗುತ್ತಿಲ್ಲ. ನಿಮ್ಮ ಆಡಳಿತದಲ್ಲಿ ಏನೇನು ಆಗಬಾರದ್ದು ಆಗಬೇಕೋ ಅದೆಲ್ಲಾ ಆಗುತ್ತಿದೆ. ಆದುದರಿಂದ ಇನ್ನು ಮುಂದಾದರೂ ಈ ರೀತಿ ಕಚ್ಚಾಟಗಳು ಆಗುವುದಕ್ಕೆ ಅವಕಾಶ ಕೊಡದೆ ಆಡಳಿತವನ್ನು ಚೆನ್ನಾಗಿ ನಡೆಸುತ್ತೀರೆಂದು ತಿಳಿದುಕೊಂಡಿದ್ದೇನೆ. ನಿಮ್ಮ ಪಕ್ಷದವರೇ ತಮ್ಮ ಆಡಳಿತದಲ್ಲಿ ರೆಡ್ ಟೇಪಿಸಂ ಇದೆ, ಬಡವರಿಗೆ ಕೊಟ್ಟ ಸಾಲಗಳನ್ನು ವಸೂಲು ಮಾಡುವಾಗ ಯಾವುದೇ ರಿಯಾಯಿತಿಗಳನ್ನೂ ತೋರಿಸದೇ ವಸೂಲು ಮಾಡುತ್ತಿದ್ದೇವೆ ಎಂದು ಹೇಳಿದ್ದಾರೆ. ಕೆಲವರನ್ನು ಕಡ್ಡಾಯವಾಗಿ ರಿಟೈರ್ ಮಾಡಿರುವುದನ್ನೂ ಕೂಡ ಹೇಳಿದ್ದಾರೆ.

ಮಾನ್ಯ ಅಧ್ಯಕ್ಷಿಣಿಯವರೆ ಇನ್ನು ಲ್ಯಾಂಡ್ ಟ್ರಿಬ್ಯುನಲ್ ಬಗ್ಗೆ ಹೇಳುವುದಾದರೆ ಅನೇಕರಿಗೆ ಕಾಗದಪತ್ರಗಳನ್ನೇ ನೋಡುವುದಕ್ಕೆ ಬರುವುದಿಲ್ಲ. ಎವಿಡೆನ್ಸ್ ಯಾವ ರೀತಿ ಕೊಡಬೇಕೆಂದು ಅವರಿಗೆ ಗೊತ್ತಿಲ್ಲ. ಟ್ರಿಬ್ಯುನಲ್‌ಗೆ ಒಂದು ಅರ್ಜಿಯನ್ನು ಯಾರಾದರೂ ಕೊಟ್ಟರೆ ಅದನ್ನು ಸರಿಯಾಗಿ ಓದಿ ಅರ್ಥಮಾಡಿಕೊಳ್ಳುವುದಕ್ಕೂ ಬರುವುದಿಲ್ಲ. ಅಂಥವರನ್ನೆಲ್ಲಾ ಈ ಟ್ರಿಬ್ಯುನಲ್‌ಗೆ ಹಾಕಿದ್ದೀರಿ. ಅಲ್ಪಸ್ವಲ್ಪವಾದರೂ ತಿಳಿದವರನ್ನು ಟ್ರಿಬ್ಯುನಲ್‌ಗೆ ಸದಸ್ಯರನ್ನಾಗಿ ಹಾಕಿದರೆ ಅದರಿಂದ ಜನಗಳಿಗೆ ಅನುಕೂಲವಾಗುತ್ತದೆಂದು ಹೇಳಬಯಸುತ್ತೇನೆ.

ಇನ್ನು ಭೂಸುಧಾರಣೆ ತಿದ್ದುಪಡಿ ಕಾನೂನನ್ನು ಜಾರಿಗೆ ತಂದಿರುವ ಕಾರಣ, ಅನೇಕ ಜನ ಮೈನರ್ ಮಕ್ಕಳು, ಹೆಣ್ಣು ಮಕ್ಕಳು, ಈವತ್ತಿನ ದಿವಸ ಜಮೀನನ್ನು ಕಳೆದುಕೊಂಡ ಕಾರಣ ನಿರುದ್ಯೋಗಿಗಳಾಗಿದ್ದಾರೆ ನಮ್ಮ ಜಮೀನನ್ನು ನಾವೇ ವ್ಯವಸಾಯ ಮಾಡಿ

ಕೊಳ್ಳುತ್ತೇನೆಂದು ಅಪೇಕ್ಷೆ ಪಟ್ಟರು ಅವರಿಗೆ ಈವತ್ತಿನದಿವಸ ಜಮೀನು ಸಿಕ್ಕದಂತಾಗಿರುತ್ತದೆ ಇದಕ್ಕಾಗಿ ಕೊಟ್ಟಿರತಕ್ಕಂಥ ಕಾಂಪನ್‌ಸೇಷನ್ ಕೂಡ ಬಹಳ ಕಡಿಮೆ ಇರುತ್ತದೆ. ಆದ್ದರಿಂದ ಇದನ್ನು ಜಾಸ್ತಿ ಮಾಡಿ ಅನೇಕ ಜನ ಸಣ್ಣ ಹಿಡುವಳಿದಾರರಿಗೆ ಅನುಕೂಲಮಾಡಿಕೊಟ್ಟರೆ ಒಳ್ಳೆಯದೆಂದು ಹೇಳಬಯಸುತ್ತೇನೆ.

5-00 ಪಿ. ಎಂ.

ಇನ್ನು ಡೆಟ್ ರಿಲೀಪ್ ಬಗ್ಗೆ ಹೇಳುವುದಾದರೆ 10 ರೂ. 20 ರೂ ಬಡ್ಡಿ ತೆಗೆದುಕೊಂಡು ವ್ಯಾಪಾರ ಮಾಡುತ್ತಿದ್ದಂಥ ಮಾರ್ವಾಡಿಗಳು ತಮ್ಮ ವ್ಯವಹಾರವನ್ನು ನಿಲ್ಲಿಸಿಬಿಟ್ಟರು ಹಳ್ಳಿಗಳಲ್ಲಿ ಅಲ್ಪಸ್ವಲ್ಪ ಬಡ್ಡಿಗೆ ಕೊಡುತ್ತಿದ್ದಂಥಾ ಜನರು ಈ ಕಾನೂನು ಜಾರಿಗೆ ಬಂದಮೇಲೆ ಈ ವ್ಯವಹಾರವನ್ನು ನಿಲ್ಲಿಸಿಬಿಟ್ಟದ್ದರಿಂದ ಜನರು ಬಹಳ ತೊಂದರೆಯನ್ನು ಅನುಭವಿಸುವಂತೆ ಆಯಿತು. ಇದನ್ನು ಪುನರ್ ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಸೊಸೈಟಿಗಳ ವಿಚಾರವನ್ನು ತೆಗೆದುಕೊಂಡರೆ ಈ ಸೊಸೈಟಿಗಳನ್ನು ಅಮಾಲ್ಗಮೇಷನ್ ಮಾಡಿದಮೇಲೆ ಅನೇಕ ಜನ ಡಿಫಾಲ್ಟರ್ ಮೆಂಬರ್ಸ್ ಆಗಿರುತ್ತಾರೆ. ಡಿಫಾಲ್ಟರ್ ಆಗಿರುವ ಸೊಸೈಟಿಗಳನ್ನು ತೆಗೆಯಬೇಕು. ಅವರಿಗೆ ಮೆಂಬರ್‌ಶಿಪ್‌ನ್ನು ಕೊಡಬಾರದು. ಅಂಥವರ ಮೇಲೆ ಯಾವ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಲಿಲ್ಲವಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ.

ಇನ್ನು ಮರಗಳನ್ನು ಕಡಿಯುವ ವಿಷಯದ ಬಗ್ಗೆ ಹೇಳುವುದಾದರೆ ಇದರಲ್ಲಿ ಜಮೀನಿನಲ್ಲಿರುವ ಮರಗಳನ್ನು ಕಡಿಯಬೇಕಾದರೆ ಆರ್ ಆರ್. ಪಹಣಿಯನ್ನು ವಿಲೇಜ್ ಅಕೌಂಟೆಂಟ್‌ಗೂ ಮತ್ತೆ ಫಾರೆಸ್ಟ್ ಆಫೀಸರಿ ತೋರಿಸಿ ತೆಗೆದುಕೊಳ್ಳಬೇಕು,

ಅಧ್ಯಕ್ಷರು.—ಇದರ ಬಗ್ಗೆ ಬೆಳಿಗ್ಗೆ ಸ್ಟೇಟ್‌ಮೆಂಟ್ ಮಾಡಿದಾಗ ತಾವು ಇರಲಿಲ್ಲವೆಂದು ಕಾಣುತ್ತದೆ.

ಶ್ರೀ ಎನ್ ಎಸ್. ಗುರುಸಿದ್ದಪ್ಪ.—ಇಂಥ ಕಾಯಿದೆಯನ್ನು ಮಾಡುವಾಗ ಜಮೀನುದಾರರಿಗೆ ತೊಂದರೆಯಾಗದಂತೆ ತಿದ್ದುಪಡಿಗಳಾಗಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಕಾಮಗಾರಿಗಳ ವಿಷಯವನ್ನು ತೆಗೆದುಕೊಂಡರೆ ರಿಲೀಫ್ ವರ್ಕ್ಸ್ ಎಂದು ಈಬಾಬಗೆ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದರೂ. ಜಮೀನುದಾರರಿಗೆ ಅನುಕೂಲವಾಗುತ್ತಿಲ್ಲ. ಕಂಟ್ರಾಕ್ಟರ್ಸ್‌ಗೂ ಮತ್ತು ಅಧಿಕಾರಿಗಳಿಗೂ ಇದರಲ್ಲಿ ಬಹುಭಾಗ ಹೋಗುತ್ತಿದೆ. ಇದಕ್ಕೆ ಸರಿಯಾದ ವಿಜಿಲೆನ್ಸ್ ಸ್ಕ್ವಾಡ್ ಮಾಡಿದರೆ ಅನೇಕ ಜನ ಕಳ್ಳರು ಸಿಗುತ್ತಾರೆಂದು ಹೇಳುತ್ತೇನೆ. ಇದರಲ್ಲಿ ಸುಮಾರು 60 ಪರ್ಸೆಂಟು ಹಣ ಅಧಿಕಾರಿಗಳಿಗೂ ಕಂಟ್ರಾಕ್ಟರರಿಗೂ ಹಂಚಿಕೆಯಾಗುತ್ತಿದೆ. ಈ ವಿಚಾರವನ್ನು ಮನಸ್ಸಿನಲ್ಲಿ ಇಟ್ಟುಕೊಂಡು ವಿಮರ್ಶೆ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಮಳೆಯ ಬಗ್ಗೆ ಹೇಳುವುದಾದರೆ ಮಳೆಯು ಬಹಳ ನಿಧಾನವಾಗಿ ಬರುತ್ತಿದೆ. ಕಾಲಕಾಲಕ್ಕೆ ಸರಿಯಾಗಿ ಮಳೆ ಬರುತ್ತಾ ಇಲ್ಲ. ಕಳೆದ ವರ್ಷಕೂಡ ಮಳೆ ಬೆಳೆ ಸರಿಯಾಗಿ ಆಗಿಲ್ಲ. ಕಂದಾಯ ವಸೂಲ ಮಾತ್ರ ಚುರುಕಾಗಿ ನಡೆಯುತ್ತಿದೆ. ಕಂದಾಯ ವಸೂಲಿಯನ್ನು ನಿಲ್ಲಿಸಬೇಕೆಂದು ತಮ್ಮನ್ನು ಕೇಳಿಕೊಳ್ಳುತ್ತೇನೆ.

ಇನ್ನು ನೀರಾವರಿ ಯೋಜನೆಗಳಿಗೆ ಸಾಕಷ್ಟು ಹಣ ಕೊಡುತ್ತಾ ಇಲ್ಲ. ಕಬಿನಿ ಯೋಜನೆ ಹಾರಂಗಿ ಯೋಜನೆ, ಹೇಮಾವತಿ ಯೋಜನೆ ಇವುಗಳ ಕಾರ್ಯ ಬಹಳ ನಿಧಾನವಾಗಿ ನಡೆಯುತ್ತಿದೆ ಇವು ಯಾವ ಕಾಲಕ್ಕೆ ಮುಗಿಯುತ್ತದೋ ಗೊತ್ತಿಲ್ಲ. ಕುಡಿಯುವ ನೀರಿನ ಸಮಸ್ಯೆಯ ಬಗ್ಗೆ ಹೇಳುವುದಾದರೆ ಇನ್ನೂ ಕೂಡ ಹಳ್ಳಿಗಳಲ್ಲಿ ನೀರಿಗಾಗಿ ಬವಣೆ ಪಡುತ್ತಿದ್ದಾರೆ. ಇಂಥ ಒಂದು ಸಣ್ಣ ಸಮಸ್ಯೆಯನ್ನು ಇನ್ನು ಬಗೆಹರಿಸಲು ಸಾಧ್ಯವಾಗಲಿಲ್ಲವಲ್ಲ ಎಂದು ಹೇಳಬೇಕಾಗಿದೆ.

ಇನ್ನು ಕುಟುಂಬ ಯೋಜನೆಯ ಬಗ್ಗೆ ಹೇಳುವುದಾದರೆ ಇದರ ಬಗ್ಗೆ ಹೆದರಬೇಕಾಗಿಲ್ಲ. ಇದನ್ನು [illegible] ಮಾಡದಿದ್ದರೆ ಮನುಷ್ಯ ಮನುಷ್ಯನನ್ನು ಕಿತ್ತು ತಿನ್ನತಕ್ಕಂಥ ಪರಿಸ್ಥಿತಿ ಬರಬಹುದು. ಇದರಿಂದ ನಿರುದ್ಯೋಗ ಸಮಸ್ಯೆಯೂ ದಿನೇ ದಿನೇ ಬೃಹದಾಕಾರವಾಗಿ ಬೆಳೆಯುತ್ತದೆ. ಇದಕ್ಕೆ ಪರಿಹಾರ ಕಂಡುಹಿಡಿಯದೇ ಹೋದರೆ ಕ್ರಾಂತಿಯಾಗುತ್ತದೆ. ಇದರಿಂದ ನಕ್ಸಲಿಸ್ಟ್ಸ್ ಹುಟ್ಟಿಕೊಳ್ಳುತ್ತಾರೆಂದು ಹೇಳಬೇಕಾಗುತ್ತದೆ.

ಇನ್ನು ಭ್ರಷ್ಟಾಚಾರದ ನೀತಿಯ ಬಗ್ಗೆ ತನಿಖೆಯಾಗಬೇಕು. ವಿರೋಧಪಕ್ಷದ ನಾಯಕರು ಅನೇಕ ಸಲ ಇದರ ಬಗ್ಗೆ ಚರ್ಚೆ ಮಾಡಿರುತ್ತಾರೆ. ರಾಜ್ಯಪಾಲರ ಭಾಷಣದಲ್ಲಿ ಇದರ ಬಗ್ಗೆ ಏನು ಪ್ರಸ್ತಾಪ ಮಾಡಿಲ್ಲ. ಇದಕ್ಕೆ ಒಂದು ಕಮಿಷನ್ ನೇಮಕ ಮಾಡಿ ಭ್ರಷ್ಟಾಚಾರದ ಬಗ್ಗೆ ತನಿಖೆ ಮಾಡುತ್ತೇವೆಂದು ಹೇಳಿದ್ದಾರೆ. ಆದರೆ ಇಲ್ಲಿಯವರೆಗೂ ಏನೂ ಕಾರ್ಯಕ್ರಮ ತೆಗೆದುಕೊಂಡಿಲ್ಲವೆಂದು ವಿಷಾದದಿಂದ ಹೇಳುತ್ತಾ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರನ್ನು ವಂದಿಸಿ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಚ್. ಜಿ. ಚನ್ನಪ್ಪ (ಮಾಗಡಿ).—ಮಾನ್ಯ ಸಭಾಪತಿಗಳೇ ಈ ದಿವಸ ನಮ್ಮ ರಾಜ್ಯಪಾಲರು ಮಾಡಿರತಕ್ಕಂಥ ಭಾಷಣವನ್ನು ಸ್ವಾಗತಿಸುತ್ತಾ ನಾನು ಕೆಲವು ವಿಷಯಗಳನ್ನು ಇಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇಲ್ಲಿಯವರೆಗೂ ಅನೇಕ ಕ್ಷೇತ್ರಗಳಲ್ಲಿ ನಡೆದಿರತಕ್ಕಂಥ ಕಾರ್ಯಕ್ರಮಗಳ ಬಗ್ಗೆ ಟೀಕೆ ಟಿಪ್ಪಣಿಗಳು ನಡೆದಿವೆ. ಮುಂದೆ ನನ್ನ ದೃಷ್ಟಿಯಲ್ಲಿ ಹೇಳುವುದಾದರೆ ನಮ್ಮ ವಿರೋಧ ಪಕ್ಷದ ಸದಸ್ಯರು ಯಾವುದಾದರೂ ಒಂದು ವಿರೋಧವನ್ನು ಮಾಡಬೇಕು ಎನ್ನುವ ದೃಷ್ಟಿಯಿಂದ ಅಂಕಿಅಂಶಗಳನ್ನು ಕೊಡುತ್ತಾ ಹೇಳಿದ್ದಾರೆಯೇ ಹೊರತು ಅವರು ನಿಜವಾಗಿಯೂ ಕೂಡ ಆಗಿರತಕ್ಕಂಥ ಪ್ರಯೋಜನವನ್ನು ಬಿಚ್ಚು ಮನಸ್ಸಿನಿಂದ ಹೇಳಲಿಲ್ಲವೆಂದು ಹೇಳಿದರೆ ತಪ್ಪಾಗಲಾರದೆಂದು ಭಾವಿಸುತ್ತೇನೆ. ಇವತ್ತಿನ ದಿವಸ ಮೂವತ್ತು ವರ್ಷದ ಕಾಂಗ್ರೆಸ್ ಆಡಳಿತದ ವಿಚಾರದಲ್ಲಿ ಚರ್ಚೆ ಮಾಡಿದ್ದಾರೆ. ಆದರೆ ಮೂವತ್ತು ವರ್ಷಗಳ ಕಾಲವೂ ಶ್ರೀಮತಿ ಇಂದಿರಾಗಾಂಧಿಯವರೇ ಆಡಳಿತವನ್ನು ನಡೆಸಿಕೊಂಡು ಬರಲಿಲ್ಲ. ಆಡಳಿತವನ್ನು ನಡೆಸಿಕೊಂಡು ಬಂದವರ ಪೈಕಿ ಮೊಟ್ಟಮೊದಲನೆಯದಾಗಿ ಇವತ್ತಿನ ದಿವಸ ಕೇಂದ್ರ ಸರ್ಕಾರದಲ್ಲಿ ಯಾರು ಪ್ರಧಾನಿಯಾಗಿದ್ದಾರೆ ಶ್ರೀಮಾನ್ ಮೊರಾರ್ಜಿ ದೇಸಾಯಿಯವರೂ ಕೂಡ ಈ ಪಕ್ಷದಲ್ಲಿಯೇ ಇದ್ದರೆಂದು ಹೇಳಿದರೆ ತಪ್ಪಾಗಲಾರದು. ನಾನಾದರೂ ಭಾವಿಸುತ್ತೇನೆ ಶ್ರೀಮತಿ ಇಂದಿರಾ ಗಾಂಧಿಯವರು ಕಳೆದ ಆರು ವರ್ಷದ ಪೂರ್ಣ ಅಧಿಕಾರವನ್ನು ವಹಿಸಿಕೊಂಡಾಗ ಬ್ಯಾಂಕ್ ರಾಷ್ಟ್ರೀಕರಣ ಮಾಡುವ ಸಂಪೂರ್ಣ ಜವಾಬ್ದಾರಿಯನ್ನು ಅವರೇ ಹೊತ್ತುಕೊಂಡರು. ದೇಶದಲ್ಲಿ ಪ್ರಗತಿದಾಯಕವಾದ ಕೆಲಸ ಕಾರ್ಯಗಳು ಇವರ ಕಾಲದಲ್ಲಿಯೇ ನಡೆದಿವೆ ಎಂದು ಹೇಳಿದರೆ ಅದು ಅತಿಶಯೋಕ್ತಿಯಲ್ಲವೆಂದು ಹೇಳಬಹುದು. ಲೋಪದೋಷಗಳು ಇರಬಹುದು, ಶಾಸನಗಳನ್ನಾಗಲಿ, ಕಾನೂನುಗಳನ್ನಾಗಲಿ ಕಾರ್ಯಾಚರಣೆ ಮಾಡುವಂಥ ಜನಕ್ಕೆ ಸ್ವಲ್ಪ ಎಡರುತೊಡರುಗಳು ಬರಬಹುದು. ಎಡವಿದ ಕಲ್ಲನ್ನು ತೆಗೆಯಬೇಕೇ ಹೊರತು ಕಾಲನ್ನು ಕತ್ತರಿಸಬೇಕು ಎನ್ನುವುದು ಸರಿಯಲ್ಲ. ಇವತ್ತಿನ ದಿವಸ ಅಂಕಿಅಂಶಗಳ ಮುಖಾಂತರ ನಡೆದಿರುವ ಕೆಲಸಕಾರ್ಯಗಳನ್ನು, ಮಾಡಿರತಕ್ಕಂಥ ಸಾಧನೆಗಳನ್ನು ರಾಜ್ಯಪಾಲರ ಭಾಷಣದಲ್ಲಿ ಕೊಟ್ಟಿದ್ದಾರೆ. ಎಲ್ಲ ಕ್ಷೇತ್ರದಲ್ಲಿಯೂ ಅಂದರೆ ಕೈಗಾರಿಕಾ ಕ್ಷೇತ್ರದಲ್ಲಿ ಪ್ರಗತಿಯನ್ನು ಸಾಧಿಸಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು. ಇವತ್ತಿನ ದಿವಸ ಬ್ಯಾಂಕ್ ರಾಷ್ಟ್ರೀಕರಣ ಮಾಡಿದಮೇಲೆ ಜನರ ಜೀವನ ಮಟ್ಟವನ್ನು ಉತ್ತಮಗೊಳಿಸುವುದಕ್ಕೆ ಅವಕಾಶವಾಗುತ್ತಾ ಇರಲಿಲ್ಲ. 6 ವರ್ಷಗಳ ಹಿಂದೆ ಹಳ್ಳಿಗಳಲ್ಲಿ ಭಾವಿಯನ್ನು ತೆಗೆಯುವುದಕ್ಕೆ, ಕುರಿ ಸಾಕಾಣಿಕೆಗೆ ಮತ್ತು ರೈತನ ಅಭಿವೃದ್ಧಿ ಕಾರ್ಯಗಳಿಗಾಗಿ ನ್ಯಾಷನಲ್ ಬ್ಯಾಂಕ್‌ಗಳನ್ನು ಸಾಲ ಕೇಳಲು ನಮ್ಮ ಕಾರ್ಯಕ್ರಮದಲ್ಲಿ ಇದೆಲ್ಲಾ ಸೇರಿಲ್ಲ. ನಾವು ಕೇವಲ ಡಿಪಾಸಿಟ್ ಇಟ್ಟುಕೊಂಡು ಕಡಿಮೆ ಬಡ್ಡಿ ದರದ ಮೇಲೆ ಕೈಗಾರಿಕೋದ್ಯಮಿಗಳಿಗೆ ಸಾಲವನ್ನು ಕೊಡುತ್ತೇವೆಯೇ ಹೊರತು ಸಾಮಾನ್ಯ ಜನಕ್ಕೆ ಸಾಲವನ್ನು ಕೊಡುವುದಿಲ್ಲವೆಂದು ಹೇಳಿದರು. ಈ ಬ್ಯಾಂಕ ರಾಷ್ಟ್ರೀಕರಣ ಆದಮೇಲೆ ನಮ್ಮಲ್ಲಿ ನೀರಾವರಿ ಭಾವಿಗಳನ್ನು ತೆಗೆಯುವುದಕ್ಕೆ ಕುರಿ ಸಾಕಾಣಿಕೆಗೆ ಯಥೇಚ್ಛವಾಗಿ ಸಾಲವನ್ನು ಕೊಡುತ್ತಿದ್ದಾರೆ. ಈ ಒಬ್ಬ ಮೋಚಿ ಅವನಿಗೆ [illegible]0 ರೂಪಾಯಿ ಸಾಲ ಕೊಡುವುದರಿಂದ ಹಿಡಿದು ದೊಡ್ಡ ದೊಡ್ಡ ಫ್ಯಾಕ್ಟರಿಗಳವರಿಗೂ ಸಾಲ ದೊರಕುತ್ತಿದೆ. ನಮ್ಮ ಸ್ನೇಹಿತರು 3 ಜನಕ್ಕೆ ಅಥವಾ 6

ಜನಕ್ಕೆ ಮನೆಗಳನ್ನು ಕಟ್ಟಿಕೊಟ್ಟು ಅದನ್ನೇ ಬೃಹದಾಕಾರವಾಗಿ ಮಾಡಿರುವಂತೆ ಹೇಳುತ್ತಿದ್ದಾರೆ ಎಂದು ಹೇಳಿದರು. ಯಾವ ಸರ್ಕಾರವೇ ಆಗಲೀ ಪ್ರಗತಿಯನ್ನು ಸಾಧಿಸಿರುವ ಅಮೇರಿಕಾ, ರಷ್ಯಾ ದೇಶಗಳನ್ನು ತೆಗೆದುಕೊಳ್ಳುವುದಾದರೆ ಅವರು ಪಂಚವಾರ್ಷಿಕ ಯೋಜನೆಗಳನ್ನು ಹಾಕಿಕೊಂಡು ಕಾರ್ಯಸಾಧನೆ ಮಾಡುತ್ತಿದ್ದಾರೆ ದೇಶವನ್ನು ಮುಂದಕ್ಕೆ ತರುತ್ತಿದ್ದಾರೆ. ನಮ್ಮ ಸ್ನೇಹಿತರು 3, 6 ಜನಕ್ಕೆ ಮನೆಗಳನ್ನು ಕಟ್ಟಿಕೊಟ್ಟಿದ್ದಾರೆ ಎಂದು ಹೇಳಿದ ಮಾತಿನಲ್ಲಿ ಅರ್ಥವಿಲ್ಲವೆಂದು ನಾನು ಹೇಳುತ್ತೇನೆ. ನಾವು ಪಂಚವಾರ್ಷಿಕ ಯೋಜನೆಗಳನ್ನು ಹಾಕಿಕೊಂಡು ಆರ್ಥಿಕ ಸ್ಥಿತಿಯನ್ನು ನೋಡಿಕೊಂಡು ನಮ್ಮ ದೇಶದ ಕಾರ್ಯಕ್ರಮಗಳನ್ನು ಸಾಧಿಸಬೇಕೇ ಹೊರತು ಒಂದೇ ವರ್ಷದಲ್ಲಿ ಎಲ್ಲರನ್ನೂ ಸಾಹುಕಾರರನ್ನಾಗಿ ಮಾಡಲು ಸಾಧ್ಯವಾಗುವುದಿಲ್ಲ. ಅಲ್ಲಾವುದ್ದೀನನ ಅದ್ಭುತ ದೀಪದಂತೆ ಏನಾದರೂ ಮಾಡಿಕೊಂಡರೆ ಇದು ಸಾಧ್ಯವೇ ಹೊರತು ಮಾನವನ ಕೈಯಲ್ಲಿ ಇದು ಸಾಧ್ಯವಾಗುವುದಿಲ್ಲ ಎಂದು ಹೇಳುತ್ತೇನೆ. ನಮ್ಮ ಸ್ನೇಹಿತರು ಅಂಕಿ ಅಂಶಗಳ ಸಂಖ್ಯೆ ಜಾಸ್ತಿಯಾಗುತ್ತಿದೆ ಎಂದು ಹೇಳಿದರು. ನಮ್ಮ ರಾಷ್ಟ್ರ ಕವಿ ಶ್ರೀಮಾನ್ ಕೆ. ವಿ. ಪುಟ್ಟಪ್ಪನವರು ''ಮಕ್ಕಳಿವರೇ ನಮ್ಮ ಮಕ್ಕಳಿವರೇನಮ್ಮ 33 ಕೋಟಿ'' ಎಂದು ಒಂದು ಪದ್ಯವನ್ನು ಬರೆದಿದ್ದಾರೆ. ನಮ್ಮ ರಾಷ್ಟ್ರ ಸ್ವಾತಂತ್ರವನ್ನು ಗಳಿಸಿದ ಮೇಲೆ ಈ 30 ವರ್ಷಗಳಲ್ಲಿ ಜನಸಂಖ್ಯೆ 67 ಕೋಟಿ ಆಗಿರತಕ್ಕಂಥ ಲೆಕ್ಕ ನಮ್ಮ ಮುಂದೆ ಇದೆ ಈ ಜನಸಂಖ್ಯೆ ಏರಿದಷ್ಟೂ ಈ ಅಂಕಿಅಂಶಗಳು ಜಾಸ್ತಿಯಾಗುತ್ತದೆಯೇ ಹೊರತು ಕಡಿಮೆಯಾಗುವುದಿಲ್ಲ. ಇವತ್ತಿನ ದಿವಸ ನಾವು ವಿದ್ಯಾಭ್ಯಾಸ ಕ್ಷೇತ್ರದಲ್ಲಿ ನೋಡುವುದಾದರೆ ಎಲ್ಲಾ ಹಳ್ಳಿಗಳಲ್ಲೂ ಪ್ರಾಥಮಿಕ ಶಾಲೆಗಳು ಇವೆ. ಎಲ್ಲಾ ಹಳ್ಳಿಗಳಲ್ಲೂ ಪ್ರಾಥಮಿಕ ಶಾಲಾ ಕಟ್ಟಡಗಳನ್ನು ಕಟ್ಟಿದ್ದಾರೆ. ಎಲ್ಲಾ ಹಳ್ಳಿಗಳಲ್ಲೂ ರಸ್ತೆಗಳನ್ನು ಮಾಡಿದ್ದಾರೆ. ಇವತ್ತಿನ ದಿವಸ ನಮ್ಮಲ್ಲಿ ಕುಡಿಯುವ ನೀರಿನ ಅಭಾವ ಇದೆ. ಇದನ್ನು ನಿವಾರಿಸಬೇಕೆಂದು ನಮ್ಮ ರಾಜ್ಯ ಸರ್ಕಾರದವರು ಹೈಪವರ್ ರಿಗ್‌ಗಳನ್ನು ಕೊಟ್ಟು ನೀರಾವರಿ ಭಾವಿಗಳನ್ನು ತೋಡಿಸಿದ್ದಾರೆ. 3—4 ವರ್ಷವಾದರೂ ನೀರನ್ನು ಒದಗಿಸುವುದಕ್ಕೆ ಸಾಧ್ಯವಿಲ್ಲದೇ ಇರತಕ್ಕಂಥ ಹಳ್ಳಿಗಳಲ್ಲಿ ಬೆಳಿಗ್ಗೆಯಿಂದ ಸಾಯಂಕಾಲ 4 ಗಂಟೆವರೆಗೆ ಕೆಲಸ ಮಾಡಿಸಿ ಭಾವಿಗಳನ್ನು ತೆಗೆಸಿ ಕುಡಿಯುವ ನೀರಿನ ಸೌಲಭ್ಯವನ್ನು ಒದಗಿಸಿದ್ದಾರೆ. ಇನ್ನೂ ಅನೇಕ ಹಳ್ಳಿಗಳಿಗೆ ಈ ಕುಡಿಯುವ ನೀರಿನ ಭಾವಿಗಳನ್ನು ಒದಗಿಸಬೇಕಾಗಿದೆ. ಇದನ್ನು ಕೆಲವೇ ದಿವಸಗಳಲ್ಲಿ ಒದಗಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಇನ್ನು ಬೃಹದಾಕಾರವಾಗಿರತಕ್ಕಂಥ ಯೋಜನೆಗಳ ಬಗ್ಗೆ ನಮ್ಮ ವಿರೋಧ ಪಕ್ಷದವರು ಮೆಚ್ಚಿಗೆಯನ್ನು ವ್ಯಕ್ತಪಡಿಸಬೇಕಾಗಿತ್ತು. ವಿರೋಧಪಕ್ಷದವರು ನಮ್ಮಲ್ಲಿರತಕ್ಕಂಥ ದೋಶವನ್ನು ಮಾತ್ರ ಎತ್ತಿ ಹಿಡಿಯಬೇಕೆಂದು ಆ ಒಂದು ದೃಷ್ಟಿಯಿಂದ ಮಾತ್ರ ಹೇಳುತ್ತಿದ್ದಾರೆ ಅವರು ಈ ಬಗ್ಗೆ ಒಂದು ಒಳ್ಳೆಯ ಮಾತನ್ನೂ ಸಹ ಹೇಳಿರಬಹುದು ಎಂದು ನಂಬಿಕೊಂಡಿದ್ದೇನೆ. ಈ ಫ್ಯಾಮಿಲಿ ಪ್ಲಾನಿಂಗ್ ವಿಷಯವನ್ನು ಚುನಾವಣಾ ಪ್ರಚಾರಕ್ಕೆ ತೆಗೆದುಕೊಂಡು ಬಂದರು. ಇದರಲ್ಲಿ ಕಾರ್ಯಲೋಪವಿದೆಯೆಂದು ಆ ಕಡೆ ಜವಾಬ್ದಾರಿ ಹೊತ್ತಿರತಕ್ಕಂಥ ಜನ ಹೇಳಿದರು. ಇವತ್ತಿನ ದಿವಸ ರಾಜ್ಯದಲ್ಲಿ ಪರಿಸ್ಥಿತಿ ಹೇಗಿದೆ ಎಂದರೆ ಈ ಜನಸಂಖ್ಯೆ ಬೃಹದಾಕಾರವಾಗಿ ಬೆಳೆಯುತ್ತಿದೆ. ಈ ಜನಸಂಖ್ಯೆ ಇದೇ ರೀತಿಯಲ್ಲಿ ಬೆಳೆಯುತ್ತಾ ಹೋದರೆ ಮನುಷ್ಯ ಮನುಷ್ಯನನ್ನು ತಿನ್ನತಕ್ಕಂಥ ಕಾಲ ಒಂದು ಬರುತ್ತದೆ. ಇನ್ನು ಮುಂದೆ ನಿಲ್ಲುವುದಕ್ಕೆ ಮಲಗುವುದಕ್ಕೆ ಜಾಗ ಇರುವುದಿಲ್ಲ. ಈ ಫ್ಯಾಮಿಲಿ ಪ್ಲಾನಿಂಗ್ ಅನ್ನು ಜಾರಿಗೆ ತರವೇ ಹೋದರೆ ದೇಶದ ಪ್ರಗತಿಯನ್ನು ಸಾಧಿಸುವುದಕ್ಕೆ ಆಗುವುದಿಲ್ಲ. ಮುಂದೆ ಬರತಕ್ಕಂಥ ಕಷ್ಟಗಳನ್ನು ನಿವಾರಣೆ ಮಾಡುವುದಕ್ಕಾಗುವುದಿಲ್ಲ. ಇವತ್ತು ಜನತಾ ಸರ್ಕಾರ ಇರಬಹುದು ನಾಳೆ ಕಾಂಗ್ರೆಸ್ ಸರ್ಕಾರ ಬರಬಹುದು, ನಾಳೆ ದೇವತೆಗಳೇ ಬಂದರೂ ಇದನ್ನು ನಿವಾರಣೆ ಮಾಡುವುದಕ್ಕೆ ಆಗುವುದಿಲ್ಲ. ಆಯಾ ಕಾಲಕ್ಕನುಸಾರವಾಗಿ, ಪ್ರಗತಿಗನುಸಾರವಾಗಿ ಈ ಫ್ಯಾಮಿಲಿ ಪ್ಲಾನಿಂಗ್ ಅನ್ನು ಅಳವಡಿಸಿಕೊಳ್ಳದೇ ಹೋದರೆ ನಿಜವಾಗಿಯೂ ನಮ್ಮ ದೇಶದ ಪ್ರಗತಿಯನ್ನು ಸಾಧಿಸುವುದಕ್ಕಾಗುವುದಿಲ್ಲವೆಂದು ಹೇಳುತ್ತೇನೆ. ಇವತ್ತು ವ್ಯವಸಾಯ ಕ್ಷೇತ್ರದಲ್ಲಿ ಆರೋಗ್ಯ ಕ್ಷೇತ್ರದಲ್ಲಿ, ವಿದ್ಯಾಭ್ಯಾಸ ಕ್ಷೇತ್ರದಲ್ಲಿ, ಕೈಗಾರಿಕಾ ಕ್ಷೇತ್ರದಲ್ಲಿ ಅಂಕಿಅಂಶಗಳ ಪ್ರಕಾರ ನಾವು ಪ್ರಗತಿಯನ್ನು ಸಾಧಿಸಿದ್ದೇವೆ ಇದೆಲ್ಲವನ್ನೂ ಜನತೆಯ ಮುಂದೆ ಹೇಳದೇ ಹೋದರೆ ಅವರಿಗೆ ಅಪಚಾರ ಮಾಡಿದಂತಾಗುತ್ತದೆ. ನಾವು ಎಂದಿಗೂ ಸುಳ್ಳು ವಿಚಾರಗಳನ್ನು ಹೇಳುವುದಿಲ್ಲ. ಒಳ್ಳೆಯದನ್ನು ಬಿಟ್ಟು ಕೆಟ್ಟದ್ದನ್ನು ಹೇಳತಕ್ಕಂಥಾದ್ದು ಒಂದು ನೀತಿ ಅಗಬಾರದು. ಸುಮಾರು 30 ವರ್ಷಗಳ ಕಾಂಗ್ರೆಸ್ ಆಡಳಿತದಲ್ಲಿ ಶ್ರೀಮತಿ ಇಂದಿರಾಗಾಂಧಿಯವರು ಈ 6 ವರ್ಷ

ಗಳಲ್ಲಿ ನಮ್ಮ ದೇಶದ ಪ್ರಗತಿಯನ್ನು ಸಾಧನೆ ಮಾಡಿ ಬಡವರಿಗೆ ಒಂದು ಆಶಾಕಿರಣ ಹುಟ್ಟುವಂತೆ
ಮಾಡಿದ್ದಾರೆ. ದಕ್ಷಿಣದ ರಾಜ್ಯಗಳಲ್ಲಿ ಅನೇಕ ಯೋಜನೆಗಳನ್ನು ಕಾರ್ಯಗತ ಮಾಡಿದ್ದರಿಂದ
ಕಾಂಗ್ರೆಸ್ ಪಕ್ಷದವರು ಇವತ್ತಿನದಿವಸ ರಾಜ್ಯದಲ್ಲಿ ಜಯಶೀಲರಾಗಿದ್ದಾರೆ. ಇದರಲ್ಲಿ ಮೋಸ
ದಗಲಬಾಜಿತನ ಏನೂ ನಡೆದಿಲ್ಲ. ಪಾಕಿಸ್ಥಾನದಲ್ಲಿ ಜನಗಳಿಗೆ ಬೆದರಿಕೆಯನ್ನು ಹಾಕಿ, ಅವರನ್ನು
ಎದುರಿಸಿದರು ಎಂದು ಪತ್ರಿಕೆಗಳಲ್ಲಿ ಓದಿದ್ದೇವೆ. ಆ ಒಂದು ಭಯ ಭೀತಿ ನಮ್ಮ ದೇಶದಲ್ಲಿ ಉಂಟಾ
ಗಿಲ್ಲ. ಇವತ್ತು ಈ ತುರ್ತುಪರಿಸ್ಥಿತಿಯ ಬಗ್ಗೆ ಹೇಳಬೇಕೆಂದರೆ ಈ ತುರ್ತು ಪರಿಸ್ಥಿತಿಯಿಂದ
ಬಹಳ ಕೆಟ್ಟದ್ದಾಗಿದೆ ಎಂದು ಯಾವ ಜನ ಹೇಳುತ್ತಿದ್ದರೋ ಆ ಜನರೇ ಈ ಎಮರ್ಜೆನ್ಸಿಯಿಂದ
ಒಳ್ಳೆಯದಾಗಿದೆ ಎಂದು ಹೇಳುವಂತ ಮಾತನ್ನು ಕೇಳಿದ್ದೇನೆ. ಕೇಂದ್ರದಲ್ಲಿ ಜನತಾ ಸರ್ಕಾರ
ಅಧಿಕಾರಕ್ಕೆ ಬಂದರೂ ಇಲ್ಲಿ ನಡೆಯುತ್ತಾ ಇರತಕ್ಕಂಥ ಸ್ಟ್ರೈಕ್‌ಗಳು ನಡೆಯುತ್ತಲೇ ಇವೆ.
ಒಬ್ಬ ರಿಕ್ಷಾದವನು ''ಎಮರ್ಜೆನ್ಸಿ ಕಾಲದಲ್ಲಿ ನಮ್ಮ ವಾಹನಗಳಿಗೆ ಯಾವ ರೀತಿಯ ಅಪಾಯ
ಪರಿಸ್ಥಿತಿಗಳೂ ಸಂಭವಿಸುತ್ತಾ ಇರಲಿಲ್ಲ ಶಾಂತ ವಾತಾವರಣ ಇತ್ತು. ಆದರೆ ಈ ಎಮರ್ಜೆನ್ಸಿ
ಹೋದ ಮೇಲೆ ಆಗಿರತಕ್ಕಂಥ ಪರಿಸ್ಥಿತಿಯನ್ನು ನೋಡುವುದಾದರೆ ನಾವು ಬೆಳಗೆ ಮನೆಯಿಂದ
ಬಂದರೆ ಸಾಯಂಕಾಲ ಮನೆಗೆ ಹೋಗುತ್ತೇವೆಯೋ ಇಲ್ಲವೋ ಎಂಬ ಶಂಕೆ ನಮಗೆ ಇಲ್ಲದೇ ಇಲ್ಲ''.
ಎಂದು ಹೇಳಿರತಕ್ಕಂಥ ಮಾತನ್ನು ನಾನು ಕೇಳಿದ್ದೇನೆ. ಇವತ್ತು ರಾಜ್ಯದಲ್ಲಿ ಇಂತಹ ಪರಿಸ್ಥಿತಿ
ಬಂದಿದೆ. ಹಳ್ಳಿಗಳಲ್ಲಿ ರಕ್ತಪಾತಗಳಾಗುತ್ತಿವೆ. ಹಳ್ಳಿಗಳಲ್ಲಿ ಕೆಲವರು ಹೇಳುತ್ತಿದ್ದಾರೆ ಈಗ
ನಮ್ಮ ಸರ್ಕಾರ ಬಂದಿದೆ, ನಾವು ಎಲ್ಲರ ಜಮೀನನ್ನು ವಾಪಸ್ ಕೊಡಿಸುತ್ತೇವೆ, ಲ್ಯಾಂಡ್ ಟ್ರಿಬ್ಯು
ನಲ್‌ನಲ್ಲಿ ನಮ್ಮ ಸ್ನೇಹಿತರೇ ಇದ್ದಾರೆ, ಜಮೀನಿನ ಮೇಲಿನ ಎಲ್ಲಾ ಹಕ್ಕುಗಳನ್ನು ವಾಪಸ್ ತಂದು
ಕೊಡುತ್ತೇವೆ ಎಂದು ಹೇಳುತ್ತಿದ್ದಾರೆ. ಅಲ್ಲದೆ ಜಮೀನು ಮಾಲೀಕರು ಜಮೀನು ವಾಪಸ್ ಕೊಡಿ
ಸುತ್ತೇವೆಂದು ಹೇಳಿ ಗೇಣಿದಾರರ ಮೇಲೆ ಹಲ್ಲೆ ಮಾಡಿ ಅವರಿಗೆ ಹಿಂಸೆ ಕೊಟ್ಟು ನನ್ನ ಜಮೀನನ್ನು
ನಾನೇ ಉಳುತ್ತೇನೆ ಎನ್ನುವ ಮಟ್ಟಕ್ಕೆ ಹೋಗಿದ್ದಾರೆ. ಇದರ ಬಗ್ಗೆ ಮಾನ್ಯ ಮಂತ್ರಿಯವರು
ಸ್ಟೇಟ್‌ಮೆಂಟ್ ಕೊಡದೇ ಹೋದರೆ ಹಳ್ಳಿಗಳಲ್ಲಿ ಜನರು ಬಹಳ ತೊಂದರೆಯನ್ನು ಎದುರಿಸ
ಬೇಕಾಗುತ್ತದೆ. ಇದರ ಬಗ್ಗೆ ತಪ್ಪು ಹೇಳಿಕೆಗಳನ್ನು ಕೊಡಬಾರದು. ಆಡಳಿತ ವ್ಯವಸ್ಥೆಗೆ ಅನು
ಕೂಲವಾಗುವ ರೀತಿಯಲ್ಲಿ ಹೇಳಿಕೆಗಳನ್ನು ಕೊಡಬೇಕಾಗಿದೆ. ನಾವು ಕಂಡಮಟ್ಟಿಗೆ ದೇಶದಲ್ಲಿ
ಎಮರ್ಜೆನ್ಸಿಯನ್ನು ತಂದಿದ್ದರ ಕಾರಣ ಇಷ್ಟೆ, ವಿದ್ಯಾರ್ಥಿಗಳು ಸ್ಟ್ರೈಕ್ ಮಾಡುವುದು ನಿಲ್ಲ
ಬೇಕು, ಫ್ಯಾಕ್ಟರಿಗಳಲ್ಲಿ ಕಾರ್ಮಿಕರು ಸ್ಟ್ರೈಕ್ ಮಾಡುವುದು ನಿಲ್ಲಬೇಕು, ಕೆಲವು ಕಾಲ ಜನತೆ
ನಿಶ್ಚಿಂತೆಯಿಂದ, ನೆಮ್ಮದಿಯಿಂದ ದೇಶದಲ್ಲಿ ಬಾಳಲಿ ಎಂಬ ಸದುದ್ದೇಶದಿಂದ ಈ ಎಮರ್ಜೆನ್ಸಿ
ಯನ್ನು ತಂದರೇ ಹೊರತು ಇದರಿಂದ ಜನರ ಶೋಷಣೆ ಮಾಡಬೇಕು, ಜನರನ್ನು ಜೈಲಿಗೆ ಹಾಕ
ಬೇಕು ಎಂಬ ದುರುದ್ದೇಶದಿಂದ ತಂದದ್ದು ಅಲ್ಲವೆಂದು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ.
ಇವತ್ತಿನ ದಿವಸ ಈ ಕಾಫಿಕೋಸಾ, ಮೀಸಾ ಕಾನೂನುಗಳನ್ನು ಸಾಮಾನ್ಯ ಜನತೆಗೆ ತಂದದ್ದು
ಅಲ್ಲ. ದೇಶದ್ರೋಹದಂತಹ ದೇಶದ್ರೋಹಿಗಳು, ಬಂಡಾಯಗೋರರು ತೆರಿಗೆಗಳ್ಳರಿಗೆ ಕೊಡತಕ್ಕಂಥ
ಶಿಕ್ಷೆ ಇದು. ಇವರಿಗೋಸ್ಕರ ತಂದಂತಹ ಕಾನೂನನ್ನು ಚುನಾವಣಾ ಪ್ರಚಾರಕ್ಕಾಗಿ ಉಪ
ಯೋಗಿಸಿಕೊಂಡು ಜನತೆಯಿಂದ ಓಟನ್ನು ಗಳಿಸುವುದಕ್ಕೆ ಅವಕಾಶವನ್ನು ಮಾಡಿಕೊಂಡರು.
ಇದು ಹೇಗಾಗಿದೆ ಎಂದರೆ ಮಳೆಗಾಲದಲ್ಲಿ ಹೊಳೆಯಲ್ಲಿ ಹೆಚ್ಚು ನೀರು ಬಂದು ಒಂದು ನರಿ ಕೊಚ್ಚಿ
ಕೊಂಡು ಹೋಗುತ್ತಿತ್ತು. ಆ ನರಿ 'ಪ್ರಪಂಚವೇ ಮುಳುಗಿ ಹೋಯಿತು' ಎಂದು ಕೂಗಿದಾಗ
ಪಕ್ಕದಲ್ಲೇ ಹೋಗುತ್ತಿದ್ದ ಒಬ್ಬನು ಆ ನರಿಯನ್ನು ಎಳೆತಂದು ದಡಕ್ಕೆ ಬಿಟ್ಟಮೇಲೆ ನರಿಯನ್ನು
ಕುರಿತು ಅವನು 'ಎಲ್ಲಪ್ಪ, ಪ್ರಪಂಚ ಮುಳುಗಿಹೋಯಿತು' ಎಂದು ಕೇಳಲು ಆಗ ನರಿ ಅಯ್ಯೋ
ಮನುಷ್ಯ, ನಾನೇ ಮುಳುಗಿ ಹೋದ ಮೇಲೆ ಈ ಪ್ರಪಂಚ ಇದ್ದರೇನು, ಬಿಟ್ಟರೇನು' ಎಂದು
ಹೇಳಿತು. ಈ ಒಂದು ಪರಿಸ್ಥಿತಿಯಾಯಿತು. ಯಾರೋ ಕೆಲವರು ಈ ಅಧಿಕಾರ ಸ್ಥಾನವನ್ನು
ಭಂಗ ಮಾಡುವುದಕ್ಕಾಗಿ ಈ ಮೀಸಾ ಕಾನೂನನ್ನು ದೊಡ್ಡದಾಗಿ ಮಾಡಿಕೊಂಡರು. ಆದರೆ
ನಾನು ಹೇಳುತ್ತೇನೆ ಕರ್ನಾಟಕ ರಾಜ್ಯದಲ್ಲಿ ಸಾಮಾನ್ಯ ಜನತೆಗಾಗಲೀ, ಸಾಮಾನ್ಯ ವರ್ಗ
ಕ್ಕಾಗಲೀ, ಸಾಮಾನ್ಯ ರೈತರಿಗಾಗಲೀ ಮೀಸಾ ಕಾನೂನಿನಿಂದ ಮತ್ತು ಎಮರ್ಜೆನ್ಸಿಯಿಂದ
ಯಾವ ತೊಂದರೆಯನ್ನು ಕೊಟ್ಟಿಲ್ಲ. ಆದ್ದರಿಂದ ಇದನ್ನು ನಾವು ಪ್ರಚೋದನೆ ಮಾಡತಕ್ಕಂಥದ್ದು
ಸರಿಯಲ್ಲ. ತುರ್ತು ಪರಿಸ್ಥಿತಿಯನ್ನು ಯಾವ ರೀತಿ ದುರುದ್ದೇಶಕ್ಕೆ ಉಪಯೋಗಿಸಿದೆ ಎಂಬು
ದನ್ನು ಹೇಳಬೇಕೇ ವಿನಹ ಇಲ್ಲಸಲ್ಲದ್ದನ್ನು ಹೇಳಿ ಸ್ವಾರ್ಥಸಾಧನೆ ಮಾಡಿಕೊಳ್ಳುವುದಕ್ಕೆ ಜನ

ತೆಯ ಮನಸ್ಸನ್ನು ಕೆಡಿಸುವುದು ಸರಿಯಲ್ಲ. ಯಾವ ಕಾನೂನಿನಿಂದಲೂ ದೇಶಕ್ಕೆ ಅಶಾಂತಿ ಬಂದಿಲ್ಲ. ಕಾಲಾವಕಾಶ ಕಡಿಮೆ ಇರುವುದರಿಂದ ಹೆಚ್ಚಿಗೆ ಮಾತನಾಡಲು ಸಾಧ್ಯವಾಗಲಿಲ್ಲ ಇಷ್ಟು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ಹೃತ್ಪೂರ್ವಕವಾದ ವಂದನೆಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಸ್. ವಿ. ನಾಯಕ್ (ಕುಮಟಾ).—ಮಾನ್ಯ ಸಭಾಧ್ಯಕ್ಷಿಣಿಯರೆ, ಮಾನ್ಯ ಬಸವ ಲಿಂಗಪ್ಪನವರು ಮಂಡಿಸಿರುವ ರಾಜ್ಯಪಾಲರ ಭಾಷಣಕ್ಕೆ ವಂದಿಸುವ ನಿರ್ಣಯವನ್ನು ಬೆಂಬಲಿಸಿ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟ ತಮಗೆ ಮೊಟ್ಟಮೊದಲು ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ವಿರೋಧಪಕ್ಷದ ಮುಖಂಡರಲ್ಲಿ ಮಾನ್ಯ ದೇವೇಗೌಡರಾದಿಯಾಗಿ ಹಲವರು ಚುನಾವಣೆ ಸಂದರ್ಭದಲ್ಲಿ ಬೀಸಿದಂಥ ಗಾಳಿ ಪ್ರವಾಹದ ಬಗ್ಗೆ ಭಾವಾವೇಶದಿಂದ, ಭಾವೋದ್ವೇಗದಿಂದ ಮಾತನಾಡಿದ್ದಾರೆ. ಉತ್ತರ ಭಾರತದಲ್ಲಿ ಬೀಸಿದ ಈ ಗಾಳಿ ಜನತಾ ಗಾಳಿಯೋ, ಸಿ.ಎಫ಼ ಡಿ ಗಾಳಿಯೊ ಎಂಬ ಮತವನ್ನು ಯಾರೂ ಸ್ಪಷ್ಟ ಮಾಡಿದಂತೆ ಕಾಣಿಸಲಿಲ್ಲ. ಹೇಗಿದ್ದರೂ ಅಲ್ಲಿ ಬೀಸಿದ ಗಾಳಿ ವಿಂಧ್ಯ ಪರ್ವತವನ್ನು ದಾಟಿ ಬರಲಿಲ್ಲ ಎಂಬ ಅಂಶವನ್ನು ಗಮನಿಸಬೇಕಾಗುತ್ತದೆ. ಪೌರಾಣಿಕ ಕಾಲದಿಂದ ಇತಿಹಾಸದ ಪುಟವನ್ನು ತೆಗೆದು ನೋಡುವುದಾದರೆ ದಕ್ಷಿಣ ಭಾರತಕ್ಕೆ ಬಂದ ಮೊದಲನೆ ಉತ್ತರ ಭಾರತೀಯ ಅಗಸ್ತ್ಯ ಎಂದು ನಾವು ಕೇಳಿದ್ದೇವೆ. ಅಲ್ಲಿಂದ ಇಲ್ಲಿಯವರೆಗೆ ಇತಿಹಾಸದ ಪುಟಗಳನ್ನು ತೆರೆದು ನೋಡುವುದಾದರೆ ಅದರಲ್ಲಿ ಒಂದು ಅಂಶವನ್ನು ಗಮನಿಸಬಹುದು, ದಕ್ಷಿಣ ಭಾರತದವರು ಎಷ್ಟೇ ಬಲಶಾಲಿಯಾದರೂ ಕೂಡ, ಹನುಮಂತ ಎಷ್ಟೇ ಬಲಶಾಲಿಯಾದರೂ ಕೂಡ ರಾಮನ ಭಂಟ ಎಂದು ಅವನನ್ನು ಪರಿಗಣಿಸುತ್ತೇವೆಯೇ ಹೊರತು ಅವನಿಗೆ ಯಾವ ಸ್ವಾತಂತ್ರ್ಯವೂ ಇಲ್ಲ. ದುಷ್ಟ ದಂಡನೆ ಶಿಷ್ಟ ಪರಿಪಾಲನೆಗೆ ಹುಟ್ಟಿದ ಎಲ್ಲ ಅವತಾರ ಪುರುಷರೂ ಉತ್ತರ ಭಾರತದಲ್ಲಿ ಹುಟ್ಟಿದುದು ಎಂಬುದನ್ನು ಗಮನಿಸಿದರೆ ಶಾಶ್ವತ ಸ್ಥಾನಮಾನ ದಕ್ಷಿಣ ಭಾರತೀಯರಿಗೆ ಇಲ್ಲ ಎಂದು ತಿಳಿದುಕೊಂಡರೆ ತಪ್ಪಾಗಬಹುದು. ನಮ್ಮ ಜನತಾ ಪಕ್ಷದ ನಾಯಕರು ಮಾತನಾಡುವಾಗ ಮಹಾ ಪ್ರಜಾಪ್ರಭುತ್ವವಾದಿ ರೀತಿಯಲ್ಲಿ ಮಾತನಾಡಿದರೂ ನನಗಾದರೂ ಅನ್ನಿಸುತ್ತದೆ ಪ್ರಜಾ ಪ್ರಭುತ್ವ ರೀತಿಯಲ್ಲಿ ತಮ್ಮ ಮುಖಂಡರನ್ನು ಆರಿಸುವುದಕ್ಕೆ ಆಗದೇ ಇದ್ದ ಇವರು ಪ್ರಜಾಪ್ರಭುತ್ವ ರೀತಿಯಲ್ಲಿ ಮಾತನಾಡುವುದು ಆಶ್ಚರ್ಯ ಎಂದು ಅನ್ನಿಸುತ್ತದೆ. ಮಾನ್ಯ ಅಧ್ಯಕ್ಷಿಣಿಯರೆ, ಪ್ರಜಾವಾಣಿ ಪತ್ರಿಕೆಯಲ್ಲಿ ಒಂದು ವ್ಯಂಗ ಚಿತ್ರ ಬಂದಿತ್ತು. ಅದರಲ್ಲಿ ಶ್ರೀಮಾನ್ ಜಯಪ್ರಕಾಶ್ ನಾರಾಯಣ್ ಅವರು ಒಂದು ಕಡೆ ಮಲಗಿದ್ದಾರೆ, ಅವರ ತಲೆ ಹತ್ತಿರ ಇಂದಿನ ಪ್ರಧಾನಿ ಮುರಾರ್ಜಿ ದೇಸಾಯಿ ಅವರು ಗಾಂಭೀರ್ಯದಿಂದ ಕುಳಿತುಕೊಂಡಿದ್ದಾರೆ, ಕಾಲು ಬುಡದಲ್ಲಿ ಧೀನರಾಗಿ ನಮ್ಮ ಸಿ ಎಫ್. ಡಿ. ಅಧ್ಯಕ್ಷರಾದ ಜಗಜ್ಜೀವನರಾಂ ಅವರು ಕುಳಿತುಕೊಂಡಿದ್ದಾರೆ, ಈ ಚಿತ್ರವನ್ನು ಮಾನ್ಯ ಸದಸ್ಯರಾದ ಕೋಣಂದೂರು ಲಿಂಗಪ್ಪನವರು ನೋಡಿರಬಹುದು.

ಶ್ರೀ ಕೋಣಂದೂರು ಲಿಂಗಪ್ಪ.—ಅದನ್ನೂ ನೋಡಿದ್ದೇನೆ. ಆಮೇಲೆ ನೇಗಿಲು ಹೊತ್ತ ರೈತನನ್ನು ನೋಡಿ ಹಸು ಒಂದು ಕಡೆ, ಕರು ಒಂದು ಕಡೆ ಬೆದರಿ ಓಡಿಹೋಗುತ್ತಾ ಇರುವ ಚಿತ್ರವನ್ನೂ ನೋಡಿದ್ದೇನೆ.

(ನಗು)

ಶ್ರೀ ಸಿ. ಚೆನ್ನರೇಗೌಡ.—ಕರು ಬಾಲವನ್ನು ಹಸು ಭದ್ರವಾಗಿ ಹಿಡಿದುಕೊಂಡಿರುವ ಚಿತ್ರವನ್ನೂ ನೋಡಿದ್ದೇವೆ.

ಶ್ರೀ ಎಸ್ ವಿ ನಾಯಕ್.—ಒಂದು ಮಾತನ್ನು ನನ್ನ ಮಿತ್ರರು ಜ್ಞಾಪಕದಲ್ಲಿಟ್ಟುಕೊಳ್ಳಬೇಕು ನಾವು (ಕಾಂಗ್ರೆಸ್) ಅಲ್ಲಿ ಸೋತು ಇಲ್ಲಿ ಗೆದ್ದಿದ್ದೇವೆ, ನೀವು (ವಿರೋಧಪಕ್ಷ) ಇಲ್ಲಿ ಸೋತು ಅಲ್ಲಿ ಗೆದ್ದಿದ್ದೀರಿ.

ಮಾನ್ಯ ಸದಸ್ಯರೊಬ್ಬರು.—ರಾಷ್ಟ್ರಮಟ್ಟದ ಪರ್ಸೆಂಟೇಜ್ ಹೇಳಿ.

ಶ್ರೀ ಎಸ್. ವಿ. ನಾಯಕ್.—ಮಾನ್ಯ ವಿರೋಧಿಪಕ್ಷದ ಮುಖಂಡರು ಮಾತನಾಡಬೇಕಾದರೆ ಇದನ್ನು ಸಂಸತ್ತು ಎಂದು ತಿಳಿದುಕೊಂಡರೋ ಏನೋ ಮಾನ್ಯ ಕೋಣಂದೂರು ಲಿಂಗಪ್ಪನವರು ಮಾತನಾಡುವಾಗ ಕೇಂದ್ರದ ಮಂತ್ರಿಗಳು ಮಾತನಾಡುವ ಹಾಗೆ, ರಾಜ್ ನಾರಾಯಣ್, ಜಾರ್ಜ್ ಫರ್ನಾಂಡಿಸ್ ಮಾತನಾಡುವ ಹಾಗೆ ಮಾತನಾಡುತ್ತಿದ್ದುದನ್ನು ನಾವು ಗಮನಿಸಿದ್ದೇವೆ.

ಶ್ರೀ ಕೋಣಂದೂರು ಲಿಂಗಪ್ಪ.—ನಾನು ಕರ್ನಾಟಕದ ಜಾರ್ಜ್ ಫರ್ನಾಂಡಿಸ್. ರಾಜ ನಾರಾಯಣ್ ಆಗುವುದಿಲ್ಲ ಎಂದು ಭಾವಿಸಿದ್ದೀರಾ?

ಶ್ರೀ ಎಸ್. ಬಿ. ಶಿವಯ್ಯ.—ಕಾದು ನೋಡೋಣ.

ಶ್ರೀ ಎಸ್. ವಿ. ನಾಯಕ್.—ಈ ಕಿಚಡಿ ಪಕ್ಷಕ್ಕೆ ಲೇಬಲ್ ಹಚ್ಚಿ ಸಂಯುಕ್ತ ರಂಗವನ್ನು ಅಸ್ತಿತ್ವಕ್ಕೆ ತಂದು ಚುನಾವಣೆಯಲ್ಲಿ ಜಯಭೇರಿ ಭಾರಿಸಿದರು. ಒಂದು ಮಾತನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಕಾಂಗ್ರೆಸ್ಸಿಗೆ ಚಾರಿತ್ರಿಕ ಹಿನ್ನೆಲೆ ಇದೆ.

ಶ್ರೀ ಕೋಣಂದೂರು ಲಿಂಗಪ್ಪ.—ಯಾವ ಕಾಂಗ್ರೆಸ್ಸಿಗೆ? ಜಗಜೀವನರಾಂ ಅವರು ನಮ್ಮ ಕಾಂಗ್ರೆಸ್ಸೇ ನಿಜವಾದ ಕಾಂಗ್ರೆಸ್ಸು ಎಂದು ಹೇಳುತ್ತಾರೆ, ಇಂದಿರಾಗಾಂಧಿ ಕಾಂಗ್ರೆಸ್ ನಿಜವಾದ ಕಾಂಗ್ರೆಸ್ ಅಲ್ಲ ಎನ್ನುತ್ತಾರೆ.

ಶ್ರೀ ಎಸ್. ವಿ. ನಾಯಕ್.—ನಿಮಗೆ ಗೊತ್ತಿರಬೇಕು, ಈ ಕಾಂಗ್ರೆಸ್ಸಿಗೆ ಮಹಾಮಹಿಮರ ಆಶೀರ್ವಾದ, ಕರ್ಮಯೋಗಿಗಳ ತ್ಯಾಗ ಜೀವನದ ರಕ್ಷಾಕವಚ ಇದೆ ಎಂಬುದನ್ನು ಮರೆಯಬಾರದು.

ಶ್ರೀ ಕೋಣಂದೂರು ಲಿಂಗಪ್ಪ.—ಆಚಾರ್ಯ ಕೃಪಲಾನಿ ಅವರೂ ಕೂಡ ಮಹಾಮಹಿಮರ ಹತ್ತಿರ ಇದ್ದವರು ತಾನೆ?

ಶ್ರೀ ಎಸ್. ವಿ. ನಾಯಕ್.—ನೀವು ಜನತಾಪಕ್ಷವನ್ನು ಕಟ್ಟುವಾಗ ನಿಮ್ಮ ನಿಮ್ಮ ಪಕ್ಷಗಳನ್ನು ವಿಸರ್ಜಿಸಿ ಬಂದಿದ್ದೀರಿ ಎಂಬ ಮಾತನ್ನು ಮರೆಯಬಾರದು. ನೀವು ಜನತೆಗೆ ಮೋಸ ಮಾಡಿ ಬಂದಿದ್ದೀರಿ ಎಂದು ನೇರವಾಗಿ ಹೇಳುತ್ತೇನೆ. ಒಂದು ಕಥೆ ಇದೆ ಏನೆಂದರೆ ಒಂದು ದೋಣಿಯಲ್ಲಿ ಒಬ್ಬ ಹಾವಾಡಿಗ, ಇನ್ನೊಬ್ಬ ಕರಡಿ ಆಡಿಸುವವನು, ಇನ್ನೊಬ್ಬ ಮಂಗನನ್ನು ಕುಣಿಸುವವನು ಹೀಗೆ ಮೂರು ಜನರು ಪ್ರಯಾಣ ಮಾಡುತ್ತಿರುತ್ತಾರೆ. ಹಾವಾಡಿಗ ಪುಂಗಿ ಬಾರಿಸುವುದಕ್ಕೆ ಶುರು ಮಾಡಿದ, ಹಾವು ಈಚೆಗೆ ಬಂತು. ಕರಡಿ ಕುಣಿಯುವುದಕ್ಕೆ ಪ್ರಾರಂಭ ಮಾಡಿತು. ಮಂಗ ಮಂಗನ ಚೇಷ್ಟೆ ಶುರು ಮಾಡಿತು, ಹೀಗೆ ಮೂವರ ಆಟ ಪ್ರಾರಂಭವಾಗಿ ದೋಣಿ ಮುಳುಗುವಂತಹ ಗತಿ ಬಂತು. ಜನತಾಪಕ್ಷ ವಿವಿಧ ಪಕ್ಷಗಳಿಂದ ಕೂಡಿದ ಸಂಯುಕ್ತ ಪಕ್ಷ. ನಿಮ್ಮ ಪರಿಸ್ಥಿತಿ ಹೀಗಾದರೆ ನಿಮ್ಮನ್ನು ನಂಬಿದಂತಹ ರಾಜ್ಯದ ಪ್ರಜೆಗಳ ಗತಿ ಏನು? ದೀನದಲಿತರು, ಹಿಂದುಳಿದ ವರ್ಗದವರು, ಹರಿಜನ ಗಿರಿಜನರು ಮತ್ತು ಶೋಷಣೆಗೆ ಒಳಗಾದವರನ್ನು ಉದ್ಧರಿಸುವುದಕ್ಕೆ ಹೊರಟಂತಹ ಶ್ರೀಮತಿ ಇಂದಿರಾಗಾಂಧಿಯವರನ್ನು ಕೆಳಗಿಳಿಸುವುದೇ ನಿಮ್ಮ ಗುರಿಯಾಗಿತ್ತು. ಹಿಂದೆ ಏಸುವನ್ನು ಶಿಲುಬೆಗೆ ಏರಿಸಿದ ಉದಾಹರಣೆ ನಮ್ಮಲ್ಲಿ ಇದೆ. ಅದೇ ರೀತಿ ಸ್ವಾತಂತ್ರ್ಯಾ ನಂತರ ಮಹಾತ್ಮ ಗಾಂಧಿಯವರ ಕೊಲೆ ಏಕೆ ಆಯಿತೆಂಬುದನ್ನು ನೀವು ಅರ್ಥ ಮಾಡಿಕೊಳ್ಳಬೇಕು. ಆ ಪುಣ್ಯವಂತ ಏನು ಮಾಡಿದ್ದ? ಯುಗಧರ್ಮದ ನೀತಿ ಶಾಂತತೆಯಿಂದ ಅಶಾಂತತೆಯ ಕಡೆ ಸಾಗುತ್ತಿದೆ ಎನ್ನುವುದನ್ನು ತೋರಿಸಿದವರು ಮಹಾತ್ಮನನ್ನು ಕೊಲೆ ಮಾಡಿದ ಜನರು. ಆ ಜನರು ಆ ಕೃತ್ಯಕ್ಕಾಗಿ ಪಶ್ಚಾತ್ತಾಪಪಟ್ಟಿರುವುದರಿಂದ ನಮ್ಮ ದೇಶದ ಪ್ರಜೆಗಳಿಗೆ ಒಂದು ರೀತಿಯ ಸಮಾಧಾನವಾಗಿದೆ. ಅಂಥವರಿಗೆ ಆತ್ಮ ಎಂಬ ಕಲ್ಪನೆ ಏನಾದರು ಇದ್ದಿದ್ದರೆ ಅದಕ್ಕೂ ಶಾಂತಿ ಆಗುತ್ತಿರಲಿಲ್ಲವೆಂದು ಭಾವಿಸಿದ್ದೇನೆ. ಮಾನ್ಯ ದೇವೇಗೌಡರು ನಾನು ವ್ಯಕ್ತಿ ಪೂಜೆ ಮಾಡುವವನಲ್ಲ, ಅದು ನನ್ನ ಜಾಯಮಾನಕ್ಕೆ ಸೇರಿದ್ದಲ್ಲ ಎಂದು ಹೇಳಿದರು. ಶ್ರೀಮಾನ್ ನಿಜಲಿಂಗಪ್ಪನವರ ಕಾಲದಲ್ಲಿ ತುಲಾಭಾರ ಮಾಡಿದರಲ್ಲ ಅದು ವ್ಯಕ್ತಿ ಪೂಜೆಯೋ ಅಥವಾ ಬೇರೆ ಏನು ಎಂದು ನೇರವಾಗಿ ನಮ್ಮ ಪಕ್ಷದಿಂದ ಸವಾಲು ಹಾಕಲಾಯಿತು, ಹಳೆಯ ಹೆಂಡವನ್ನು ತಂದು ಹೊಸ ಬಾಟಲಿಯಲ್ಲಿ ಹಾಕಿದರೆ, ಅದರ ಅರ್ಥ ಏನಾಗುತ್ತದೆ?

5-30 ಪಿ. ಎಂ.

ಶ್ರೀ ಪಿ. ಸಿ. ಶೆಟ್ಟರ್.—ನಿಜಲಿಂಗಪ್ಪನವರ ತುಲಾಭಾರ ಆದ ಹಾಗೆ ಇಂದಿರಾ ಗಾಂಧಿಯವರದ್ದು ಅಲ್ಲ ಎಂದು ನಾನು ಭಾವಿಸುತ್ತೇನೆ.

ಶ್ರೀ ಎಸ್. ವಿ. ನಾಯಕ್ — ಕೆಲವು ಸಾರಿ ಕೆಲವರು ಏನು ಮಾಡುತ್ತಾರೆಂದರೆ ತಮ್ಮ ಸ್ವಾರ್ಥ ಸಾಧನೆಯಾಗದಿದ್ದರೆ ತಮ್ಮ ಪಕ್ಷವನ್ನು ಬಿಟ್ಟು ಬೇರೆ ಪಕ್ಷಕ್ಕೆ ಹೋಗಿ ಸೇರುವಂಥ ಎಷ್ಟೋ ಘಟನೆಗಳು ನಡೆಯುತ್ತವೆ.

ಶ್ರೀ ಬಿ. ಸಿ. ಶೆಟ್ಟರ್.—ನೀವು ಅದನ್ನು ಹೇಳುವುದು ನ್ಯಾಯವಾಗಿದೆ. ಇಂದಿರಾಗಾಂಧಿಯವರು ಸಂಜೀವರೆಡ್ಡಿಯವರು ಅಧ್ಯಕ್ಷತೆ ವಹಿಸುವಾಗ ಏನು ಮಾಡಿದ್ದರು ಅದಕ್ಕೆ ಇದು ಅನ್ವಯಿಸುತ್ತದೆ.

ಶ್ರೀ ಎಸ್. ವಿ ನಾಯಕ್.—ಮೊದಲು ನಿಮ್ಮ ಆತ್ಮ ಸಾಕ್ಷಿಯಾಗಿ ನಿಮ್ಮ ಆತ್ಮಗಳನ್ನು ಸಂಶೋಧನೆ ಮಾಡಿಕೊಳ್ಳಿ. ನಮ್ಮ ನಮ್ಮ ಆತ್ಮ ಸಂಶೋಧನೆಗಳನ್ನು ಮೊದಲು ನಾವು ಮಾಡಿಕೊಳ್ಳಬೇಕು. ಯಾರಾದರೂ ಮಾತನಾಡಬೇಕಾದರೆ ಸ್ವಲ್ಪವಾದರು ಆಲೋಚನೆ ಮಾಡಿ ನೋಡಬೇಕು. ಮಾನ್ಯ ಶೆಟ್ಟರೇ ಆಗಲೀ ಸೂರ್ಯನಾರಾಯಣಗೌಡರಾಗಲಿ ಈ ಪಕ್ಷದಿಂದ ಆರಿಸಿ ಬಂದವರೇ ಹೊರತು ನೇರವಾಗಿ ಗೆದ್ದು ಬಂದವರಲ್ಲ.

ಶ್ರೀ ಕೋಣಂದೂರು ಲಿಂಗಪ್ಪ — ರಾಜೀನಾಮೆ ಕೊಟ್ಟು ಗೆದ್ದು ಬನ್ನಿ ಎಂದು ಹೇಳಬೇಕಿತ್ತು.

ಶ್ರೀ ಎಸ್ ವಿ. ನಾಯಕ್.—ಅದು ಏನೇ ಇರಲಿ. ನೀವು ಎಲ್ಲಿಯವರೆಗೆ ಪೂರ್ವಾಗ್ರಹ ಪೀಡಿತರಾಗಿ ದೋಷ ಎಣಿಸುತ್ತೀರಿ ಎಂಬುದನ್ನು ಜನತೆ ನೋಡುತ್ತಿರುತ್ತದೆ. ನಾವು ಇದ್ದರೆ ಕೇಳಬಹುದು. ಇಲ್ಲವಿದ್ದರೆ ಇಲ್ಲ ಇದರಿಂದ ನಿಮ್ಮ ಮುಂದಿನ ಉದ್ದೇಶ ಏನೆಂಬುದನ್ನು ಅರ್ಥ ಮಾಡಿಕೊಳ್ಳಬಹುದು ನಿಮ್ಮ ಪಕ್ಷಕ್ಕೆ ತತ್ವ, ಸಿದ್ಧಾಂತ, ಪ್ರಣಾಳಿಕೆ ಏನಾದರೂ ಇದೆಯೋ ಎಂದು ಕೇಳುತ್ತೇನೆ?

ಶ್ರೀ ಕೋಣಂದೂರು ಲಿಂಗಪ್ಪ —ನಮ್ಮ ಪಕ್ಷದ ತತ್ವ, ಸಿದ್ಧಾಂತ ಪ್ರಣಾಳಿಕೆಯನ್ನು ತಮ್ಮ ಮೂಲಕ ಅವರಿಗೆ ಕಳುಹಿಸಿಕೊಡುತ್ತೇನೆ.

ಅಧ್ಯಕ್ಷರು.—ಅದನ್ನು ಮಾನ್ಯ ಸದಸ್ಯರೇ ಅವರಿಗೆ ನೇರವಾಗಿ ಕೊಡಬಹುದು. ಅದನ್ನು ನನ್ನ ಮೂಲಕ ಕಳುಹಿಸುವುದು ಬೇಕಾಗಿಲ್ಲ.

ಶ್ರೀ ಎಸ್. ವಿ ನಾಯಕ್.—ಕೆಲವು ದಿವಸಗಳ ಹಿಂದೆ ಕೇಂದ್ರದಲ್ಲಿ ಮಂತ್ರಿಮಂಡಲ ರಚನೆಯಾಗುವಾಗ ನಡೆದ ವಿದ್ಯಮಾನಗಳನ್ನು ನಾವು ಏನಾದರು ಪರಿಶೀಲಿಸುವುದಾದರೆ ಬಹಳ ಪಶ್ಚಾತ್ತಾಪಪಡಬೇಕಾಗುತ್ತದೆ.

ಶ್ರೀ ಕೋಣಂದೂರು ಲಿಂಗಪ್ಪ.—ನಿಮ್ಮ ಈ ಒಂದು ಕಾಂಗ್ರೆಸ್ ಮಂಡಳಿಯಲ್ಲೇ ಹೊಡೆದಾಟವಾಗುವಾಗ ಅದರಲ್ಲೂ ಪ್ರಧಾನ ಮಂತ್ರಿಯವರ ಸ್ಥಾನಕ್ಕೆ ಹೇಗೆ ಆಗಬೇಕು.

ಶ್ರೀ ಕೆ.ಎಚ್. ಪಾಟೀಲ್.—ನಾವು ಅದನ್ನು ಅಲ್ಲಗಳೆಯುವುದಿಲ್ಲ. ತಮ್ಮಂಥವರು ಹೊಸದಾಗಿ ಹುಟ್ಟಿದಾಗ ತೊಂದರೆಯಾಗುವುದು ಸಹಜ

ಶ್ರೀ ಎಸ್. ವಿ. ನಾಯಕ್.—ಯಾವ ರಾಷ್ಟ್ರ ಸ್ತ್ರೀಯನ್ನು ಪೂಜೆ ಮಾಡುತ್ತಿತ್ತೋ ಆ ರಾಷ್ಟ್ರವೇ ಇವತ್ತಿನ ದಿವಸ ಸ್ತ್ರೀಯನ್ನು ಹೀಗಳೆದರೆ ಹೇಗೆ? ಅಂತರ ರಾಷ್ಟ್ರೀಯ ವಲಯದಲ್ಲಿ ನಿಮ್ಮ ವಿದ್ಯಮಾನಗಳನ್ನು ನಾವು ಪರಿಶೀಲಿಸುವುದಾದರೆ, ವಿಶ್ವ ಸಂಸ್ಥೆಯು ಕೂಡ ನಿಮ್ಮ ವಿದ್ಯಮಾನಗಳನ್ನು ಮೆಚ್ಚಿಲ್ಲ. ಮೊನ್ನೆ ತ್ರಿಪುರದಲ್ಲಿ ಮಂತ್ರಿಮಂಡಲವನ್ನು ರಚನೆ ಮಾಡುವಾಗ ಎತ್ತು ಏರಿಗೆಳೆಯಿತು, ಕೋಣ ಕೆರೆಗೆಳೆಯಿತು ಎಂಬಂತಾಯಿತು.

ಶ್ರೀ ಕೋಣಂದೂರು ಲಿಂಗಪ್ಪ.—ಕರ್ನಾಟಕದಲ್ಲಿ ಸರಿಯಾಗಿದೆಯೋ?

ಶ್ರೀ ಎಸ್. ವಿ. ನಾಯಕ್.—ಸಿ ಎಫ್.ಡಿ, ಮತ್ತು ಸಿ.ಪಿ.ಎಂ. ಪಕ್ಷಗಳು ಕೂಡಿಕೊಂಡು ಮಂತ್ರಿಮಂಡಲ ರಚಿಸುವುದಕ್ಕೆ ಹೊರಟರೆ ಎಷ್ಟರ ಮಟ್ಟಿಗೆ ಮಂತ್ರಿಮಂಡಲ ರಚನೆಯಾಗುತ್ತದೆ; ನಾನು ಈ ಸಂದರ್ಭದಲ್ಲಿ ದೇವರನ್ನು ಪ್ರಾರ್ಥಿಸಿಕೊಳ್ಳುವುದೇನೆಂದರೆ ಮಾನ್ಯ ಜಯಪ್ರಕಾಶ್ ನಾರಾಯಣ್‌ರವರು ಇನ್ನು ಸ್ವಲ್ಪ ಕಾಲ ಬದುಕಬೇಕು ಎಂದು.

ನಂತರ ನಿಮ್ಮ ಚದುರಂಗದ ಆಟವನ್ನು ನೋಡಲಿಕ್ಕೆ ಬಹಳ ದಿವಸಗಳಿಂದ ಅವಕಾಶ ಸಿಕ್ಕಿರಲಿಲ್ಲ. ನಮ್ಮಲ್ಲಿ ಬಯಲಾಟ ಎಂದು ಆಡುತ್ತಾರೆ, ಅದನ್ನು ನೋಡುವುದಕ್ಕೆ ಬಹಳ ಚೆನ್ನಾಗಿರುತ್ತದೆ. ಚುನಾವಣೆಯ ಸಮಯದಲ್ಲಿ ನಮಗೆ ಮೂರು ವರ್ಷಗಳವರೆ ಅಧಿಕಾರ ಕೊಟ್ಟು ನೋಡಿ ಎಂದು ಕೇಳಿದ್ದಾರೆ. ಅಧಿಕಾರವೂ ಈಗ ನಿಮಗೆ ಸಿಕ್ಕಿದೆ. ರಾಷ್ಟ್ರದ ಬೃಹತ್ ಸಮಸ್ಯೆಗಳು ಏನೇ ಇರಲಿ ಅವುಗಳನ್ನು ಬಗೆಹರಿಸುತ್ತೇವೆನ್ನುವ ತತ್ವವನ್ನು ಪ್ರಣಾಳಿಕೆಯನ್ನು ಇಟ್ಟುಕೊಂಡಿದ್ದಾರೆ. ಆದರೆ ಅಮೇರಿಕಾದಂಥ ದೊಡ್ಡ ರಾಷ್ಟ್ರದಲ್ಲಿ ನೀಗ್ರೋಗಳು ಅಧ್ಯಕ್ಷರಾಗುವುದಕ್ಕೆ ಸಾಧ್ಯವಾಗಲಿಲ್ಲ. ಇಲ್ಲಿ ಆಚಾರ್ಯ ಕೃಪಾಲನಿಯವರಂಥ ಮಹಾಜನರ ಪೌರತ್ವ ಬೇಕಾಯಿತು.

ಶ್ರೀ ಕೋಣಂದೂರು ಲಿಂಗಪ್ಪ.—ಎಲ್ಲಾ ರಾಜ್ಯದ ಮುಖ್ಯಮಂತ್ರಿಗಳು ಹರಿಜನರು ಆಗಬೇಕು. ಪ್ರಧಾನಿ ಮತ್ತು ಅಧ್ಯಕ್ಷರೂ ಹಿಂದುಳಿದವರಾಗಬೇಕು ಎಂದು ಮಾಡಿ.

ಶ್ರೀ ಎಸ್. ವಿ. ನಾಯಕ್.—ಯಾರೇ ಆಗಲೀ, ನಿಷ್ಠೆ ಇರತಕ್ಕವರು ಪ್ರಜಾಪ್ರಭುತ್ವಕ್ಕೆ ಹೊಂದಿಕೊಂಡು ಕೆಲಸ ಮಾಡಬೇಕಾಗಿದೆ. ಹಿಂದುಳಿದವರಿಗೆ ಅವಕಾಶ ಸಿಕ್ಕಬೇಕು ಎನ್ನುವ ತಳಹದಿಯ ಮೇಲೆ ಸಮಾಜವಾದದ ಸಮಾಜ ರಚನೆಯಾಗಬೇಕು. ಅನುಕೂಲ ಇದ್ದವರಿಗೆ ಹೆಚ್ಚಿನ ಅವಕಾಶಗಳನ್ನು ಕೊಡಬಾರದು. 8 ಸಾವಿರ ರೂಪಾಯಿಗಳ ವಾರ್ಷಿಕ ಉತ್ಪನ್ನಕ್ಕಿಂತ ಹೆಚ್ಚು ಇರುವವರ ಮಕ್ಕಳಿಗೆ ಪ್ರಾತಿನಿಧ್ಯ ಕೊಡಬಾರದು ಎಂದು ಮಾಡಿದ್ದಾರೆ. ಇಂಥವರು ಬುಡಕಟ್ಟಿನ ಜಾತಿಗೆ ಸೇರಿದವರು ಎಂದು ನಮ್ಮ ಸರ್ಕಾರದವರು ಮಾಡಿದ್ದಾರೆ. ಇನ್ನು ಮುಂದೆ ಸುಖದ ದಿನಗಳು ಯಾವ ರೀತಿ ಇದೆ ಎನ್ನುವುದನ್ನು ನಾವು ಎದುರು ನೋಡಬೇಕಾಗಿದೆ. ಕೇಂದ್ರ ಸರ್ಕಾರದಲ್ಲಿ ನಮ್ಮ ಸರ್ಕಾರ ಇದ್ದಂಥ ಕಾಲದಲ್ಲಿ ತುರ್ತು ಪರಿಸ್ಥಿತಿ ಬಂದು ನಮ್ಮ ಸರ್ಕಾರದ ಸತ್ವ ಪರೀಕ್ಷೆಯಾಯಿತು. ದೇಶದ ಎಷ್ಟೋ ಮತಗಟ್ಟೆಗಳಲ್ಲಿ ಜನರು ಪ್ರಜಾಪ್ರಭುತ್ವದ ಹೊಣೆಯನ್ನು ಅರಿತು ಮತವನ್ನು ಚಲಾಯಿಸಿದ್ದಾರೆ. ಇದಕ್ಕೆ ಅವಕಾಶ ಮಾಡಿ ಕೊಟ್ಟಿದ್ದು ನಮ್ಮ ಸರ್ಕಾರದವರು ಎನ್ನುವುದನ್ನು ಮಾನ್ಯ ಸದಸ್ಯರು ಮರೆಯಬಾರದು. ತುರ್ತು ಪರಿಸ್ಥಿತಿ ಅಂದರೆ ಏನು ಎನ್ನುವುದನ್ನು ನಾವು ಸ್ಪಷ್ಟವಾಗಿ ಹೇಳಬೇಕಾಗಿದೆ. ಕಾಳ ಸಂತೆ ಕದೀಮರು ದೇಶದಲ್ಲಿ ಹುಟ್ಟಿ ದೇಶದ ಸಂಪತ್ತನ್ನು ಹಾನಿ ಮಾಡುತ್ತಿದ್ದರು. ತುರ್ತು ಪರಿಸ್ಥಿತಿ ಬರುವವರೆಗೆ ಇವರು ದೇಶದಲ್ಲಿ ಲೀಲಾಜಾಲವಾಗಿ ರಾಷ್ಟ್ರದ್ರೋಹದ ಕೆಲಸವನ್ನು ಮಾಡುತ್ತಿದ್ದರು. ತುರ್ತು ಪರಿಸ್ಥಿತಿ ಬಂದ ಮೇಲೆ, ಇವರನ್ನು ಬಂಧಿಸಲಾಗಿದೆ. ಒಟ್ಟಿನಲ್ಲಿ ನಮ್ಮ ಸರ್ಕಾರದವರು ತುರ್ತು ಪರಿಸ್ಥಿತಿಯಲ್ಲಿ ಹೆಚ್ಚಿನ ಅಭಿವೃದ್ಧಿ ಕೆಲಸಕಾರ್ಯಗಳನ್ನು ಮಾಡಿದ್ದಾರೆ ಎಂದು ಹೇಳಿ, ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ

†ಶ್ರೀ ದೊಡ್ಡತಿಮ್ಮಯ್ಯ (ಗೂಳೂರು). ಮಾನ್ಯ ಅಧ್ಯಕ್ಷರೇ ನಾನು ಈ ದಿವಸ ಮಾತನಾಡುವುದಕ್ಕೆ ತಯಾರಾಗಿ ಬಂದಿರಲಿಲ್ಲ. ಆದರೂ ಮಾನ್ಯ ಅಧ್ಯಕ್ಷರು ನನ್ನನ್ನು ಕರೆದಿದ್ದಾರೆ. ನಮ್ಮ ರಾಜ್ಯಪಾಲರ ಭಾಷಣದ ಮೇಲೆ ನಮ್ಮ ಅನೇಕ ಸ್ನೇಹಿತರುಗಳು ಮಾತನಾಡಿದ್ದಾರೆ. ಇದರ ಬಗ್ಗೆ ನನ್ನ ಅಭಿಪ್ರಾಯ ಏನು ಎನ್ನುವುದನ್ನು ಸ್ವಲ್ಪ ಸೂಕ್ಷ್ಮವಾಗಿ ತಿಳಿಸಲು ಬಯಸುತ್ತೇನೆ. ಪಾರ್ಲಿಮೆಂಟರಿ ಚುನಾವಣೆ ಇಂಡಿಯಾ ದೇಶದಲ್ಲಿ ಏನು ನಡೆದಿದೆ ಇದು ನನ್ನ ಭಾವನೆಯಲ್ಲಿ ಪ್ರಪಂಚದಲ್ಲಿ ಯಾವ ಪ್ರಜಾಪ್ರಭುತ್ವ ರಾಷ್ಟ್ರಗಳು ಇವೆಯೋ ಅಂಥ ರಾಷ್ಟ್ರಗಳಲ್ಲಿಯೂ ಇಂಥ ಮಹಾ ಚುನಾವಣೆಗಳು ನಡೆದಿಲ್ಲ. ಇಂಥ ಒಂದು ಚುನಾವಣೆಯಲ್ಲಿ ಜನಗಳು ಅಧಿಕಾರದಲ್ಲಿರತಕ್ಕಂಥ ಪಕ್ಷವನ್ನು ಅಧಿಕಾರ ತ್ಯಜಿಸುವ ಹಾಗೆ ವೋಟು ಕೊಟ್ಟಿದ್ದಾರೆ. ಯಾರ ಮಾತನ್ನೂ ಅವರು ಕೇಳಿಲ್ಲ. 11 ವರ್ಷಗಳ ನಮ್ಮ ಪ್ರಧಾನಿಯವರು ಅಧಿಕಾರದಲ್ಲಿದ್ದರೂ ಕೂಡ ಅವರು ಜನತೆಯ ಬೆಂಬಲವನ್ನು ಗಳಿಸದೆ ಸೋತಿದ್ದಾರೆ. ಇದು ಅತ್ಯಂತ ಚರಿತ್ರಾರ್ಹವಾದದು. ಏಕೆಂದರೆ, ಕಾಂಗ್ರೆಸ್ ಪಕ್ಷ ಇವತ್ತು ಲೋಕಸಭೆಯಲ್ಲಿ ವಿರೋಧ ಪಕ್ಷವಾಗಿ ಕುಳಿತಿದೆ. ಆದ್ದರಿಂದ ಕಾಂಗ್ರೆಸ್‌ನವರು ನಮ್ಮ ಆತ್ಮ ಶೋಧನೆ ಮಾಡಿಕೊಳ್ಳಬೇಕು. ಕಾಂಗ್ರೆಸ್ ಸರ್ಕಾರ ಅಲ್ಪಸ್ವಲ್ಪ ಕೆಲಸ ಮಾಡಿದೆ ಎನ್ನುವುದರಲ್ಲಿ ಯಾವ ಭಿನ್ನಾಭಿಪ್ರಾಯವಿಲ್ಲ. ಯಾವ ಸರ್ಕಾರ ಅಧಿಕಾರಕ್ಕೆ ಬಂದರೂ ಕೂಡ ಕಲಷ ಕೆಲಸಗಳನ್ನು ಮಾಡಬೇಕು. ಎಮರ್ಜೆನ್ಸಿಯ ಆವಶ್ಯಕತೆ ಇರಲಿಲ್ಲ ಎಂದು ನನ್ನ ಅಭಿಪ್ರಾಯ. ಏಕೆಂದರೆ ನಾನು 16 ವರ್ಷಗಳ ಕಾಲ ಲೋಕ ಸಭೆಯಲ್ಲಿ ಸದಸ್ಯನಾಗಿ ಕೆಲಸ ಮಾಡಿದ್ದೇನೆ. ಪಂಡಿತ್ ಜವಾಹರ್‌ಲಾಲ್ ನೆಹ್ರೂ ಅವರು ತಮ್ಮ ಕಾಲದಲ್ಲಿ

ಎಷ್ಟೋ ಬೃಹತ್ ಸಮಸ್ಯೆಗಳು ಬಂದಾಗಲೂ ತುರ್ತುಪರಿಸ್ಥಿತಿಯನ್ನು ತರಬೇಕಾಗಿತ್ತು, ತರಲಿಲ್ಲ. ಅದೇ ರೀತಿ ಸ್ವಾತಂತ್ರ್ಯ ಬಂದಮೇಲೆ ಕಮ್ಯುನಿಸ್ಟ್ ರಾಜಕಾರಣಗಳು ಅನೇಕ ಸಂದರ್ಭಗಳಲ್ಲಿ ಎಮರ್ಜನ್ಸಿಗೆ ಅವಕಾಶ ಮಾಡಿದರೂ ಸಹ ನೆಹರೂ ಅವರು ತುರ್ತು ಪರಿಸ್ಥಿತಿಯನ್ನು ಘೋಷಿಸಲಿಲ್ಲ. ಡಾಕ್ಟರ್ ಖಟ್ಜು ಅವರು ಹೋಂ ಮಿನಿಸ್ಟರ್ ಆಗಿದ್ದಾಗ ದೇಶದಲ್ಲಿ ತುರ್ತುಪರಿಸ್ಥಿತಿಯನ್ನು ತರಬೇಕಾಗಿತ್ತು, ಆದರೆ ಅವರೂ ತರಲಿಲ್ಲ. ನಾನು ಇವತ್ತು ಯಾವ ಒಂದು ಪಕ್ಷದ ದೃಷ್ಟಿಯಿಂದ ಮಾತನಾಡದೆ, ದೇಶದ ದೃಷ್ಟಿಯಿಂದ ಮಾತನಾಡುತ್ತಿದ್ದೇನೆ. ನೆಹ್ರೂ ಅವರು ಇದ್ದಾಗ, ಕಾರ್ಮಿಕರ ಚಳುವಳಿ ಸ್ಟೂಡೆಂಟ್ ಚಳುವಳಿ, ಇನ್ನೂ ಮುಂತಾದ ಚಳುವಳಿಗಳು ಆದುವು. ಆದರೂ ಆಗ ದೇಶದಲ್ಲಿ ತುರ್ತುಪರಿಸ್ಥಿತಿ ಬರಲಿಲ್ಲ. ಆದರೆ 19 ನೇ ಇಸವಿಯಲ್ಲಿ ಶ್ರೀಮತಿ ಇಂದಿರಾಗಾಂಧಿಯವರು ತಮ್ಮ ಸ್ಥಾನದ ಭದ್ರತೆಗೋಸ್ಕರ ಅಲಹಾಬಾದ್ ಕೋರ್ಟ್ ತೀರ್ಮಾನ ಮಾಡಿದನಂತರ ತುರ್ತು ಪರಿಸ್ಥಿತಿಯನ್ನು ಘೋಷಣೆ ಮಾಡಿದರು. ಆಗ ದೇಶದಲ್ಲಿ ಯಾವ ಚಳುವಳಿಯೂ ಪ್ರಾರಂಭವಾಗಿರಲಿಲ್ಲ, ಬೃಹತ್ ಚಳುವಳಿಗಳೂ ನಡೆಯಲಿಲ್ಲ. ನಾವು ನಿಜವಾದ ಸಂಗತಿಯನ್ನು ನೋಡಿ ಮಾತನಾಡಬೇಕು.

ನಾನು ಇಲ್ಲಿ ಮಾತನಾಡಿದಂಥ ಅನೇಕ ಸದಸ್ಯರುಗಳ ಭಾಷಣವನ್ನು ಕೇಳಿದ್ದೇನೆ. ಎಮರ್ಜನ್ಸಿಯಲ್ಲಿ ಎಷ್ಟರಮಟ್ಟಿಗೆ ನಿರಪರಾಧಿಗಳನ್ನು ಅನ್ಯಾಯವಾಗಿ ಶಿಕ್ಷೆಗೆ ಗುರಿ ಮಾಡಿದ್ದಾರೆ ಎಂದರೆ ಈ ಎಮರ್ಜನ್ಸಿಯಲ್ಲಿ ಮಾಡಿರತಕ್ಕ ಅನ್ಯಾಯಗಳನ್ನು ಇಂಡಿಯಾದೇಶದ ಜನಗಳು ಇನ್ನು ಹತ್ತು ವರ್ಷಗಳವರೆಗೆ ಮರೆಯಲಿಕ್ಕೆ ಸಾಧ್ಯವಿಲ್ಲ. ಇವರು ಏನೇನು ಒಳ್ಳೆಯ ಕೆಲಸಗಳನ್ನು ಮಾಡಿದ್ದಾರೆ ಅವುಗಳೆಲ್ಲವೂ ಇವರು ಮಾಡಿರತಕ್ಕ ಅನ್ಯಾಯದಲ್ಲಿ ಮುಚ್ಚಿ ಹೋಗಿವೆ. ನಮ್ಮ ಸ್ನೇಹಿತರನೇಕರು ಹರಿಜನ ಗಿರಿಜನರಿಗೆ ಹಿಂದುಳಿದವರಿಗೆ, ಬ್ಯಾಕ್‌ವರ್ಡ್ ಕ್ಲಾಸ್ ಕಮಿಷನ್ ಎಂದು ಮಾಡಿ ಬಹಳ ಸಹಾಯ ಮಾಡಿದ್ದಾರೆ ಎಂದು ಹೇಳಿದರು. ಕಳೆದ 30 ವರ್ಷಗಳಲ್ಲಿ ಹರಿಜನಗಿರಿಜನರು ಏನಾದರೂ ಆರ್ಥಿಕವಾಗಿ ಮುಂದುವರಿದಿದ್ದಾರೆಯೇ, ಏನಾದರೂ ನಿರ್ದಿಷ್ಟವಾದ ನೀತಿಯನ್ನು ಸರ್ಕಾರದವರು ಹಾಕಿಕೊಂಡಿದ್ದಾರೆಯೇ? ಹರಿಜನರು ಆರ್ಥಿಕವಾಗಿ ಮುಂದುವರಿಯಲು ಸರ್ಕಾರದವರು ಏನು ಮಾಡಿದ್ದಾರೆ ಎಂದು ನಾನು ಕೇಳುತ್ತೇನೆ.

ಹರಿಜನ ಗಿರಿಜನರಿಂದ ಓಟು ಗಿಟ್ಟಿಸುವುದಕ್ಕೋಸ್ಕರವಾಗಿ ಅವರು ಸಣ್ಣಪುಟ್ಟ ಸಹಾಯ ಕೊಟ್ಟು ಈ ರೀತಿ ಮಾಡುತ್ತಾರೆ. ಅವರ ಮುಖಂಡರನ್ನು ಕರೆಸಿ ನಿಮ್ಮ ಹರಿಜನಗಿರಿಜನರಿಂದ ನೀವು ಓಟು ಕೊಡಿಸಬೇಕು ಎಂದು ಹೇಳುತ್ತಾರೆ. ಹೆಚ್ಚು ಓಟುಗಳು ಇವರಿಂದಲೇ ಗಿಟ್ಟಿಸುವುದಕ್ಕೋಸ್ಕರ ಈ ರೀತಿ ವಂಚನೆ ಮಾಡುತ್ತಿದ್ದಾರೆ. ಆರ್ಥಿಕ ಅಭಿವೃದ್ಧಿಗೆ ಯಾವ ಒಂದು ನಿರ್ದಿಷ್ಟವಾದ ಕಾರ್ಯಕ್ರಮವನ್ನೂ ಹಾಕಿಕೊಂಡಿಲ್ಲ. ಹರಿಜನ ಗಿರಿಜನ ಮಾತ್ರ ದುರ್ಬಲ ವರ್ಗದವರನ್ನು ದೀರ್ಘಕಾಲ ವಂಚಿಸಲು ಸಾಧ್ಯವಿಲ್ಲ. ಹರಿಜನ-ಗಿರಿಜನರ ಉದ್ಧಾರ ಕಾರ್ಯ ಸಾಮೂಹಿಕ ಉದ್ಧಾರ ಕಾರ್ಯ ಇದುವರೆಗೂ ನಡೆದಿಲ್ಲ ಎಂದು ಹೇಳುತ್ತೇನೆ. ಒಂದು ವೇಳೆ ಈ ಬಗ್ಗೆ ಒಂದು ನಿರ್ದಿಷ್ಟವಾದ ಕಾರ್ಯಕ್ರಮ ಹಾಕಿಕೊಂಡಿದ್ದರೆ, ಏನಾದರೂ ಉದ್ಧಾರ ಕಾರ್ಯ ನಡೆದಿದ್ದರೆ ಹರಿಜನರಲ್ಲಿ ಎಷ್ಟು ಮಂದಿ ಶ್ರೀಮಂತರಿದ್ದಾರೆ ಹೇಳಿ. ಹರಿಜನ-ಗಿರಿಜನರಿಗೆ ಸೈಟುಗಳನ್ನೇನೋ ಕೊಟ್ಟಿದ್ದೀರಿ, ಇಲ್ಲ ಎಂದು ಹೇಳುವುದಿಲ್ಲ. ಆ ಸೈಟುಗಳನ್ನು ಯಾವ ಕಡೆ ಕೊಟ್ಟಿದ್ದೀರಿ ಎಂದರೆ ಎಲ್ಲೋ ಒಂದು ಕೊಟ್ಟಿದ್ದೀರಿ ಬೇಕಾದ ಕಡೆ ಕೊಟ್ಟಿಲ್ಲ. ಏತಕ್ಕೆಂದರೆ ಈ ಬಗ್ಗೆ ಏನಾದರೂ ಶ್ರೀಮಂತರ ಜಮೀನುಗಳನ್ನು ಬಿ ಡಿ ಎ. ಅಕ್ವೈರು ಮಾಡಿಕೊಂಡರೆ ಅವರಿಗಿಂತ ದೊಡ್ಡ ಆಫೀಸರುಗಳನ್ನು ಕ್ಯಾನ್ಸಲ್ ಮಾಡಿಸಿಕೊಳ್ಳುತ್ತಾರೆ ಅಂತ ತಿಳಿದುಕೊಂಡು ಬಿಟ್ಟು ಅಂಥಾವರ ಜಮೀನುಗಳು ಹತ್ತಿರದಲ್ಲಿದ್ದರೂ ಕೂಡ ಅಕ್ವೈರ್ ಮಾಡುವುದಿಲ್ಲ. ದೂರದಲ್ಲಿರುವ ಜಮೀನುಗಳನ್ನು ಅಕ್ವೈರ್ ಮಾಡಿಕೊಂಡು ಅವರಿಗೆ ಸೈಟುಗಳನ್ನು ಕೊಟ್ಟಿದ್ದೀರಿ. ಈರೀತಿ ಬರೆ ಸೈಟು ಕೊಟ್ಟರೆ ಆರ್ಥಿಕ ಪರಿಸ್ಥಿತಿ ಉತ್ತಮವಾಗುತ್ತದೆಯೇ ಎಂದು ನಾನು ಕೇಳುತ್ತೇನೆ. ಇನ್ನು ಮಾನ್ಯ ಮುಖ್ಯ ಮಂತ್ರಿಗಳಾದ ಶ್ರೀಮಾನ್ ದೇವರಾಜ್ ಅರಸ್‌ರವರು ಹರಿಜನರಿಗೆ ಕೊಡಬೇಕಾದಂಥಾ 18 ಪರ್ಸೆಂಟೇಜ್ ರಿಸರ್ವೇಷನ್ ಏನು ಇದೆ ಅದನ್ನು ಕೊಟ್ಟಿದ್ದೇವೆ ಅಂತ ಹೇಳುತ್ತಾರಲ್ಲ, ಇದು ಸರಿಯೇ. ಶ್ರೀಮಾನ್ ದೇವರಾಜ್ ಅರಸ್‌ರವರು ಛಾಂಪಿಯನ್ ಆಫ್ ಹರಿಜನ್ಸ್ ಅಂಡ್ ಗಿರಿಜನ್ಸ್ ಅಂಡ್ ಅದರ್ ಮೈನಾರಿಟೀಸ್. ಇದರಲ್ಲಿ ಎಷ್ಟರಮಟ್ಟಿಗೆ ಸತ್ಯವಿದೆ ಅನ್ನುವುದನ್ನು ಹೇಳುತ್ತೇನೆ. ಶ್ರೀಮಾನ್ ದೇವರಾಜ್ ಅರಸ್‌ರವರು ತಾವು ಅಧಿಕಾರದಲ್ಲಿರುವುದಕ್ಕೋಸ್ಕರವಾಗಿ, ತಮ

ಅಧಿಕಾರವನ್ನು ಪರಂಪರೆಯಾಗಿ ಉಳಿಸಿಕೊಳ್ಳುವುದಕ್ಕೋಸ್ಕರವಾಗಿ ಈವೊತ್ತಿನ ದಿವಸ ಹರಿಜನರು, ಬ್ಯಾಕ್‌ವರ್ಡ್ ಕ್ಲಾಸ್ ಮತ್ತು ಮೈನಾರಿಟೀಸ್ ಅನ್ನುವ ಹೆಸರಗಳನ್ನು ಉಪಯೋಗಿಸಿಕೊಂಡಿದ್ದಾರೆಯೇ ಹೊರತು ಇದರಲ್ಲಿ ಇನ್ನಾವ ಉದ್ದೇಶವೂ ಇಲ್ಲ ಎಂದು ಹೇಳುತ್ತೇನೆ. ಇದು ಬರೇ ಒಂದು ಸ್ಟಂಟ್ ಎಂದು ಹೇಳುತ್ತೇನೆ. ಖಂಡಿತವಾಗಿಯೂ ಈ ಜನರಿಗೆ ಯಾವ ವಿಧವಾದ ಪ್ರಯೋಜನವೂ ಮುಟ್ಟಿಲ್ಲ ಎಂದು ಹೇಳುತ್ತೇನೆ. ಇದರಲ್ಲಿ ಉದ್ಧಾರ ಕೆಲವು ವ್ಯಕ್ತಿಗಳಿಗೆ ಆಗಿರಬಹುದು, ಇದರಲ್ಲಿ ಕೆಲವರು ಮಂತ್ರಿಗಳಾಗಿರಬಹುದು ಅಷ್ಟೇವಿನಾ ಇನ್ನೇನು ಉಪಯೋಗವಾಗಿಲ್ಲ. ನಮ್ಮ ಹರಿಜನರಲ್ಲೇ ತೆಗೆದುಕೊಳ್ಳಿ ಈ 5 ವರ್ಷದಲ್ಲಿ ಯಾರಾದರೂ ಉತ್ತಮವಾಗಿದ್ದರೆ, ನನ್ನಂಥಾವರು ಎಂ.ಎಲ್.ಎ. ಆಗಿರಬಹುದು, ಮತ್ತು ಇನ್ನು ಕೆಲವು ಸ್ನೇಹಿತರು ಮಂತ್ರಿಗಳಾಗಿ ಉತ್ತಮವಾಗಿರಬಹುದು. ಇನ್ನು ಬ್ಯಾಕ್‌ವರ್ಡ್ ಮತ್ತು ಮೈನಾರಿಟೀಸ್ ಬಗ್ಗೆ ಹೇಳುವುದಾದರೆ ಈ ಜನರು ಆರ್ಥಿಕವಾಗಿ ಯಾರೂ ಉದ್ಧಾರವಾಗಿಲ್ಲ. ಆದುದರಿಂದ ಹರಿಜನರು, ಬ್ಯಾಕ್‌ವರ್ಡ್ ಕ್ಲಾಸ್‌ನವರು ಮತ್ತು ಮೈನಾರಿಟೀಸ್‌ನವರು ಎಲ್ಲರೂ ಇದರಿಂದ ಉದ್ಧಾರವಾಗಿದ್ದಾರೆ ಎಂದು ತಿಳಿದುಕೊಂಡರೆ ಅದು ಸರಿಯಲ್ಲ, ಏತಕ್ಕೆಂದರೆ ಇದು ಬಹಳ ಕಷ್ಟದ ಕೆಲಸ. ಇವರ ಬಗ್ಗೆ ಏನಾದರೂ ಒಂದು ನಿರ್ದಿಷ್ಟವಾದ ಕಾರ್ಯಕ್ರಮ ಹಾಕಿಕೊಂಡು ಅವರ ಆರ್ಥಿಕ ಪರಿಸ್ಥಿತಿಯನ್ನು ಉದ್ಧಾರ ಮಾಡಿದ್ದೀರಾ ಏನೂ ಇಲ್ಲ. ಈ ಮಾತು ಸುಳ್ಳಾಗಿದ್ದರೆ. ಏನಾದರೂ ಇದ್ದರೆ ನನಗೆ ಶಿಕ್ಷೆ ಕೊಡಿ, ಬೇಡ ಅನ್ನುವುದಿಲ್ಲ.

ಇನ್ನು ನಿಮಗೆ ನಾನು ಒಂದು ಉದಾಹರಣೆ ಕೊಡುತ್ತೇನೆ. ಈ ಹಿಂದೆ 1972ನೇ ಇಸವಿಯಲ್ಲಿ ಅಸೆಂಬ್ಲಿ ಚುನಾವಣೆ ನಡೆದ ಮೇಲೆ ಚರ್ಮದ ಕೆಲಸ ಮಾಡುತ್ತಾ ಇರುವವರನ್ನು, ಮತ್ತು ಚಪ್ಪಲಿ ಹೊಲಿಯುವವರನ್ನು ನಾವು ಉದ್ಧಾರ ಮಾಡುತ್ತೇವೆ ಅಂತ ಹೇಳಿ ಅದಕ್ಕೋಸ್ಕರವಾಗಿ ಲೆದರ್ ಇಂಡಸ್ಟ್ರೀಸ್ ಡೆವಲಪ್‌ಮೆಂಟ್ ಬೋರ್ಡ್ ಒಂದನ್ನು ಮಾಡುತ್ತಿದ್ದೇವೆ ಅಂತ ಹೇಳಿ ಅದರ ಬಗ್ಗೆ ಒಂದು ಬೋರ್ಡ್ ಸ್ಥಾಪನೆ ಮಾಡಿದರು. ಆ ಆಫೀಸು ನನ್ನ ಮನೆಯ ಮಹಡಿ ಮೇಲೆ ಇದೆ ನನಗೆ ಆದರಿಂದ ಬಾಡಿಗೆ ಬರುತ್ತಾ ಇದೆ, ಆ ಛೇರ್ಮನ್‌ಗೆ ಪ್ರತಿ ತಿಂಗಳೂ ಕೂಡ ಸಂಬಳ ಬರುತ್ತಾ ಇದೆ. ಇದು ಸ್ಥಾಪನೆಯಾಗಿ 5 ವರ್ಷ ಆಯಿತು, ಅದರೆ ಇದುವರೆಗೇ ಆಗಲಿ ಯಾರಿಗಾದರೂ ಮೂರು ಕಾಸು ಕೊಟ್ಟಿದ್ದಾರೆಯೇ ಕೇಳಿ ಇಂಥಾ ಬೋಗಸ್ ಸ್ಕೀಂಗಳನ್ನು ಮಾಡಿ ಜನಗಳ ಕಣ್ಣಿಗೆ ಮಣ್ಣು ಎರಚಿ ಇಂಥಾ ಕೆಲಸ ಮಾಡುತ್ತಿದ್ದಾರಲ್ಲಾ ಇದು ಸರಿಯೇ ಇದರಲ್ಲಿ ಕೆಲಸ ಮಾಡುವಂಥಾ ಹರಿಜನ ಲೀಡರ್ ಏನು ಇದ್ದಾರೋ ಅವರಿಗೆ ಮಂಕುಬೂದಿ ಎರಚಿ ಈ ಕೆಲಸ ಮಾಡುತ್ತಿದ್ದಾರಲ್ಲಾ ಇದರಲ್ಲಿ ಎಷ್ಟರ ಮಟ್ಟಿಗೆ ನ್ಯಾಯ ಇದೆ ಅನ್ನುವುದನ್ನು ತಾವೇ ಯೋಚನೆ ಮಾಡಿ. ತಮಗೆ ಇನ್ನೂ ಒಂದು ಉದಾಹರಣೆ ಕೊಡುತ್ತೇನೆ ಇವರು ಸಂಕೇಶ್ವರ ಎಲೆಕ್ಷನ್‌ಗೆ ಮಾನ್ಯ ಮುಖ್ಯಮಂತ್ರಿಗಳು ಬಂದಾಗ ಅಲ್ಲಿ ಮುಖಂಡರನ್ನು ಕರೆಸಿ ಚುನಾವಣೆಯಲ್ಲಿ ಗಿರಿಜನರಿಗೋಸ್ಕರವಾಗಿ ಅವರ ಆರ್ಥಿಕ ಪರಿಸ್ಥಿತಿ ಉತ್ತಮ ಪಡಿಸುವುದಕ್ಕೋಸ್ಕರವಾಗಿ ಈ ರೀತಿ ಲೆದರ್ ಬೋರ್ಡ್ ಒಂದನ್ನು ಮಾನ್ಯ ಮುಖ್ಯಮಂತ್ರಿಗಳು ರಚನೆ ಮಾಡಿದ್ದಾರೆ ಅಂತ ಆ ಜನರಿಗೆ ಹೇಳಿ ಅಂತ ಹೇಳಿದ್ದಾರೆ. ಯಾರನ್ನಾದರೂ ಕೇಳಿ. ಅದರಿಂದ ಇದುವರೆಗೆ ಯಾರಿಗಾದರೂ ಕೂಡ ಅನುಕೂಲವಾಗಿದೆಯೇ ಅಂತ ಕೇಳಿ. ಯಾರಿಗೂ ಕೂಡ ಅನುಕೂಲವಾಗಿಲ್ಲ. ಈ ಆಫೀಸು ನಮ್ಮ ಮನೆಯಲ್ಲಿ ಇದ್ದುದಕ್ಕೆ ನನಗೇನೋ ಬಾಡಿಗೆ ಬರುತ್ತಾ ಇದೆ, ಒಂದು ವೇಳೆ ಈ ಆಫೀಸು ನನ್ನ ಮನೆಯಲ್ಲಿ ಇಲ್ಲದಿದ್ದರೂ ಕೂಡ ಬೇರೆ ಇನ್ನೊಬ್ಬರಿಗೆ ಕೊಟ್ಟಿದ್ದರೂ ಬಾಡಿಗೆ ಬರುತ್ತಿತ್ತು. ಒಟ್ಟಿನಲ್ಲಿ ಈಗ ನನಗೆ ಇದರಿಂದ ಬಾಡಿಗೆ ಬರುತ್ತಾ ಇದೆ ಮತ್ತು ಈ ಛೇರ್ಮನ್‌ರವರಿಗೂ ಪ್ರತಿ ತಿಂಗಳು ಸಂಬಳ ಬರುತ್ತಾ ಇದೆ. ಮೊದಲು ಈ ಬೋರ್ಡ್‌ಗೆ ಶ್ರೀ ದುಗ್ಗಪ್ಪನವರು ಛೇರ್ಮನ್ ಆಗಿದ್ದರು. ಅನಂತರ ಒಬ್ಬರು ಮಾಜಿ ಎಂ.ಎಲ್.ಎ. ದಾನಪ್ಪ ಅನ್ನುವವರು ಛೇರ್ಮನ್ ಆದರು. ಅವರಿಗೆ ತಿಂಗಳಿಗೆ 1500 ರೂಪಾಯಿ ಸಂಬಳ, ಇದಲ್ಲದೆ ಒಂದು ಕಾರ್ ಮತ್ತು ಅವರಿಗೆ ಡಿ.ಎ ಟಿ.ಎ. ಇವೆಲ್ಲಾ ಬರುತ್ತಾ ಇತ್ತು, ಅನಂತರ ಈ ಬೋರ್ಡ್‌ಗೆ ಶ್ರೀಮಾನ್ ಮಲ್ಲಿಕಾರ್ಜುನ ಖಾರ್ಗೆಯವರು ಬಂದರು ಅವರನ್ನು ಈಗ ವಿದ್ಯಾಮಂತ್ರಿಗಳನ್ನಾಗಿ ಮಾಡಿದ್ದಾರೆ. ಮಾನ್ಯ ಕೈಗಾರಿಕಾ ಮಂತ್ರಿಗಳಲ್ಲಿ ನಾವು 4–5 ಸಾರಿ ಹೋಗಿ ರಿಕ್ವೆಸ್ಟ್ ಮಾಡಿಕೊಂಡವು. ಈ ರೀತಿ ಇದ್ದರೆ ಇದು ಏತಕ್ಕೆ ಇರಬೇಕು; ಏನಾದರೂ ಓಟು ಪಡೆದುಕೊಳ್ಳುವುದಕ್ಕೋಸ್ಕರವಾಗಿ ಈ ರೀತಿ ಮಾಡಿದ್ದೀರಾ ಎಂದು ಕೇಳಿದೆವು ಇಷ್ಟೇ

ಅಲ್ಲದೆ ಹರಿಜನರ ಉದ್ಧಾರಕ್ಕೋಸ್ಕರವಾಗಿ ಕೆಲವು ಕಾರ್ಪೊರೇಷನ್‌ಗಳನ್ನು ರಚನೆ ಮಾಡಿದ್ದಾರೆ. ಅಲ್ಲೂ ಕೂಡ ಏನು ಕೆಲಸವೂ ನಡೆಯುತ್ತಾ ಇಲ್ಲ. ಈ ರೀತಿಯಾಗಿ ಇಂಥ ಬೋಗಸ್ ಸ್ಕೀಂಗಳನ್ನು ಮಾಡಿ ಜನರ ಕಣ್ಣಿಗೆ ಮಣ್ಣು ಎರಚುವಂಥಾ ಕೆಲಸ ಮಾಡುವುದು ಸರಿಯೇ? ಇದರಲ್ಲಿ ಹೊಸದಾಗಿ ಅನೇಕ ಬ್ಯಾಕ್‌ವರ್ಡ್‌ಗೆ ಸೇರಿದ ಅನೇಕ ಮುಖಂಡರುಗಳು ಇದ್ದಾರೆ. ಅವರು ಇವರ ಹೆಸರನ್ನು ಹೇಳಿಕೊಂಡು ಅವರಿಂದ ಓಟು ಪಡೆದುಕೊಂಡಿರುವುದರಿಂದ ಈವೊತ್ತು ಕರ್ನಾಟಕ ರಾಜ್ಯದಲ್ಲಿ ಲೋಕಸಭಾ ಕ್ಷೇತ್ರದಲ್ಲಿ 26 ಸೀಟುಗಳನ್ನು ಕಾಂಗ್ರೆಸ್‌ನವರು ಗೆದ್ದು ಬಂದಿದ್ದಾರೆಯೋ ಹೊರತು ಇದರಲ್ಲಿ ಇನ್ನಾವ ಗುಟ್ಟು ಇಲ್ಲ. ಅವರು ನನಗೆ ಇದರ ಬಗ್ಗೆ ಎಷ್ಟು ಹೇಳಿದರೂ ಕೂಡ ನಂಬುವುದಿಲ್ಲ. ನನಗೆ ಗೊತ್ತಿದೆ ಈ ಕಾಂಗ್ರೆಸ್ಸಿನಲ್ಲಿ ನಂಬಿಕೆ ಇಲ್ಲದೇ ಇರುವುದರಿಂದ ಮೊದಲು ಈ ಕಾಂಗ್ರೆಸ್ ಅನ್ನು ಬಿಟ್ಟೆ. ಅದರು ಇದರ ಬಗ್ಗೆ ಕಥೆ ಬೇಕಾದಷ್ಟು ಇದೆ. ಆದರೂ ಕೂಡ ಈ ಕಾಂಗ್ರೆಸ್ ಗುಟ್ಟನ್ನು ಇನ್ನು ಹೆಚ್ಚು ಹೇಳುವುದಕ್ಕೆ ಬಯಸುವುದಿಲ್ಲ. ಏತಕ್ಕೆಂದರೆ ಈ ಬಗ್ಗೆ ಒಂದು ವಿಚಾರವನ್ನು ತಮ್ಮ ಮುಂದೆ ಇಡಲು ಬಯಸುತ್ತೇನೆ ನಾನು ಒಬ್ಬ ಬಡ ಮನುಷ್ಯ, ಅಂಥಾದ್ದರಲ್ಲಿ ಇವರು ನನ್ನ ಮೇಲೆ ಒಬ್ಬನನ್ನು ಸಿ.ಐ.ಡಿ. ಇಟ್ಟಿದ್ದಾರು. ಈ ರೀತಿ ಮಾಡುವುದು ಏತಕ್ಕೆ ಸ್ವಾಮಿ? ನಾನು ಒಬ್ಬರ ವಿರುದ್ಧ ಸ್ಪೈನು ಹಾಕ ಬೇಕು ಎಂದು ಹೇಳಿದರು ಅದಕ್ಕೆ ನಾನು ನಿರಾಕರಿಸಿದೆ, ಅದಕ್ಕೆ ನನ್ನ ಮೇಲೆ ಸಿ.ಐ ಡಿ. ಹಾಕಿದ್ದರು 1942ನೇ ಇಸವಿಯಲ್ಲಿ ನಾನು ಜೈಲಿಗೆ ಹೋಗಿದ್ದೇನೆ. ನನ್ನ ಆಸ್ತಿ ನನಗೆ ಏನು ಇದೆ. ಎಂಬುದನ್ನು ವಿಚಾರಣೆ ಮಾಡಬಹುದು. ಯಾರ ಕೈಯಲ್ಲಾದರೂ ಬೇಕಾದರೆ ಇನ್‌ವೆಸ್ಟಿಗೇಟ್ ಮಾಡಿಸಲಿ. ಈ ಪವರ್ ಪಾಲಿಟಿಕ್ಸ್ ವಿಚಾರ ನನಗೆ ಗೊತ್ತಿಲ್ಲ. ಗೊತ್ತಿಲ್ಲದೇ ಇರುವಂಥಾ ಮನುಷ್ಯನಿಗೆ ಈ ರೀತಿಯಾಗಿ ಕಿರುಕುಳ ಕೊಟ್ಟಿದ್ದಾರೆ. ಇಂಥಾವರು ದೇಶದ ನಾಯಕರು ಎಂದು ಹೇಳಿಕೊಳ್ಳುತ್ತಾರೆ ಈಗ ಅನೇಕ ಕಾರ್ಪೊರೇಷನ್‌ಗಳಿಗೆ 30-40 ಜನ ಛೇರ್ಮನ್ ಆಗಿ ಏನು ಮಾಡಿದ್ದಾರೆ, ಅವರಿಗೆಲ್ಲಾ ಏನು ಅಧಿಕಾರ ಕೊಟ್ಟಿದ್ದಾರೆ ಹೇಳಲಿ, ಆಯಾಯ ಜಾತಿಗೆ ಒಂದೊಂದು ಛೇರ್ಮನ್ ಕೊಟ್ಟರೆ ಅವರು ಉಧ್ಧಾರವಾಗುತ್ತಾರೇ ಅವರ ಕೋಮು ಏನೂ ಉದ್ಧಾರವಾಗಿಲ್ಲ. ಈ ಒಂದು ವರ್ಷದಲ್ಲಿ ಇದರಿಂದ ಎಷ್ಟು ಜನ ಉದ್ಧಾರವಾಗಿದ್ದಾರೆ ಅನ್ನುವುದನ್ನು ತೋರಿಸಲಿ. ಈ ಚುನಾವಣಾ ಕಾಲದಲ್ಲಿ ಏನು ಒಂದು ಸಿದ್ಧಾಂತವನ್ನು ಇಟ್ಟುಕೊಂಡು ಗೆದ್ದು ಬಂದರೋ ಆ ಜನರನ್ನು ಏನೋ ಉದ್ಧಾರ ಮಾಡುತ್ತೇವೆ ಅಂತ ಹೇಳಿ ಅವರಿಂದ ಓಟು ಗಿಟ್ಟಿಸಿಕೊಂಡು ಗೆದ್ದು ಬಂದರೋ ಅವರು ಹೇಳಿದ ಸಿದ್ಧಾಂತಗಳೆಲ್ಲಾ ಒಂದು ದೊಡ್ಡ ಪುಸ್ತಕದಲ್ಲಿ ಇದೆ. ಅದು ಬೈಬಲ್ ತರಹ ಒಂದು ದೊಡ್ಡ ಪುಸ್ತಕದಲ್ಲಿ ಇದೆ. ನಾನು 1952ನೇ ಇಸವಿಯಲ್ಲಿ ಪಾರ್ಲಿಮೆಂಟಿನಲ್ಲಿ ಇದ್ದಾಗ ಶ್ರೀಮಾನ್ ಅನಂತಶಯನಂ ಅಯ್ಯಂಗಾರ್‌ರವರು What is this? except brahmins all are backwards ಅಂತ ಕೇಳಿದರು. ಅದಕ್ಕೆ ನಾನು ಹೇಳಿದೆ ಅವಾಗ ಮೈಸೂರಿನಲ್ಲಿ ದಿವಾನರಾಗಿ ಮಾಧವರಾವ್ ಇದ್ದರು. ಅವರು ಏನು ಮಾಡಿದರೋ ನನಗೆ ಗೊತ್ತಿಲ್ಲ ಅಂತ ಹೇಳಿದೆ. ಈ ರೀತಿಯಾಗಿ ಜನಗಳ ಕಣ್ಣಿಗೆ ಮಣ್ಣು ಎರಚುವಂಥಾ ಕೆಲಸ ಮಾಡಬಾರದು. ಹರಿಜನ ಬಗ್ಗೆ ಮತ್ತು ಬ್ಯಾಕ್‌ವರ್ಡ್ ಕ್ಲಾಸ್ ಬಗ್ಗೆ ಏನು ಮಾತನಾಡಿದ್ದಾರೆ ದೇಶದ ಹಿತದೃಷ್ಟಿಯಿಂದ, ಬಡವರ ಹಿತದೃಷ್ಟಿಯಿಂದ ಅದನ್ನು ವಿಚಾರಣೆ ಮಾಡುವುದು ನಾಯಕರ ಕರ್ತವ್ಯ. ಈವೊತ್ತು ಜನತಾ ಪಕ್ಷ ಅಧಿಕಾರಕ್ಕೆ ಬಂದಿದೆ. ನಾನಂತೂ ಕನಸ್ಸಿನಲ್ಲಿ ಕಂಡಿರಲಿಲ್ಲ. ಹರಿಜನರನ್ನು ಉದ್ಧಾರ ಮಾಡುವ ಬಗ್ಗೆ, ಬಡವರನ್ನು ಉದ್ಧಾರ ಮಾಡುವ ಬಗ್ಗೆ ಈ ಕಾಂಗ್ರೆಸ್ಸಿನವರು ಏನು ತಪ್ಪು ಮಾಡಿದ್ದಾರೋ ಅದನ್ನು ಜನತಾ ಸರ್ಕಾರ ಸರಿಪಡಿಸುತ್ತದೆ ಅಂತ ನನ್ನ ನಂಬಿಕೆ. ಆ ಬಗ್ಗೆ ಜನತಾ ಸರ್ಕಾರ ಸರಿಪಡಿಸಲೇ ಬೇಕು. ಅವರು ಇವರಿಗೆ ಆಗಿರುವ ಅನ್ಯಾಯವನ್ನು ಸರಿಪಡಿಸದೇ ಹೋದರೆ ಅವರು ಈ ದಿನ ಏನು ಆಡಳಿತಕ್ಕೆ ಬಂದಿದ್ದಾರೋ ಅದೂ ಕೂಡ ಹೋಗುತ್ತದೆ. ಈ ಪ್ರಜಾಪ್ರಭುತ್ವದಲ್ಲಿ ಜನತೆಗೆ ಹಿತವಾಗಿರತಕ್ಕಂಥಾ ಸರ್ಕಾರ ಅವರಿಗೆ ಅನುಕೂಲಗಳನ್ನು ಮಾಡಿಕೊಡದೇ ಹೋದರೆ ಅದೂ ಕೂಡ ಹೋಗಲೇಬೇಕಾಗುತ್ತದೆ. ಈವೊತ್ತು ಮೊರಾರ್ಜಿ ದೇಸಾಯಿಯವರು ಪ್ರಧಾನ ಮಂತ್ರಿಗಳಾಗಿರಬಹುದು. ಶ್ರೀಮತಿ ಇಂದಿರಾಗಾಂಧಿಯವರು ತಾವು ಅಧಿಕಾರದಲ್ಲಿ ಇರುವುದಕ್ಕೆ ಎಷ್ಟೋ ಜನರನ್ನು ಜೈಲಿನಲ್ಲಿ ಇಟ್ಟು ನಾನು 10 ವರ್ಷ ಆಳಿದ ಮೇಲೆ ಮುಂದೆ ನನ್ನ ಮಗ ಈ ರಾಜ್ಯವನ್ನು ಆಳಬೇಕು ಅನ್ನುವ ಭಾವನೆ ಮಾಡಿಕೊಂಡಿದ್ದಕ್ಕೆ ಯಾವರೀತಿ ಆಯಿತೋ ಅದೇ ರೀತಿ ಇವರಿಗೂ ಆಗುತ್ತದೆ. ಅವರೂ ಸಹ 5 ವರ್ಷ ಕೂಡ ಇರುವುದಕ್ಕಾಗುವುದಿಲ್ಲ. ಈ ಬಗ್ಗೆ ಜನತಾ ಪಕ್ಷದವರು ಸರಿಯಾದ ಹಾದಿ

ಯಲ್ಲಿ ಹೋಗಲೇ ಬೇಕು. ಜನತೆಗೆ ಅನುಕೂಲಕರವಾದ ಕೆಲಸ ಅವರು ಮಾಡಲೇ ಬೇಕು. ನಿಮಗೆ ಒಂದು ಉದಹರಣೆ ಹೇಳುವದಾದರೆ ಇಂಗ್ಲೆಂಡ್‌ನಲ್ಲಿ ಸೆಕೆಂಡ್ ವರ್ಲ್ಡ್ ವಾರ್ ಚರ್ಚಿಲ್ ಗೆದ್ದು ಬಂದ, ಅವನು ಆ ಯುದ್ಧವನ್ನು ಗೆದ್ದು ಬಂದಮೇಲೆ ಅಲ್ಲಿ ಎಲೆಕ್ಷನ್ ನಡೆಯಿತು. ಆ ಎಲೆಕ್ಷನ್‌ನಲ್ಲಿ ಚರ್ಚಿಲ್ ಮತ್ತು ಅಟಲಿ ಇಬ್ಬರೂ ಕೂಡ ಭಾಗವಹಿಸಿದ್ದರು. ಆ ಎಲೆಕ್ಷನ್ ಟೈಂನಲ್ಲಿ ಚರ್ಚಿಲ್ ಮತ್ತು ಅಟಲಿ ಇಬ್ಬರೂ ಪೋಲಿಂಗ್ ಭೂತ್‌ಗೆ ಹೋದಾಗ ಅವಾಗ ಜನರು ಏನು ಹೇಳಿದರು ಸ್ಟೀಸಿಯಸ್‌ಟು ಚರ್ಚಿಲ್ ವೋಟ್ ಫಾರ್‌ಲೇಬರ್ ಎಂದರೆ Don't won't to Churchill but vote for Atlee ಎಂದು ಹೇಳಿದರು. ಅವಾಗ ಯಾರೂ ಕೂಡ ಚರ್ಚಿಲ್‌ಗೆ ಓಟು ಕೊಡಲಿಲ್ಲ. ಅಟಲಿ ಗೆದ್ದು ಬಂದರು. ಹಾಗೆ ಈವೊತ್ತಿನ ದಿನಸ ಜನತಾಕ್ಕೆ ಓಟು ಕೊಟ್ಟು ಅಧಿಕಾರಕ್ಕೆ ತಂದಿದ್ದಾರೆ. ವಿವೇಚನೆಯಿಂದ ಕೂಡಿದ ಈ ಕಾಂಗ್ರೆಸ್ಸಿನವರು 25 ವರ್ಷದಲ್ಲಿ ಮಾಡಿರುವಂಥಾ ಒಳ್ಳೆಯ ಕೆಲಸಗಳು ಇದ್ದರೆ ಅವೆಲ್ಲವೂ ಈ 20 ತಿಂಗಳಲ್ಲಿ ಅಳಿಸಿಹೋಗಿದೆ. ಈ 20 ತಿಂಗಳಲ್ಲಿ ಎಷ್ಟೋ ಜನರಿಗೆ ಅನ್ಯಾಯವಾಗಿದೆ, ಎಷ್ಟೋ ಜನ ನಿರಪರಾಧಿಗಳನ್ನು ಅವರು ಹಿಂಸೆ ಮಾಡಿದ್ದಾರೆ. ಅಲ್ಲದೆ ಇದರಿಂದ ಎಷ್ಟೋ ಜನ ಹೆಂಗಸರೂ ಕೂಡ ಬಲಿಯಾಗಿದ್ದಾರೆ ಎಂದು ಹೇಳಬಯಸುತ್ತೇನೆ.

6-00 ಪಿ.ಎಂ.

ಅಧ್ಯಕ್ಷರೇ, ಇವೊತ್ತಿನ ದಿವಸ ಇವರೆಲ್ಲರೂ ಪಾಪ ಮಾಡಿದ್ದಾರೆಂದು ಹೇಳುವುದಿಲ್ಲ, ಅನೇಕ ಜನ ಒಳ್ಳೆಯವರು ಇದ್ದಾರೆ. ತುರ್ತು-ಪರಿಸ್ಥಿತಿಯಲ್ಲಿ ಇವರು ಮಾಡಿರುವಂತ ಪಾಪವನ್ನು ಜನತೆ 10 ವರ್ಷಗಳಾದರೂ ಮರೆಯುವುದಿಲ್ಲ. ಇನ್ನು ಫ್ಯಾಮಿಲಿ ಪ್ಲಾನಿಂಗ್ ಬಗ್ಗೆ ಕುಣಿಗಲ್ ತಾಲೋಕಿನಲ್ಲಿ ನಡೆದಂತ ಒಂದು ಘಟನೆಯನ್ನು ಈ ಸಂದರ್ಭದಲ್ಲಿ ತಿಳಿಸಲಿಕ್ಕೆ ಇಚ್ಛೆಪಡುತ್ತೇನೆ. ಒಬ್ಬ ಲಂಬಾಣಿ ಹುಡುಗ ತಾನು ಹಾರ್ಟಿಕಲ್ಚರ್ ಡಿಪಾರ್ಟ್‌ಮೆಂಟಿನಲ್ಲಿ ಟ್ರೈನಿಂಗ್‌ಗಾಗಿ ಅರ್ಜಿ ಹಾಕಲು ಜಾತಿ ಸರ್ಟಿಫಿಕೇಟಿನ ಅವಶ್ಯಕತೆ ಇದ್ದುದರಿಂದ ಅವನು ಕುಣಿಗಲ್ ತಾಲೋಕಿನ ತಹಸೀಲ್ದಾರರ ಬಳಿ ಹೋಗಿ ಕೇಳಿದಕ್ಕೆ, ತಹಸೀಲ್ದಾರರು ನೀನು ಫ್ಯಾಮಿಲಿ ಪ್ಲಾನಿಂಗ್ ಒಂದು ಕೇಸು ತೆಗೆದುಕೊಂಡು ಬಂದರೆ ರುಜು ಮಾಡಿ ಸರ್ಟಿಫಿಕೇಟ್ ಕೊಡುತ್ತೇನೆ ಎಂದು ಹೇಳಿದರಂತೆ. ಆ ಹುಡುಗನ ತಂದೆ ಮುದುಕ, ಅತನಿಗೆ ತಾಯಿ ಇಲ್ಲ ಅದ್ದರಿಂದ ನಮ್ಮ ಮನೆಯಲ್ಲಿ ಯಾರು ಇಲ್ಲ ನಾನು ಎಲ್ಲಿಂದ ತರಲಿ ಎಂದು ಹೇಳಿದನಂತೆ ಆತ ನಾಲ್ಕು ರೂಪಾಯಿ ಅಫೀಡವಿಟ್ ಕೊಟ್ಟು ಸರ್ಟಿಫೀಕೇಟ್ ತಂದಿದ್ದನು ಕೊನೆಗೆ ಅಪ್ಲಿಕೇಷನ್ ಹಾಕತಕ್ಕ ಕೊನೆಯ ತಾರೀಖು ಮುಗಿದು ಹೋಯಿತು ಅದರೂ ಅತನಿಗೆ ಸರ್ಟಿಫಿಕೇಟ್ ಸಿಕ್ಕಲಿಲ್ಲ ಅನಂತರ ನಾನೇ ಸ್ವತಹ ರಾಥೋಡ್ ರವರಿಗೆ ಈ ವಿಚಾರ ಹೇಳಿದೆ. ಆದರೆ ಅವರು ಬಹಳ ವಿಳಂಬವಾಗಿದೆ ಈಗ ಏನು ಮಾಡಲಿಕ್ಕೆ ಆಗುವುದಿಲ್ಲ ಎಂದು ಹೇಳಿದರು. ಇನ್ನು ನನ್ನ ರಿಲೇಷನ್ ಬಗ್ಗೆ ಹೇಳಬೇಕು ಎಂದರೆ ಇಬ್ಬರು ಆಸ್ಪತ್ರೆಯಲ್ಲಿ ಸೇರಿದ್ದರು, ಅದರಲ್ಲಿ ಒಬ್ಬರು ಸತ್ತು ಹೋದರು. ಇನೊಬ್ಬರು ಉತ್ತಮವಾಗಿದ್ದಾರೆ ಎಂದು ನಾನು ಡೆಲ್ಲಿಗೆ ಹೋಗಿದ್ದಾಗ ತಿಳಿಸಿದರು, ಅನಂತರ ಅವರು ಏನಾದರೂ ಎಂದು ತಿಳಿದಿಲ್ಲ. ಇವೊತ್ತು ಮುಸ್ಲಿಮರು ಸುಲ್ತಾನಪುರದಲ್ಲಿ 16 ಜನರು ಸತ್ತಿದ್ದಾರೆ, ಮಿರ್ಜಾಪುರದಲ್ಲಿ 83 ಜನರು ಸತ್ತಿದ್ದಾರೆ. ನೀವು ಪೇಪರ್ ಬಗ್ಗೆ ಸೆನ್ಸಾರ್ ಮಾಡಿದ್ದರಿಂದ ವಿಷಯ ಹೊರಕ್ಕೆ ಬರಲು ಸಾಧ್ಯವಾಗಲಿಲ್ಲ. ಇವೊತ್ತು ದಕ್ಷಿಣ ಭಾಗದಲ್ಲಿ ಯಾವ ತೊಂದರೆಯೂ ತುರ್ತುಪರಿಸ್ಥಿತಿ ಕಾಲದಲ್ಲಿ ನಡೆದಿಲ್ಲ ಎಂದು ತಾವು ಹೇಳಬೇಡಿ. ಸಾಕಷ್ಟು ಅನ್ಯಾಯ ನಡೆದಿದೆ ಇವೊತ್ತು ಮುಖ್ಯಮಂತ್ರಿಗಳು ಹೆಂಗಸರನ್ನು ಬರೀ ಬೆತ್ತಲೆಯಲ್ಲಿ ನಿಲ್ಲಿಸಿ ಥಳಿಸಿ ಎಂದು ಹೇಳಿದ್ದಾರೆ ಅಂಥ ನಾನು ಹೇಳುತ್ತಿಲ್ಲ ತಾವು ಏನು ಅನ್ಯಾಯ ನಡೆದಿದೆ ಅದರ ಬಗ್ಗೆ ಒಂದು ಎನಕ್ವಯಿರಿ ಮಾಡಿಸಿ. ಅದನ್ನು ನಮ್ಮ ಸರ್ಕಾರ ಮಾಡುವುದು ಬೇಡ, ನಾವು ಯಾವತ್ತು ಅಧಿಕಾರಕ್ಕೆ ಬರುತ್ತೇವೋ ಗೊತ್ತಿಲ್ಲ. ಇವೊತ್ತು ನಿಷ್ಪೆಯಿಂದ ಇರತಕ್ಕ ಕಾಂಗ್ರೆಸ್ಸ್‌ನವರು ಯಾವ ರೀತಿ ಅನ್ಯಾಯ ನಡೆಯುತ್ತಿದೆ ಎನ್ನುವುದರ ಬಗ್ಗೆ ಎನಕ್ವಯಿರಿ ಮಾಡಲಿಕ್ಕೆ ಹೋಗಿದ್ದೀರಾ, ಇಸ್ಮಾಯಿಲ್ ಸತ್ತ, ಮತ್ತೊಬ್ಬ ಸತ್ತ, ಯಾರೇ ಸಾಯಲಿ ಅದರ ಬಗ್ಗೆ ಸರಿಯಾದ ರೀತಿಯಲ್ಲಿ ಎನ್‌ಕ್ವಯಿರಿ ಮಾಡಿಸಿ ರಿಪೋರ್ಟ್ ಕೊಡಬೇಕಾದ್ದು ನಿಮ್ಮ ಕರ್ತವ್ಯ. ಆ ರೀತಿ ರಿಪೋರ್ಟ್ ಕೊಟ್ಟಿದ್ದರೆ ನಿಮಗೆ ತುಂಬಾ ಚಿರಋಣಿಗಳಾಗಿರುತ್ತಿದ್ದೆವು. ಇವೊತ್ತು ತಾವು ಎಮರ್ಜೆನ್ಸಿಯಲ್ಲಿ ಕೊಟ್ಟಿರತಕ್ಕ ಕಷ್ಟದ ಬಗ್ಗೆ ಜನತೆ

ಕ್ಷಮಿಸುವುದಿಲ್ಲ, ಏತಕ್ಕೆ ಓಟು ಕೊಟ್ಟಿದ್ದಾರೆ ಎಂದರೆ ಪೇಪರ್ ಸೆನ್ಸಾರ್ ಇದ್ದುದರಿಂದ ಜನತೆಗೆ ಏನು ಅನಾಹುತ ನಡೆದಿದೆ ಎನ್ನತಕ್ಕ ವಿಷಯ ಗೊತ್ತಿರಲಿಲ್ಲ. ತಾವು ಮಾಡಿರತಕ್ಕಂತಹ ಅನ್ಯಾಯಗಳು ಕರ್ನಾಟಕದ ಜನತೆಗೆ ಗೊತ್ತಾಗಿದ್ದರೆ, ತಾವು ಖಂಡಿತ ಎದೆ ತಟ್ಟಿಕೊಂಡು ಕರ್ನಾಟಕದಲ್ಲಿ ಗೆದ್ದಿದ್ದೇವೆ ಎಂದು ಹೇಳಿಕೊಳ್ಳುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. ನೀವು ನಿಜ ಸತ್ಯವಾಗಿದ್ದರೆ ಒಂದು ಎನಕ್ವಯಿರಿ ಕಮಿಟಿ ಮಾಡಿ, ತಾವು ಮಾಡಿಸತಕ್ಕಂಥಹ ಭ್ರಷ್ಟಾಚಾರಗಳ ಬಗ್ಗೆ, ಅನ್ಯಾಯಗಳ ಬಗ್ಗೆ ಬೇಕಾದರೆ ಒಂದು ಪಟ್ಟಿ ಮಾಡಿಕೊಡುತ್ತೇವೆ. ಜನತೆಯ ಕಣ್ಣಿಗೆ ತಾವು ಎಲ್ಲಿಯವರೆಗೆ ಮಣ್ಣನ್ನು ಎರಚುವುದಕ್ಕೆ ಸಾಧ್ಯವಾಗುತ್ತದೆ, ಅದು ತುಂಬಾ ದಿವಸ ಸಾಧ್ಯವಾಗುವುದಿಲ್ಲ. ತಮ್ಮ ಕೈಯಲ್ಲಿ ಸಾಧ್ಯವಾಗುವುದಾದರೆ ಮಾಡುತ್ತೇವೆ ಎಂದು ಹೇಳಿ, ಇಲ್ಲವಾದರೆ ಇಲ್ಲ ಎಂದು ಹೇಳಿ, ತಾವು ಸುಮ್ಮನೆ ಸುಳ್ಳನ್ನು ಹೇಳುವುದು ಕತೆ ಹೇಳಿದಂತೆ ಆಗುವುದು ಬೇಡ. ಇವೊತ್ತು ಕಾಂಗ್ರೆಸ್ ಸರ್ಕಾರ ಬಂದ ಮೇಲೆ ನಮ್ಮ ಹರಿಜನ ಬಾಂಧವರು ಎಷ್ಟು ಜನ ಕಂಟ್ರಾಕ್ಟರ್ ಇದ್ದಾರೆ. ಎಷ್ಟು ಜನ ಉತ್ತಮ ಆರ್ಥಿಕ ಸ್ಥಿತಿಯಲ್ಲಿ ಮುಂದೆ ಬಂದಿದ್ದಾರೆ. ಮಂತ್ರಿಗಳು ಯಾರು ಶ್ರೀಮಂತರಾಗಿದ್ದಾರೆ ಹೇಳಿ ನೋಡೋಣ. ಮಂತ್ರಿಗಳು ಏನಾದರೂ ಶ್ರೀಮಂತರಾಗಿದ್ದಾರೆ ಎಂದು ಹೇಳಿದರೆ ಅವರು ಲಂಚ ಹೊಡೆದಿದ್ದಾರೆ ಎಂದು ಹೇಳಬೇಕಾಗುತ್ತದೆ. ಅದರಿಂದ ರಾಜ್ಯಪಾಲರ ಭಾಷಣ ಹುರುಳಿಲ್ಲದ್ದು, ಸತ್ಯಕ್ಕೆ ದೂರವಾದ ವಿವರಗಳನ್ನು ಕೊಟ್ಟಿದ್ದಾರೆ. ಅದ್ದರಿಂದ ರಾಜ್ಯಪಾಲರ ವಂದನಾ ನಿರ್ಣಯವನ್ನು ನಾನು ಸಂಪೂರ್ಣವಾಗಿ ವಿರೋಧಿಸುತ್ತೇನೆ ಎಂದು ಹೇಳಿ ಇಷ್ಟು ಕಾಲ ಮಾತನಾಡಲು ಅವಕಾಶ ಕೊಟ್ಟಂತಹ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

MADAM SPEAKER.—Discussion on the Motion of Thanks is concluded. The Hon'ble Minister will reply tomorrow.

Now the House stands adjourned to meet again tomodrrow at 9.00 A M.

The House adjourned at Seven Minutes past Six of the Clock to meet again at Nine of the Clock on Thursday the 7th April 1977.

WD 6471—GPB—550—11-7-1977